ರೀತಿಯಾಗಿ ಅಸಭ್ಯ ವರ್ತನೆ ಇಲ್ಲಿ ಮಾಡಿದ್ದೇನೆ ಎಂಬುದನ್ನು ತಾವು ನನಗೆ ಹೇಳಬೇಕು, ಸೂಚನೆ ಕೊಡಬೇಕು ಎಂದೆ. ಇಲ್ಲ, ಇದನ್ನು ದೊಡ್ಡದು ಮಾಡುವುದು ಬೇಡ, ನಾನು ಅವರಿಗೆ ಒಂದು ಮಾತನ್ನು ಸೂಕ್ಷ್ಮವಾಗಿ ಹೇಳುತ್ತೇನೆಂದರು. ಅದಕ್ಕೆ ನಾನು ಸುಮ್ಮನೆ ಕುಳಿತಿದ್ದೇನೆ. I have gone with a notice to him. ಇದರಲ್ಲಿ ಏನೂ ಮುಚ್ಚುಮರೆ ಇಲ್ಲ. ನಾನು notice ಕೊಡುತ್ತಿದ್ದೇನೆ ಸಾರ್, paper ನಲ್ಲಿ ಈ ತರಹ ಮಾಧುಸ್ವಾಮಿ ಅಸಭ್ಯವಾಗಿ ವರ್ತಿಸಿದರು, ಸಭಾ ಗೌರವ ಬಿಟ್ಟು ವರ್ತಿಸಿದರು ಎಂದು ಬರೆಯುವ ಸ್ಥಿತಿಯಲ್ಲಿ ನಾನೇನು ವರ್ತಿಸಿದೆ ಎಂಬುದನ್ನು ಹೇಳಬೇಕು. ನೀವೇನಾದರೂ office ಗೆ ಹೇಳಿದ್ದೀರಾ ಅಥವಾ ಏನಾದರೂ Record ನಲ್ಲಿ ಹೋಗಿದೆಯೇ? Paper ನಲ್ಲಿ ಹೇಗೆ ಬರೆದಿರಿ ಎಂದು ನೀವು ಕೇಳಬೇಕು ಇಲ್ಲ notice ತೆಗೆದುಕೊಳ್ಳಿ ಎಂದು ನಾನು ಅವರಲ್ಲಿ ಕೇಳಿದೆ. ಮಾನ್ಯ ಅಧ್ಯಕ್ಷರು ಕೊನೆಯ ದಿವಸ ಇದಕ್ಕೋಸ್ಕರ ಕಾಲಹರಣ ಮಾಡುವುದು ಬೇಡ, ನಾನೇ ಸೂಚನೆ ಕೊಡುತ್ತೇನೆ ಎಂದಿದ್ದಕ್ಕೆ ನಾನು ಸುಮ್ಮನೆ ಕುಳಿತಿದ್ದೇನೆ ಇದರಲ್ಲಿ ಏನೂ ಗೌಪ್ಯ ಯಾರೂ ಮಾಡಲಿಲ್ಲ. ವಿಜಯ ಕರ್ನಾಟಕ paper ನವರೊಬ್ಬರೇ ಹಾಗೆ ಮೂರೂ ದಿವಸಗಳಿಂದ ಬರೆಯುತ್ತಿದ್ದಾರೆ. ಇದೂ ಒಂದು ನನಗೆ hurt ಆಗಿದೆ. ಇವರಿಗೆ, ಬರದ ಮೇಲೆ, ನೆರೆ ಹಾವಳಿ ಮೇಲೆ, ನಮಗೆ ಆಸಕ್ತಿ ಇರಲಿಲ್ಲ, ಬೇರೆ ಎಲ್ಲಾ ಮಾತನಾಡುತ್ತಿದ್ದರು, ಸುಮ್ಮನೆ ಕುಳಿತಿದ್ದರು ಎಂದು ಬರೆಯುತ್ತಾರೆ ಎಂದು ನಾನು ಅಧ್ಯಕ್ಷರನ್ನು ಕೇಳಿದೆ. ಉತ್ತರ ಕರ್ನಾಟಕದವರು ಮಾತನಾಡಲಿ ಎಂದು ಸುಮ್ಮನೆ ಕುಳಿತಿದ್ದು ಬಿಟ್ಟರೆ, ಅದರ ಬಗ್ಗೆ ಆಸಕ್ತಿ ಇಲ್ಲವೆಂದು ಯಾವಾಗಲಾದರೂ ಹೇಳಿದ್ದೇವೆಯೇ? ಇಲ್ಲಿ ಬಂದಿದ್ದೇವೆ, ಆ ಶಾಸಕರಿಗೇನಾದರೂ ಸಮಯಾವಕಾಶವಾಗಲಿ ಎಂದು ಕುಳಿತಿದ್ದೂ ಟೀಕೆಯಾಗುವುದಕ್ಕೆ ಶುರು ಮಾಡಿದರೆ, ನಾವು ಇಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಅವರ ಗಮನಕ್ಕೆ ತಂದು notice ಕೊಡುವುದಕ್ಕೆ ಹೋದಾಗ ಅದಕ್ಕೆ ಅವರು ಬೇಡಿ, ದೊಡ್ಡದು ಮಾಡಬೇಡಿ, ನಾನು ಸೂಚನೆ ಕೊಡುತ್ತೇನೆ ಎಂದು ಹೇಳಿದ ಮೇರೆಗೆ ನಾನು ಸುಮ್ಮನೆ ಕುಳಿತಿದ್ದೇನೆ, ಇದರಲ್ಲಿ ಅಧ್ಯಕ್ಷರೇನೂ ಮುಚ್ಚುಮರೆ, ಗುಟ್ಟು ಮಾಡುತ್ತಾರೆಂದು ನಾನು ಭಾವಿಸುವುದಿಲ್ಲ. ಅವರಿಗೆ ಗೌರವ ಕೊಟ್ಟು ನಾವು ಕುಳಿತಿದ್ದೇವೆ ಅಷ್ಟೇ.

ಅಧ್ಯಕ್ಷರು : ಆಯಿತು, ಅದನ್ನು ಲಂಬಿಸುವುದು ಬೇಡ. ಬಿಡಿ.

(4) ನಿಯಮ 69ರ ಮೇರೆಗೆ

ವಿಷಯ : ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಮತ್ತು ಸಕಾಲದಲ್ಲಿ ಮಳೆಯಾಗದೆ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ

(ಮುಂದುವರಿದುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ, ಈ ಸದನದಲ್ಲಿ ಅನೇಕ ಸದಸ್ಯರು ಬರಗಾಲದ ವಿಚಾರದ ಬಗ್ಗೆ ಹಾಗೂ ನಂಜುಂಡಪ್ಪ ವರದಿ ಬಗ್ಗೆ ಮತ್ತು ಈ ಭಾಗದ ಸಮಸ್ಯೆಗಳ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅನೇಕ ಹೊಸ ಸದಸ್ಯರೂ ಕೂಡ ಬಹಳ ಪ್ರಭಾವಯುತವಾಗಿ

ತಮ್ಮ ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತದೆನ್ನತಕ್ಕಂಥದ್ದು ನಮ್ಮೆಲ್ಲರ ನಂಬಿಕೆ. ಈ ಬರಗಾಲ ಪರಿಸ್ಥಿತಿ ಮತ್ತು ನಂಜುಂಡಪ್ಪ ವರದಿ ಇವೆರಡರ ಬಗ್ಗೆ ಕೂಡ ನಾವು ಏಕಕಾಲದಲ್ಲಿ ಮಾತನಾಡಬೇಕೆಂದರೆ, ಹೆಚ್ಚು ಕಡಿಮೆ ಯಾವ ಭಾಗದಲ್ಲಿ ಸತತವಾಗಿ ಬರಗಾಲ ಬೀಳುತ್ತದೆಯೋ, ಅದೇ ಭಾಗಕ್ಕೆ ನಂಜುಂಡಪ್ಪ ವರದಿಯಲ್ಲಿ ಹೆಚ್ಚಿನ ಒತ್ತು ಕೊಟ್ಟಿದ್ದರು ಮತ್ತು ಆ ತಾಲ್ಲೂಕುಗಳೇ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಹೇಳಿ ಘೋಷಣೆ ಆಗಿತ್ತು. ಅದಕ್ಕಾಗಿ ನಾವು ಏನು ಕ್ರಮವನ್ನು ಜರುಗಿಸಿದ್ದೇವೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಮೊದಲನೆಯದಾಗಿ, ಬರಗಾಲದ ಪರಿಸ್ಥಿತಿ. ಈಗಾಗಲೇ, ಸುಮಾರು 116 ತಾಲ್ಲೂಕುಗಳನ್ನು ನಾವು ಬರಗಾಲ ಪೀಡಿತ ಎಂದು ಘೋಷಣೆ ಮಾಡಿದ್ದೇವೆ. ಇತ್ತೀಚೆಗೆ ಸುಮಾರು ಇನ್ನೂ 4 ತಾಲ್ಲೂಕುಗಳನ್ನು ಅದಕ್ಕೆ add ಮಾಡಿದ್ದಾರೆಂದು ಗೊತ್ತಾಗಿದೆ. ಅಂದರೆ, ಹೆಚ್ಚು ಕಡಿಮೆ 120–122 ತಾಲ್ಲೂಕುಗಳು ಬರಪೀಡಿತವಾಗಿವೆ ಎಂದು ಸರ್ಕಾರವೇ ಅಧಿಕೃತವಾಗಿ ಘೋಷಣೆ ಮಾಡಿದೆ. ಹೀಗೆ ಘೋಷಣೆ ಮಾಡಿದ ಮೇಲೆ ನಾವು ಎಷ್ಟು ಹಣವನ್ನು ಅದಕ್ಕಾಗಿ ಬಿಡುಗಡೆ ಮಾಡಿದ್ದೇವೆ, ಎಷ್ಟು ಹಣ ಖರ್ಚು ಮಾಡಿದ್ದೇವೆ, ಮತ್ತು ಎಷ್ಟು ಹಣದ Utilization certificate ಅನ್ನು ಕೇಂದ್ರಕ್ಕೆ ತಾವು ಕೊಟ್ಟಿದ್ದೀರಿ? ಇದು ಬಹಳ ಮುಖ್ಯ. ಏಕೆಂದರೆ, ಒಂದು memorandum ಕೊಟ್ಟು ನಾವು ಕೇವಲ ಕೇಂದ್ರ ಸರ್ಕಾರವನ್ನು ದೂಷಣೆ ಮಾಡಿಕೊಂಡು ದುಡ್ಡೇ ಬಂದಿಲ್ಲ ನಾವೇನು ಮಾಡೋಣವೆಂದು ಹೇಳಿದರೆ, ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ, ಬರಗಾಲಪೀಡಿತ ಮತ್ತು ಸುಮಾರು 5 ಜಿಲ್ಲೆಗಳಲ್ಲಿ ಮಹಾರಾಷ್ಟ್ರದ ನೀರಿನ ಪ್ರವಾಹದಿಂದ ತೊಂದರೆಗೊಳಪಟ್ಟಂಥ ಜಿಲ್ಲೆಗಳಾದಂಥ ಬೆಳಗಾಂ, ಬಿಜಾಪುರ, ಬಾಗಲಕೋಟೆ, ರಾಯಚೂರು, ಗುಲಬರ್ಗಾ ಇರಬಹುದು, 250 ಕೋಟಿ ರೂಪಾಯಿಗಳನ್ನು ಕೇಂದ್ರ ಸಚಿವರು ಘೋಷಣೆ ಮಾಡಿ ಬಿಡುಗಡೆ ಮಾಡಿದ್ದಾರೆ. ಅದರ ಜೊತೆಯಲ್ಲಿ ಹೋದ ವರ್ಷ ಸಿಗಬೇಕಾದಂಥ 158ಕೋಟಿ ರೂಪಾಯಿಗಳು ನಮಗೆ ದಕ್ಕಲಿಲ್ಲವೆಂದು ಹೇಳಿ ಪ್ರಯತ್ನ ಮಾಡಿದ ಮೇಲೆ ಪುನ: ಈ ಸಾರಿ ಆ ಹಣ ಕೂಡ ಬಂದಿದೆ ಎನ್ನುವ ಮಾತು ಮೊನ್ನೆ supplementary budget ಪ್ರಸ್ತಾಪ ಮಾಡುವಾಗ Deputy Chief Minister ರವರು ಹೇಳಿದ್ದಾರೆ. ಹೆಚ್ಚು ಕಡಿಮೆ 400 ಕೋಟಿ ರೂಪಾಯಿಗಳು ಇವತ್ತು ಈ natural Calamity fund ನಲ್ಲಿ ಇದೆ. ಈ 400 ಕೋಟಿ ರೂಪಾಯಿಗಳಲ್ಲಿ ತಾವು ಯಾವಾಗ ಬಿಡುಗಡೆ ಮಾಡಿದಿರಿ ಎಂದರೆ ಇಲ್ಲಿ ಸದನ 25ನೇ ತಾರೀಖು ಸೇರುತ್ತಿದೆ ಎಂದರೆ 22 ನೇ ತಾರೀಖು ಪ್ರತಿ ಜಿಲ್ಲಾಧಿಕಾರಿಗಳಿಗೆ ಹಣವನ್ನು ಕಳುಹಿಸತಕ್ಕಂಥ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೀರಿ. ತಾವು ಹಣವನ್ನು 22ನೇ ತಾರೀಖು ಕೊಟ್ಟರೆ, ಖರ್ಚು ಯಾವಾಗ ಆಯಿತು ಎನ್ನತಕ್ಕಂಥದ್ದು ನಮ್ಮ ಪ್ರಶ್ನೆ. ಅಂದರೆ, ಮೂರು ತಿಂಗಳಿನಿಂದ ನಿಮ್ಮ ಕೂಗು ಏನು ಇತ್ತು ಅಥವಾ ಕರ್ನಾಟಕದ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಏನು ಕೇಳುತ್ತಿದ್ದೀರಿ ಅಲ್ಲಿಂದ ಬಂದಂಥ ದುಡ್ಡೂ ಖರ್ಚಾಗಿಲ್ಲ ನಿಮ್ಮ ಬಾಕಿಯಲ್ಲಿ ಸಿಕ್ಕಂಥ ದುಡ್ಡೂ ಖರ್ಚಾಗಿಲ್ಲ. ಆದರೆ ನೀವು ಯಾವ ನೈತಿಕ ಆಧಾರದ ಮೇಲೆ ಕೇಂದ್ರ ಸರ್ಕಾರವನ್ನು

ದೂಷಿಸತಕ್ಕಂಥದ್ದು ಮಾಡುತ್ತೀರಿ ಅಥವಾ ನಾವು ಕೆಲಸವನ್ನು ಮಾಡಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳತಕ್ಕಂಥದ್ದು ಮಾಡುತ್ತಿದ್ದೀರಿ? ಈ ಹಿಂದೆ ನಮಗೆ ನೀವು ಹೇಳಿದ್ದೇನು ಎಂದರೆ. ಪ್ರತಿ ಜಿಲ್ಲಾಧಿಕಾರಿಯ ಹತ್ತಿರ ಹೋದ ವರ್ಷ ಕೊಟ್ಟಂಥ ಹಣವೇ ಇತ್ತು, ಆ ಹಣವನ್ನೇ ಖರ್ಚು ಮಾಡಿಲ್ಲ, ಅದಕ್ಕಾಗಿ ನಾವು ಹೊಸದಾಗಿ ಹಣ ಬಿಡುಗಡೆ ಮಾಡಿಲ್ಲ ಅಂತ ಅಂದರೆ ಇದರ ಅರ್ಥ ಬರಗಾಲದ ಭೀಕರವಾದಂಥ ಪರಿಸ್ಥಿತಿಯ ಅರಿವು ಸರ್ಕಾರಕ್ಕೆ ಇಲ್ಲ. ಅಥವಾ ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಅದು ಕಣ್ಣು ಮುಚ್ಚಿಕೊಂಡು ಕೂತಿದೆಯೆಂದು ಅರ್ಥವಾಗುತ್ತದೆ. ಎರಡರಲ್ಲಿ ಒಂದು. ಭೀಕರವಾದಂಥ ಬರಗಾಲ ವಿದ್ದರೆ ಹಣ ಖರ್ಚು ಮಾಡಲೇಬೇಕಾಗಿತ್ತು. ಅದಕ್ಕಾಗಿ ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಕಂದಾಯ ಸಚಿವರನ್ನು ಕೇಳುತ್ತೇನೆ ತಾವು Task Force Committee Constitute Constitute ಮಾಡಿದ್ದೀರಾ? Task Force Committee constitute ಮಾಡಿ Assistant Commissioner ಮುಖಾಂತರ Action plan approve ಮಾಡಿದ್ದೀರಾ? Action plan approve ಮಾಡಿದ್ದರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಎಷ್ಟು ಕೋಟಿ ರೂಪಾಯಿಗಳಿಗೆ ಮಾಡಿದ್ದೀರಿ? ಆ Action plan ಮುಖಾಂತರ ಎಷ್ಟು ಹಣ ಖರ್ಚಾಗಿದೆ? ಎಷ್ಟು ಕಾಮಗಾರಿಗಳನ್ನು ತಾವು ತೆಗೆದುಕೊಂಡಿದ್ದೀರಿ? ಮತ್ತು ಬರಗಾಲದಲ್ಲಿ ಎಷ್ಟು man days ಗಳ ಕೆಲಸವನ್ನು ಕೊಟ್ಟಿದ್ದೀರಿ ಅಥವ generate ಮಾಡಿದ್ದೀರಿ? ಇದರ ಸ್ಪಷ್ಟವಾದಂಥ ಚಿತ್ರ ಕೊಡಿ. ಸುಮ್ಮನೆ ಹಾರಿಕೆ ಮಾತುಗಳನ್ನು ಹೇಳಿಕೊಂಡು, ನಾವು ಎಲ್ಲವನ್ನೂ ಮಾಡಿದ್ದೇವೆ, ನಾವು ಮಾಡಿರುವುದೆಲ್ಲಾ ನಿಮಗೆ ಗೊತ್ತೇ ಆಗುವುದಿಲ್ಲ ಎನ್ನುವುದನ್ನು ಬಿಟ್ಟುಬಿಡಿ. ಬಂದಂಥ ಹಣ, release ಮಾಡಿದಂಥ ಹಣ, ಇಲ್ಲಿಯ ವರೆಗೆ ಖರ್ಚು ಮಾಡಿದ್ದು ಮತ್ತು ಎಷ್ಟು man days ಗಳ employment ತಾವು generate ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಸದನದ ಮುಂದೆ ಇಡಿ. ಆಗ ಗೊತ್ತಾಗುತ್ತದೆ. ಇವತ್ತು ನಿಮಗೆ ಹೇಳಬೇಕಾದರೆ ಮಾನ್ಯ ಅಧ್ಯಕ್ಷರೆ, Employment Guarantee Scheme ಕೆಳಗೆ ಕೇಂದ್ರದಿಂದ ಸುಮಾರು 132 ಕೋಟಿ ರೂಪಾಯಿಗಳು ಬಂದರೆ, ಅದರಲ್ಲಿ ಖರ್ಚಾಗಿದ್ದು ಕೇವಲ 46 ಕೋಟಿ ರೂಪಾಯಿಗಳು. ಅವರು ಕೊಟ್ಟಂಥ figures ಪ್ರಕಾರ, ನಮ್ಮಲ್ಲಿ ಸಿಕ್ಕಂಥ financial performance under N.R.E.G. during the year 2006-07 up to the month of August end 2006. ಆದರೆ September ತಿಂಗಳ ಈ 20 ದಿನಗಳ ಮಾಹಿತಿ ನಮ್ಮಲ್ಲಿ ಇಲ್ಲ. ಆದರೆ end of August ವರೆಗೂ ಇದೆ. ಎಷ್ಟು ಇದೆ? ಇಲ್ಲಿ total availability of funds, ಎರಡನೇ ಕಂತು, ಮೂರನೇ ಕಂತು, ನಾಲ್ಕನೇ ಮತ್ತು ಐದನೇ ಕಂತು, ಆರು ಮತ್ತು ಏಳು ಕಂತು ಸೇರಿ ಒಟ್ಟಾರೆ ಐದು ಜಿಲ್ಲೆಗಳಿಗೆ 132 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಅದರಲ್ಲಿ ಖರ್ಚಾಗಿದ್ದೆಷ್ಟು ಎಂದರೆ 46ಕೋಟಿ 46 ಸಾವಿರ ರೂಪಾಯಿಗಳು. ಇದು ನಿಮ್ಮ performance ಹೇಳಿದರೆ ನಿಮಗೆ ಪದೇ ಪದೇ ಸಿಟ್ಟು ಬರುತ್ತದೆ. ಬಹಳ ಕೆಲಸ ಮಾಡಿದ್ದೀರಿ. ಕೇಂದ್ರ ಸರ್ಕಾರದಿಂದ release ಮಾಡಿದಂಥ ಏಳು installments ಗಳಲ್ಲಿ ನೀವು ಖರ್ಚು ಮಾಡಿದ್ದು ಕೇವಲ 46 ಕೋಟಿ ರೂಪಾಯಿಗಳು.

ಕೇಂದ್ರ ಸರ್ಕಾರದವರು release ಮಾಡಿದ್ದು 132 ಕೋಟಿ ರೂಪಾಯಿಗಳು. ಇದು ನಿಮ್ಮ R.E.G.P. ನಲ್ಲಿರತಕ್ಕಂಥ performance. ಅದೇ ರೀತಿ ಬರಗಾಲಕ್ಕೆ ಬಿಡುಗಡೆಯಾದಂಥದ್ದು, Natural Calamity Fund ನಲ್ಲಿ ಬಿಡುಗಡೆಯಾದಂಥದ್ದು ಹಿಂದಿನ ಬಾಕಿಗಳು ಸೇರಿ, ಸುಮಾರು 408 ಕೋಟಿ ರೂಪಾಯಿಗಳು. ಅಂದರೆ 408 ಕೋಟಿ ರೂಪಾಯಿಗಳಲ್ಲಿ ನೀವು ಇವತ್ತು ಎಷ್ಟು ಹಣ ಖರ್ಚು ಮಾಡಿದ್ದೀರಿ? ಅದಕ್ಕೆ ಯಾವ ಉತ್ತರವೂ ಕೂಡ ಇಲ್ಲ. ಎಷ್ಟು ಗೋಶಾಲೆ ತೆಗೆದಿದ್ದೀರಿ? ಎಷ್ಟು fodder banks ಮಾಡಿದ್ದೀರಿ? ಯಾವ ಯಾವ ಭಾಗದಲ್ಲಿ task force ಮಾಡಿದ್ದೀರಿ? ನಿಮ್ಮ ಶಾಸಕರನ್ನೇ ಕೇಳಿಕೊಳ್ಳಿ. ನಿಮ್ಮ in-charge Ministers ಏನಿದ್ದಾರೆ ಅವರು ಎಷ್ಟು meetings ಮಾಡಿ ಅವರವರ ಜಿಲ್ಲೆಯಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಖರ್ಚು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಸ್ಪಷ್ಟವಾಗಿ ತೋರಿಸಿ. ಇಷ್ಟೊಂದು ಹಣ ಇಟ್ಟುಕೊಂಡು ನಾವು ಇವತ್ತಿನ ದಿವಸ ಬರೇ ಕಚ್ಚಾಟದಲ್ಲೇ ಸಮಯವನ್ನು ಕಳೆದರೆ ಅಭಿವೃದ್ಧಿ ಕೆಲಸ ಮಾಡಿದ ಹಾಗೆ ಆಗುತ್ತದೆಯೇ? ನಾವು ಒಬ್ಬರ ಮೇಲೆ ಒಬ್ಬರು ಬರೇ ದೂಷಣೆ ಮಾಡಿದರೆ ಕೆಲಸ ಮಾಡಿದ ಹಾಗಾಗುತ್ತದೆಯೇ? ಇದೇ ಪ್ರಶ್ನೆಯನ್ನು ಮೇಲ್ಮನೆಯಲ್ಲೂ ಕೇಳಿದಾಗ ಅದೇ ಉತ್ತರ ಬಂತು. ಎಲ್ಲಿ ಬರಗಾಲವಿದೆ ಎಂದು ತೋರಿಸಲಿ ಎಂಬ ಉತ್ತರ ಬಂತು. ನನಗೆ ಬಹಳ ಆಶ್ಚರ್ಯವಾಯಿತು. ನಾನು ಮುಂಜಾನೆ ಈ ಟಿವಿಯಲ್ಲಿ ನೋಡಿದೆ ಮಾನ್ಯ ಯಡಿಯೂರಪ್ಪನವರು ಹೇಳುತ್ತಾರೆ, "ಬರಗಾಲ ಬರಗಾಲ ಎಂದು ಇವರು ಹೇಳುತ್ತಾರೆ, ಎಲ್ಲಿದೆ ಬರಗಾಲವೆಂದು ತೋರಿಸಲಿ, ಎಷ್ಟು ಜನ ಸತ್ತಿದ್ದಾರೆ, ಎಲ್ಲಿ ನೀರಿಲ್ಲ? ಬೇಕಾದರೆ ವಿರೋಧ ಪಕ್ಷದ ನಾಯಕರು ನಮ್ಮ ಜೊತೆಯಲ್ಲಿ ಬರಲಿ ನಾನು ಅವರ ಜೊತೆಯಲ್ಲಿ ಹೋಗಲಿಕ್ಕೆ ಸಿದ್ಧನಿದ್ದೇನೆ," ಎನ್ನತಕ್ಕಂಥ ಮಾತು ಮುಂಜಾನೆ 7.30 ಕ್ಕೆ ನಾನು ಈ ಟಿವಿಯಲ್ಲಿ ನೋಡಿದೆ. ಅಂದರೆ ಒಂದು ಕಡೆ ಬರಗಾಲವಿಲ್ಲವೆಂದು ನೀವೇ ಘೋಷಣೆ ಮಾಡುತ್ತೀರಿ, ಇನ್ನೊಂದು ಕಡೆ ಹೇಳುತ್ತೀರಿ ಭೀಕರವಾದಂಥ ಬರಗಾಲವಿದೆ, ನಾವು 1450 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೇವೆ, ಆದರೆ ಇನ್ನೂ ಬಿಡುಗಡೆಯೇ ಮಾಡುತ್ತಿಲ್ಲ, ಅದರ ಬಗ್ಗೆ ಅವರು ಸ್ಪಂದಿಸುತ್ತಿಲ್ಲವೆಂದು ಹೇಳುತ್ತೀರಿ. ಆಂಧ್ರಪ್ರದೇಶ, ಮಹಾರಾಷ್ಟ್ರಕ್ಕೆಲ್ಲಾ ಹೋಗುತ್ತಿದ್ದೇವೆ. ಅದಕ್ಕೆ ಬೇರೆ ಬರೋಣ. ಆದರೆ ಕೊಟ್ಟಂಥ ಹಣ ಖರ್ಚು ಮಾಡಿ ಪುನ: ನಾವು ಕೇಳಿದರೆ ಯಾರಾದರೂ ಕೊಡುತ್ತಾರೆ. ನಿಮ್ಮಲ್ಲಿ ಹಣ ಇಲ್ಲವೆಂದರೂ ಕೂಡ war footing ಮೇಲೆ ಬರಗಾಲ ಪರಿಸ್ಥಿತಿಗೆ ಖರ್ಚು ಮಾಡಿ, ನಾವು ಇಷ್ಟೊಂದು ಖರ್ಚು ಮಾಡಿದ್ದೇವೆ, ನೀವು ನಮಗೆ ಕೊಟ್ಟಿಲ್ಲವೆಂದು ಹೇಳಿ ನೀವು reimbursement ಕೇಳಬಹುದು. ಈಗಾಗಲೇ ನಿಮಗೆ 180 ಕೋಟಿ ರೂಪಾಯಿಗಳು ಅಥವಾ 150 ಕೋಟಿ ರೂಪಾಯಿಗಳು ವಾಪಸ್ಸು ಬಂತಲ್ಲಾ ಎರಡು ವರ್ಷಗಳಾದ ಮೇಲೆ ಹಣ ವಾಪಸ್ಸು ಬರಬಹುದೆಂದರೆ, ನೀವು Natural calamity ಯಲ್ಲಿ ಖರ್ಚು ಮಾಡಿದಂಥ ಹಣ commitment ಮಾಡಿದರೆ reimburse ಮಾಡುವುದಿಲ್ಲವೇ? ಅಧ್ಯಕ್ಷರೆ, ಇವತ್ತು ಏನಾಗಿದೆ ಎಂದರೆ lack of co-ordination. ಇವರ Assistant Commissioner ಅಥವಾ

Secretary ಗಳನ್ನು ಏನು nodal officers ಎಂದು ಹಾಕಿದ್ದಾರೆ, ಪ್ರತಿಯೊಂದು ಜಿಲ್ಲೆಗಳಲ್ಲೂ ಕೂಡ ಒಬ್ಬರು Secretary ಗಳು Nodal Secretary ಗಳಿದ್ದಾರೆ, ಅವರು ಎಷ್ಟು meetings ಮಾಡಿದ್ದಾರೆ? ಅವರಿಗೇನಾದರೂ ಒಂದು Notification issue ಮಾಡಿ ಬರಗಾಲದಲ್ಲೂ ನೀವು ಕಾರ್ಯವನ್ನು ನಿರ್ವಹಿಸಬೇಕು ನಿಮಗೆ ಸಂಪೂರ್ಣ ಅಧಿಕಾರವನ್ನು ನಾವು ಕೊಟ್ಟಿದ್ದೇವೆ ಎನ್ನತಕ್ಕಂಥ ಸರ್ಕಾರಿ ಆದೇಶವೇನಾದರೂ ಹೊರಡಿಸಿದ್ದೀರಾ? ಏಕೆಂದರೆ ನಾಳೆ ಅವರು ಅಲ್ಲಿಗೆ ಹೋಗಿ, ಸಹಜವಾಗಿ ಒಂದೊಂದು ಜಿಲ್ಲೆಗೆ ಒಬ್ಬ Secretaery in-charge ಮಾಡಿರುತ್ತಾರೆ, ಆದರೆ ಅವರಿಗೆ ಅಧಿಕಾರ ಕೊಡತಕ್ಕಂಥ ಒಂದು G.O. ಸಹ ಬೇಕು. ಬರಗಾಲದಲ್ಲಿ natural calamity ಯಲ್ಲಿ, flood ನಲ್ಲಿ ಬೇರೆ ಪ್ರಸಂಗದಲ್ಲೂ ಕೂಡ ಅವರು ಆ ಜಿಲ್ಲೆಯಲ್ಲೇ ತಮ್ಮ ಅಧಿಕಾರವನ್ನು ಉಪಯೋಗ ಮಾಡಬಹುದು ಎಂದು ಹೇಳಿ, ಅಥವಾ ಅವರು coordinate ಮಾಡಬಹುದು, ಅವರ ಮಾತನ್ನು ಎಲ್ಲಾ ಇಲಾಖೆಯವರೂ ಕೇಳಬೇಕು ಎನ್ನತಕ್ಕಂಥ ಆದೇಶವನ್ನು ಹೊರಡಿಸಬೇಕಾಗುತ್ತದೆ. ಅದನ್ನು ಹೊರಡಿಸಿದ್ದೀರಾ? ಅದು ಎಲ್ಲಿ ಇದೆ? ಒಂದು ಜಿಲ್ಲೆಯ in-charge ಯಾರ್‍ಯಾರು? ಅವರು ಎಷ್ಟು meetings ಗಳನ್ನು ಮಾಡಿದ್ದಾರೆ? ಇದನ್ನು ಕೇಳುವವರು ಯಾರು ಇದ್ದಾರೆ? ಯಾರೂ ಕೇಳುವುದಿಲ್ಲ. ಎಲ್ಲಾ superfluous ಹೇಳುವುದು. ನಾವು ಮಾಡಿದ್ದೇವೆಂದು ಹೇಳುವುದು. ಬಹಳ ಎಂದರೆ, ನಾವು ಜೋರಾಗಿ ಕೇಳಿದಾಗ, ನೀವು ಏನು ಮಾಡಿದ್ದಿರಿ? ನಾವೇನು ಮಾಡಿದ್ದೇವೋ ಮಾಡಿಲ್ಲವೋ, ಜನ ನಮ್ಮನ್ನು ವಿರೋಧ ಪಕ್ಷದಲ್ಲಿ ಕೂಡಿಸಿದ್ದಾರೆ, ಕೇಳಿ ಎಂದು ಹೇಳಿ ಕೂಡಿಸಿದ್ದಾರೆ.

11.00 Am

ನಾವು ಮಾಡುತ್ತೇವೆಂದು ನೀವು ಆ ಕಡೆ ಕುಳಿತಿಕೊಂಡಿದ್ದೀರಿ. ಆದ್ದರಿಂದ ನೀವು ಇದರ ಬಗ್ಗೆ ಹೇಳಬೇಕು. ಇದನ್ನು ಮಾಡುವುದನ್ನು ಬಿಟ್ಟು ನಾವು ಏನು ಮಾಡಿದ್ದೇವೆಂದು ಹೇಳುತ್ತಾ ನಮ್ಮ ನ್ಯೂನ್ಯತೆ ಮೇಲೆ ನಿಮ್ಮ ಮೆರಿಟ್ಟಾ? ಈ ರೀತಿಯಾದರೆ ರಾಜ್ಯ ನಡೆಸುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕುಳಿತು ಮೀಟಿಂಗ್ ಮಾಡಬೇಕು. ಈಗ ಮಾನ್ಯ ಗೃಹ ಸಚಿವರು ಏನು ಹೇಳಿದರೆಂದರೆ, ಬರಗಾಲದ ಪರಿಸ್ಥಿತಿ ಬಗ್ಗೆ ಒಂದು ಸಬ್ ಕಮಿಟಿ ಮಾಡಲಾಗಿದೆ, ಇದರ ಅಧ್ಯಕ್ಷರಾಗಿ ನಾನು ಇದ್ದೇನೆಂದು ಹೇಳಿದರು. ಅಲ್ಲಿ ಎರಡು ರೀತಿಯ ಫಂಡ್‌ಗಳು ಬರುತ್ತವೆ. NCCF & CRF ನಿಂದ ಬರತಕ್ಕಂಥ ಫಂಡ್. ಇವೆರಡನ್ನೂ ಕೂಡ ಕ್ರೋಢೀಕರಿಸಿ ಮತ್ತು ನಿಮ್ಮ ಬಜೆಟ್‌ನಲ್ಲಿರತಕ್ಕಂಥ ಹಣವನ್ನು ಸಂಗ್ರಹಿಸಿ, ಯಾವುದಕ್ಕೆ ಆದ್ಯತೆ ಕೊಡಬೇಕೆನ್ನತಕ್ಕಂಥ ನಿರ್ಣಯವನ್ನು ನೀವು ಅಲ್ಲಿ ಮಾಡಬೇಕಾಗುತ್ತದೆ. ಕುಡಿಯುವ ನೀರಿಗೆ ಕಡಿಮೆ ಇದ್ದರೆ ಇನ್ನೊಂದು ಕಡೆಯಿಂದ ತೆಗೆದು ಹಾಕಬೇಕಾಗುತ್ತದೆ. ಕೆಲಸಕ್ಕೆ ಕಡಿಮೆ ಬಿದ್ದರೆ ಯಾವುದಾದರು ಕಟ್ಟಡ ನಿಲ್ಲಿಸಿ ಇವತ್ತಿನದಿವಸ ಕೆಲಸ ಮಾಡಬೇಕಾಗುತ್ತದೆ. ಒಂದು ಕಡೆ ಬರಗಾಲವಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆ ಬೇಕೆಂದು ನಾವೆಲ್ಲಾ ಕೇಳುತ್ತೇವೆ. ಈ ಎಲ್ಲಾ ಸಮಸ್ಯೆಗಳನ್ನು ಇಟ್ಟುಕೊಂಡು ನೀವು ಹೊಸದಾಗಿ ಒಂದೊಂದು

ಕಲ್ಲನ್ನು ಹಾಕಿಕೊಂಡು ಹೋಗುತ್ತಿದ್ದೀರಿ. ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣವಿಲ್ಲ. ಅದಕ್ಕೆ one third ಪ್ರಾವಿಜನ್ ಕೂಡ ಇಲ್ಲ. ಹಣ ಇಲ್ಲದಿದ್ದರೂ ಕೂಡ 50,100, 200, 300 ಕೋಟಿ ರೂಪಾಯಿಗಳ ಬಗ್ಗೆ ಏನೇನೋ ಹೇಳುತ್ತಿರುವುದನ್ನು ನೋಡಿದರೆ ಇದನ್ನು ಹೇಳುವುದಕ್ಕೆ ಬಾಯಿಗೆ ಬೀಗವೇ ಇಲ್ಲದಂತಾಗಿದೆ. ಹೇಳುವುದನೇ ಹೇಳುತ್ತಾ ಹೋಗುತ್ತಿದ್ದೀರಿ. ಯಾರು ಕೇಳಿದರೂ ನಮ್ಮ ಆರ್ಥಿಕ ಮಂತ್ರಿಗಳು ಏನು ಹೇಳುತ್ತಾರೆಂದರೆ, ನಿಮಗೆ ಏತಕ್ಕೆ ಬೇಕು? ಇಂಥ ಒಂದು ಕೆಲಸಕ್ಕೆ ಒಂದು ಕೋಟಿ ರೂಪಾಯಿ ಬೇಕೆಂದರೆ, ಆಯಿತು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಪ್ರತಿಯೊಂದಕ್ಕೂ ಕೂಡ ಸ್ಯಾಂಕ್ಷನ್ ಸ್ಯಾಂಕ್ಷನ್ ಎಂದು ಹೇಳುತ್ತಿದ್ದಾರೆ. ಸ್ವಾಮಿ ದುಡ್ಡು ಬೇಕಲ್ಲವೆ? ಆ ದುಡ್ಡು ನಿಮ್ಮಲ್ಲಿ ಸಂಪೂರ್ಣವಾಗಿದ್ದಿದ್ದರೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚಿನ ಹಣ ಕೊಡಿಸತಕ್ಕಂಥ ಕೆಲಸವನ್ನೇ ಮಾಡುತ್ತಿರಲಿಲ್ಲ. ನಿಮಗೆ ದುಡ್ಡು ಕಡಿಮೆ ಇದೆ ಎಂದು ತಿಳಿದುಕೊಂಡು ರೆಗ್ಯುಲರ್ ಬಜೆಟ್‌ನಲ್ಲಿ ಕಡಿಮೆ ಹಣ ತೋರಿಸಿ ಇವತ್ತಿನ ದಿವಸ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಆ ಹಣವನ್ನು ಪಡೆದುಕೊಳ್ಳುತ್ತಿದ್ದೀರಿ. ಇಂಥ ಒಂದು ಸಂಪೂರ್ಣವಾದ ರಿಸೋರ್ಸಸ್ ನಿಮ್ಮಲ್ಲಿ ಮೊದಲೇ ಇದ್ದಿದ್ದರೆ ಖಂಡಿತವಾಗಿ 100 ರೂಪಾಯಿ ಒಂದು ಕೆಲಸಕ್ಕೆ ಬೇಕಾಗಿದ್ದರೆ 100 ರೂಪಾಯಿಗಳನ್ನು ಆ ಸಂದರ್ಭದಲ್ಲಿಯೇ ಅಲೋಕೇಟ್ ಮಾಡುತ್ತಿದ್ದೀರಿ. 100 ರೂಪಾಯಿ ಬೇಕಾದಲ್ಲಿ ಕೇವಲ 50 ರೂಪಾಯಿ ಮಾಡಿಕೊಂಡು ಪುನಃ 50 ರೂಪಾಯಿಗೆ ನೀವು ಇಲ್ಲಿಗೆ ಬರುತ್ತಿರಲಿಲ್ಲ. ಇಂಥ ಒಂದು ಪರಿಸ್ಥಿತಿ ಇವತ್ತಿನ ದಿವಸ ನಿಮ್ಮದಾಗಿದೆ. ಆದರೂ ಕೂಡ ನಾವು ನಿಭಾಯಿಸುತ್ತೇವೆಂದು ಹೇಳುತ್ತಿದ್ದೀರಿ. ಸರ್ಕಾರ ಇದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಮತ್ತು ಇದರಲ್ಲಿ ಯಾವುದೇ ರೀತಿಯ ಕೆಲಸವನ್ನು ಮಾಡಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಅವರು ಎಷ್ಟೇ ಹೇಳಿಕೊಳ್ಳಲಿ, ಅವರಿಗೆ ಮೊಂಡು ಧೈರ್ಯ ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಂದರೆ, ಏನು ಹೇಳಿದರೂ ಕೂಡ ನೀವು ಬಗ್ಗುವುದಿಲ್ಲ ಮತ್ತು ಕೇಳುವುದಕ್ಕೆ ಹೋಗುವುದಿಲ್ಲ. ಹಣ ಖರ್ಚು ಮಾಡಿರುವ ಬಗ್ಗೆ utilisation certificate ಕಳುಹಿಸುವುದು, man days generate ಮಾಡತಕ್ಕಂಥಾದ್ದು ಮತ್ತು ಒಂದೊಂದು ತಾಲ್ಲೂಕಿನಲ್ಲಿ ಬರಗಾಲದ ಪರಿಸ್ಥಿತಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ? Employment guarantee sche me ನಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎನ್ನುವಂಥ ಪೇಪರನ್ನು ಇಡಿ. ಎಲ್ಲರಿಗೂ ಗೊತ್ತಾಗಲಿ. ಏಕೆಂದರೆ ನಾವೆಲ್ಲರೂ ಕೂಡ ಅದಕ್ಕೋಸ್ಕರ ಬಡಿದಾಡುತ್ತಿದ್ದೇವೆ. ಮತ್ತೊಂದು ವಿಷಯ ಏನೆಂದರೆ, ವಿಶೇಷವಾಗಿ ಐದು ಜಿಲ್ಲೆಗಳಾದ ಗುಲ್ಬರ್ಗಾ, ಚಿತ್ರದುರ್ಗ, ರಾಯಚೂರು, ಬೀದರ್ ಮತ್ತು ದಾವಣಗೆರೆ ಯಲ್ಲಿ ಏನಾಗಿದೆ ಎಂದರೆ Employment guarantee scheme ಇದೆ ಎಂದು ತಿಳಿದುಕೊಂಡು ಬರಗಾಲ ಪ್ರದೇಶಗಳೆಂದು ಘೋಷಣೆ ಮಾಡಿದರೂ ಕೂಡ ಅಲ್ಲಿ ಸಿ.ಆರ್.ಎಫ್. ಮತ್ತು ಎನ್.ಸಿ.ಸಿ.ಎಫ್. ಅನ್ನು ರಿಲೀಸ್ ಮಾಡಿಲ್ಲ. ಹಣವನ್ನು ರಿಲೀಸ್ ಮಾಡದೇ ಇದ್ದುದ್ದರಿಂದ ಇವತ್ತಿನ ದಿವಸ ಬೇರೆ ಕೆಲಸಕ್ಕೆ ಅವರ ಹತ್ತಿರ ಹಣ ಇಲ್ಲ. ಏಕೆಂದರೆ, Employment guarantee scheme. ನಲ್ಲಿ ಕೆಲಸಕ್ಕೆ ಬಂದವರಿಗೆ ಮಾತ್ರ ಕೂಲಿ ಹಣ ಕೊಡಬಹುದು. ಆದರೆ

ಕುಡಿಯುವ ನೀರಿಗೆ ಇರಬಹುದು ಅಥವಾ ಫಾಡರ್‌ಗೆ ಇರಬಹುದು ಅಥವಾ ಬೇರೆ ಬೇರೆ ಬಾಬ್ತಿನಲ್ಲಿ ಖರ್ಚು ಮಾಡತಕ್ಕಂಥಾದ್ದಿರಬಹುದು ಅಥವಾ ಅದಕ್ಕೆ ತಕ್ಕಂತೆ ಹಣ ಇರಲಿಲ್ಲವೆಂದರೆ ಅನೇಕ ಸಾರಿ Employment guarantee scheme. ನಲ್ಲಿ ಒಂದು ಮನೆಗೆ ಒಬ್ಬ ಮನುಷ್ಯ ಕೆಲಸ ಮಾಡಬೇಕೆಂಬ ಕಂಡೀಷನ್ ಇರುವುದರಿಂದ ಇವತ್ತಿನ ದಿವಸ ಅಲ್ಲಿ ತೊಂದರೆಯಾಗುತ್ತದೆ. ಏಕೆಂದರೆ ಅದು ಒಂದು ಕುಟುಂಬದಲ್ಲಿ ಒಬ್ಬರೆ, ನೂರು ದಿವಸ ಕೆಲಸ ಮಾಡಬಹುದಾಗಿದೆ. ಈ ರೀತಿಯಾದಾಗ ಬಾಕಿಯವರು ಎಲ್ಲಿಗೆ ಹೋಗಬೇಕು? ಬರಗಾಲವೆಂದರೆ ಇಡೀ ತಾಲ್ಲೂಕಿನಲ್ಲಿರುತ್ತದೆ. ಆದುದರಿಂದ ಒಂದು ಮನೆಯಲ್ಲಿ ಇಬ್ಬರು ಕೆಲಸಕ್ಕೆ ಬರುತ್ತೇನೆಂದರೆ ನೀವು ಅದಕ್ಕೆ ಕಡಿವಾಣ ಹಾಕುವುದಕ್ಕೆ ಆಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ಚಿಂತನೆ ಮಾಡಿ. ಈ ಐದು ಜಿಲ್ಲೆಗಳಲ್ಲಿರತಕ್ಕಂಥ ತಾಲ್ಲೂಕುಗಳಿಗೆ ಸಂಪೂರ್ಣವಾದಂಥ ಹಣ ಬಿಡುಗಡೆ ಮಾಡಿ. ಹಣ ಬಿಡುಗಡೆ ಮಾಡದಿದ್ದರೆ ಅಲ್ಲಿ ಕೆಲಸಗಳು ನಡೆಯುವುದಿಲ್ಲ ಮತ್ತು ಈ ರೀತಿಯಾದ ಹಾಹಾಕಾರ ಅಲ್ಲೇ ಇದ್ದು ಈ ರೀತಿಯಾದ ಪರಿಸ್ಥಿತಿ ಮುಂದುವರೆಯುತ್ತಾ ಹೋಗುತ್ತದೆ. ಇದು ಎರಡನೆಯ ವಿಚಾರ. ಮೂರನೆಯ ವಿಚಾರ ಏನೆಂದರೆ ಒಂದು ವಿಷಯವನ್ನು ಮಾನ್ಯ ಜಗದೀಶ್ ಶೆಟ್ಟರ್ ಅವರ ಗಮನಕ್ಕೆ ತರಬೇಕಾಗಿತ್ತು. ಆದರೆ ಅವರು ಬಂದಿಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಅವರು ಮತ್ತು ಮಾನ್ಯ ಗೃಹ ಸಚಿವರು ಎಲ್ಲಿಯವರೆಗೆ ಕುಳಿತು ಇದರ ಬಗ್ಗೆ ರಿವ್ಯೂ ಮಾಡುವುದಿಲ್ಲವೋ ಅಲ್ಲಿಯವರೆಗೆ ಫಂಡ್ಸ್ ಕೂಡ ರಿಲೀಸ್ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಗೃಹ ಸಚಿವರು ಸಬ್ ಕಮಿಟಿ ಛೇರ್ಮನ್ ಆಗಿದ್ದು ಕಂದಾಯ ಸಚಿವರಾಗಿರತಕ್ಕಂಥ ಮಾನ್ಯ ಜಗದೀಶ್ ಶೆಟ್ಟರ್ ಅವರು ಸಿ.ಆರ್.ಎಫ್. ನನ್ನದು ಎಂದು ಹೇಳುತ್ತಾರೆ, ಇವರು ಎನ್.ಸಿ.ಸಿಎಫ್ ಫಂಡ್ ನನ್ನದು ಎಂದು ಹೇಳುತ್ತಾರೆ. ಆದುದರಿಂದ ಇವೆರಡಕ್ಕೂ ಕೂಡ ಕಾಂಬಿನೇಷನ್ ಮಾಡಿ ಬಜೆಟ್ ಪ್ರಾವಿಷನ್ ನೋಡಿಕೊಂಡು ಅವರು ಒಂದೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮತ್ತು ನೋಡಲ್ ಸ್ಕ್ರೆಟರಿಗಳಿಗೆ ಟಾರ್ಗೆಟ್ ಅನ್ನು ಫಿಕ್ಸ್ ಮಾಡಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ, ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ, ಯಾವ ಕೆಲಸ ತೆಗೆದುಕೊಂಡಿದ್ದೀರಿ ಎನ್ನತಕ್ಕಂಥ ಬಗ್ಗೆ 15 ದಿವಸಗಳೊಳಗೆ ರಿಪೋರ್ಟ್ ಕೊಡಬೇಕೆಂದು ನೀವು ಅವರಿಗೆ ಹೇಳಬೇಕು. ಈ ರೀತಿಯಾಗಿ ತಾವು ಏನಾದರೂ ಸಲಹೆ ಕೊಟ್ಟಿದ್ದರೆ ಅಥವಾ Instruction ಕೊಟ್ಟಿದ್ದರೆ ಆ ಕೆಲಸ ಆಗುತ್ತದೆಯೇ ಹೊರತಾಗಿ ಇಲ್ಲದಿದ್ದರೆ ನಾವು ಹೇಳುವಂಥದ್ದೇ ಹೇಳುವುದು, ಅವರು ಕೇಳಿದ್ದೇ ಕೇಳುವ ರೀತಿ ಆಗುತ್ತದೆ. ದಿ||ಕೆ.ಹೆಚ್. ಪಾಟೀಲ್ ರವರು ಹೇಳಿದಂಥ ಗಾದೆ ಮಾತನ್ನು ಹೇಳಿದ್ದೆ. ಅದು ಏನೆಂದರೆ, ನೀವು ಬೇಡ ಎಂದರೂ ಜಾತ್ರೆಗೆ ಹೋಗುತ್ತೇನೆ, ಹೋಗಿ ಎಂದರೂ ಹೋಗುತ್ತೇನೆ. ಏನು ಹೇಳುತ್ತೀರೋ ಅದನ್ನು ಬೇಗ ಹೇಳಿ ಎನ್ನುವಂಥ ರೀತಿ ಆಗುತ್ತದೆ. ಆದ್ದರಿಂದ ನೀವು ಹೇಳಿದರೂ ಮಾಡುವುದು ಇಷ್ಟೇ, ನೀವು ಹೇಳದಿದ್ದರೂ ಕೂಡ ನಾವು ಮಾಡುವುದು ಇಷ್ಟೇ ಎಂದು ಹೇಳಿದ ಮೇಲೆ ಅದಕ್ಕೆ ನಾವು ಹೇಳತಕ್ಕಂಥ ಅವಶ್ಯಕತೆ ಇಲ್ಲ. ನಾವು ಕೇಳಿದರೆ ಅವರಿಗೆ ಸಿಟ್ಟು ಬರುತ್ತದೆ. ಏನೆಂದರೆ, ಮಾನ್ಯ ಗೃಹ ಸಚಿವರು ಮತ್ತು

ಜಗದೀಶ್ ಶೆಟ್ಟರ್ ಅವರು ಎಷ್ಟು ಸಲ ಮೀಟಿಂಗ್ ಮಾಡಿದ್ದಾರೆ, ಹಾಗೆಯೇ ಮಾನ್ಯ ಮುಖ್ಯ ಮಂತ್ರಿಯವರನ್ನು ಹಾಗೂ ಉಳಿದ ಕಾರ್ಯದರ್ಶಿಗಳನ್ನು ಕೂರಿಸಿಕೊಂಡು ಎಷ್ಟು ಸಲ ಮೀಟಿಂಗ್ ಮಾಡಿದ್ದಾರೆ? ಹೈ ಲೆವೆಲ್ ಕಮಿಟಿ ಎಂದು ಇರುತ್ತದೆ. ಅಂದರೆ ಸ್ಟೇಟ್ ಲೆವೆಲ್ ಟಾಸ್ಕ್ ಫೋರ್ಸ್ ಕಮಿಟಿಯ ಎಷ್ಟು ಮೀಟಿಂಗ್ ಯಾವ್ಯಾವ ತಿಂಗಳು ಆಗಿದೆ ಎನ್ನತಕ್ಕಂಥದ್ದರ ಪ್ರೊಸೀಡಿಂಗ್ಸ್ ಅನ್ನು ಕೊಡಿ. ತಿಂಗಳಿಗೆ ಒಂದು ಸಾರಿ ಮಾಡತಕ್ಕಂಥ ಮೀಟಿಂಗ್ ಇದಾಗಿದೆ. 15 ದಿವಸಗಳಿಗೊಂದು ಸಾರಿ ಮಾನ್ಯ ಗೃಹ ಸಚಿವರು ಎಷ್ಟು ಮೀಟಿಂಗ್ ಮಾಡಿರತಕ್ಕಂಥದ್ದರ ಪ್ರೊಸೀಡಿಂಗ್ಸ್ ಅನ್ನು ಹಂಚಿಬಿಡಿ. ಮತ್ತು ಯಾವ್ಯಾವ ಮೀಟಿಂಗ್ ಗಳಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎನ್ನತಕ್ಕಂಥಾದ್ದನ್ನು ಕೂಡ ಹೇಳಿ. ಇದಕ್ಕೆ ಬಹಳ ಮನಸ್ಸಿಟ್ಟು ಕಮಿಟ್‌ಮೆಂಟ್ ಇಟ್ಟುಕೊಂಡು ಕೆಲಸ ಮಾಡಿದರೆ ಆಗುತ್ತದೆಯೇ ಹೊರತಾಗಿ ಕೇವಲ ಹಾರಿಕೆ ಉತ್ತರಗಳಿಂದ ಯಾರಿಗೂ ಕೂಡ ಸಮಾಧಾನವಾಗುವುದಿಲ್ಲ. ಇನ್ನೊಂದು ಮಹತ್ವದ ವಿಷಯವೇನೆಂದರೆ, ಬರಗಾಲಕ್ಕೆ ತುತ್ತಾಗಿರತಕ್ಕಂಥ ತಾಲ್ಲೂಕುಗಳು ಹೆಚ್ಚು ಕಡಿಮೆ ಉತ್ತರ ಕರ್ನಾಟಕದಲ್ಲಿ ಜಾಸ್ತಿ ಇದೆ. ದಕ್ಷಿಣ ಕರ್ನಾಟಕದಲ್ಲಿ ತುಮಕೂರು, ಕೋಲಾರ, ದಾವಣಗೆರೆ, ಚಿತ್ರದುರ್ಗ ಇವೆಲ್ಲ Employment guarantee scheme ನಲ್ಲಿ ಸೇರಿದ್ದು, ಇದರ ಜೊತೆಗೆ ಬರಗಾಲಕ್ಕೂ ಸೇರಿಸಬೇಕೆಂಬ ಕೂಗಿದೆ. ಮತ್ತು ಅತಿವೃಷ್ಟಿ ಭಾಗ ಒಂದು ಕಡೆ ಇದೆ. ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿ ಲುಕ್ಸಾನು ಆಗಿರತಕ್ಕಂಥ ಜಿಲ್ಲೆಗಳಾಗಿವೆ. ಮತ್ತೆ, ಬೆಳಗಾಂ, ಗುಲ್ಬರ್ಗಾ, ರಾಯಚೂರು, ಬಾಗಲಕೋಟೆಯಂಥ ಐದು ಜಿಲ್ಲೆಗಳಿಗೆ ಯಥಾಪ್ರಕಾರ ಮಹಾರಾಷ್ಟ್ರದವರು ಮಾಡಿದಂಥ Man made Calamity ರೀತಿಯಲ್ಲಿ ಅವರಿಗೆ Excess ನೀರು ಬಂತು ಅಂದರೆ ಕೊಲ್ಲಾಪುರದಿಂದ ನೀರು ಬಿಟ್ಟುಬಿಟ್ಟ ತಕ್ಷಣವೇ ಅದು ಕೃಷ್ಣಾನದಿಯ ಎರಡೂ ಕಡೆ ಇರತಕ್ಕಂಥ ದಂಡೆಯ ಹಳ್ಳಿಗಳು ಮುಳುಗಿಹೋಗತಕ್ಕಂಥಾದ್ದರ ಜೊತೆಗೆ ಕೋಟ್ಯಾಂತರ ರೂಪಾಯಿಯ Crop ಕೂಡ ಹಾಳಾಗುತ್ತಿದೆ because ಅವರು unscientific ಆಗಿ ರಾತ್ರೋ ರಾತ್ರಿ ನೀರು ಬಿಡುತ್ತಾರೆ. ಈ ವಿಷಯವನ್ನು ಅನೇಕ ಸಾರಿ ನಮ್ಮ ಇಂಜಿನೀಯರ್‌ಗಳಿಗೆ ತಿಳಿಸತಕ್ಕಂಥ ಕೆಲಸವನ್ನು ಅವರು ಮಾಡದೇ ಇರುವುದರಿಂದ ನಾವು ಇವತ್ತಿನ ದಿವಸ Sufferers ಆಗಿದ್ದೇವೆ. ಅಲ್ಲಿ ಹೆಚ್ಚಿನ ಮಳೆ ಬಂದಿಲ್ಲ, ಬೆಳಗಾಂಗೆ ಎಕ್ಸೆಸ್ ರೇನ್ ಏನೂ ಇಲ್ಲ. ಬಿಜಾಪೂರಕ್ಕೆ ಎಕ್ಸೆಸ್ ರೇನ್ ಇಲ್ಲ. ಬಾಗಲಕೋಟಕ್ಕೆ ಎಕ್ಸೆಸ್ ರೇನ್ ಇಲ್ಲ. ಗುಲ್ಬರ್ಗಾ ಹಾಗೂ ರಾಯಚೂರಿಗೂ ಇಲ್ಲ. ಅಲ್ಲಿ ಕೇವಲ ಈ ಒಂದು ಹೆಚ್ಚಿನ ನೀರನ್ನು ಬಿಟ್ಟಿದ್ದಕ್ಕಾಗಿ More than three lakh cusecs ನೀರು ಬಿಟ್ಟಿದ್ದಕ್ಕಾಗಿ ಇವತ್ತಿನ ದಿವಸ ಅವೆಲ್ಲಾ ಕೂಡ ಸಫರ್ ಆಗುತ್ತಿವೆ. ಅದೇ ರೀತಿಯಾಗಿ ಇವತ್ತು ಬೀದರ್‌ನಲ್ಲಿಯೂ ಕೂಡ ಮಾಂಜ್ರಾ ನದಿಗೆ ಹೆಚ್ಚಿನ ನೀರನ್ನು ಬಿಟ್ಟು ಔರಾದ್ ಮತ್ತು ಬಾಲ್ಕಿ ತಾಲ್ಲೂಕಿನಲ್ಲಿ ಕೂಡ ಆ ನದಿಯ ದಂಡೆಯ ಮೇಲಿರತಕ್ಕಂಥ ಹಳ್ಳಿಗಳು ನೀರಿನಲ್ಲಿ ಮುಳುಗಿ ಹೋಗಿವೆ. ಹೀಗೆ ಅನೇಕ ಸಮಸ್ಯೆಗಳು ಇವೆ. ಈ ಸಮಸ್ಯೆಗೆ ಸ್ಪಂದಿಸುವಂಥ ಕೆಲಸವನ್ನು ಸರ್ಕಾರ ಮಾಡಿದರೆ ಜನ ಶಹಬಾಷ್‌ಗಿರಿಯನ್ನು ಕೊಡುತ್ತಾರೆ.

ಯಾರಾದರೂ ಹೇಳಿದ್ದು ಕೇಳುವುದಿಲ್ಲ. ಅವರು ಖುದ್ದಾಗಿ ತಿಳಿದು ಮಾಡುವುದಿಲ್ಲ. ಅವರಿಗೆ ಏನು ಹೊಳೆಯುತ್ತದೆಂದರೆ ಅದನ್ನೇ ಮಾಡುವುದು ಅದನ್ನೇ ಸರಿ ಎಂದು ಹೇಳುವುದು. ನಾನು ವಿರೋಧ ಪಕ್ಷದಲ್ಲಿ ಡೆಪ್ಯೂಟಿ ಲೀಡರ್ ಆಗಿದ್ದೆ, ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದರು. ಆಗ ನಾವು ಕೆಲವು ಸಲಹೆಗಳನ್ನು ಕೊಟ್ಟಾಗ ಆಗ ಅವರು ಹೇಳಿದರು. ಈ ಒಂದು ಟಾಸ್ಕ್‌ಫೋರ್ಸ್ ಇಡೀ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದಕ್ಕೆ ನಿಮ್ಮ ನೇತೃತ್ವದಲ್ಲೇ ಒಂದು ಕಮಿಟಿಯನ್ನು ಮಾಡುತ್ತೇವೆಂದು ಹೇಳಿ ಒಂದು ಕಮಿಟಿಯನ್ನು ಮಾಡಿದರು. ನಾವೆಲ್ಲಾ ಕಡೆ ಹೋಗಿ ಒಂದು ರಿಪೋರ್ಟನ್ನು ಕೊಟ್ಟೆವು. ಎಲ್ಲಿ ನೀರು ಇಲ್ಲ ಎಲ್ಲಿ ಕೆಲಸ ಇಲ್ಲ ಎಲ್ಲಿ ಬೆಳೆ ಹಾನಿಯಾಗಿದೆ ಅಥವಾ ಎಲ್ಲಿ ಫಾಡರ್ ಇಲ್ಲ. ಇದೆಲ್ಲವನ್ನೂ ಕೂಡ, ಹೋಗಿ ನೋಡಿ ವರದಿ ಕೊಟ್ಟೆವು. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಏನು ಹೇಳಿದರೂ ಕೂಡ ಪಾರ್ಟಿ ಬೇಸಿಸ್ ಮೇಲೆ ಯೋಚನೆ ಮಾಡುತ್ತಿದ್ದಾರೆಯೇ ಹೊರತಾಗಿ ಅವರಿಗೆ ಕ್ರೆಡಿಟ್ ಹೋಗುತ್ತದೆ ಇವರಿಗೆ ಹೋಗುತ್ತದೆ. ಅಥವಾ ನಾನು ಮಾಡಿದ್ದೇ ಸರಿ ಅನ್ನುವ ರೀತಿಯಲ್ಲಿ ಇದೆ. ಈಗ ಕಾಂಪಿಟೇಶನ್ ಏನು ನಡೆದಿದೆ ಎಂದರೆ ತರಾತುರಿಯಲ್ಲಿ ಬಿಲ್ಡಿಂಗ್‌ಗಳಿಗೆ ಅಡಿಗೆ ಕಲ್ಲನ್ನು ಹಾಕುವುದು. ಆಲಮಟ್ಟಿಯಾಗಿ 10 ವರ್ಷ ಆದ ನಂತರ ಈಗ ಹೋಗಿ ಒಂದು ಕಲ್ಲನ್ನು ಹಾಕುವುದು. ಬೆಣ್ಣೆತೊರಾ ಯೋಜನೆ ನಮ್ಮ ಕಾಲದಲ್ಲಿ ಟರ್ನ್‌ಕೀ ಬೇಸಿಸ್ ಮೇಲೆ ಮಾಡಿ ಒಂದು ರೂಪಕ್ಕೆ ತಂದಿದ್ದೇವೆ ಅದಕ್ಕೆ ಹೋಗಿ ಒಂದು ಕಲ್ಲನ್ನು ಹಾಕುವುದು. ಬಂಡೋರಿ ನಾಲಾ ಇವತ್ತು 99% ಮುಗಿಯಲಿಕ್ಕೆ ಬಂದಿದೆ ಅದಕ್ಕೆ ಯಾವಾಗ ಕಲ್ಲು ಹಚ್ಚುತ್ತಾರೋ ಗೊತ್ತಿಲ್ಲ. ಬೆಳಗಾಂನಲ್ಲಿ ಮಾರ್ಕಂಡೇಯಾ ಈಗ ಅದು 99.99% ಮುಗಿದು ಹೋಗಿದೆ, ಹರಿನಾಲಾ ಮುಗಿದು ಹೋಗಿದೆ. ಸುಮಾರು 19 ಕ್ಕಿಂತಲೂ ಹೆಚ್ಚಿನ ಡ್ಯಾಮ್‌ಗಳು ಕನ್‌ಸ್ಟ್ರಕ್ಷನ್ ಹಂತದಲ್ಲಿವೆ ಅದಕ್ಕೆ ನೀವು ಕಲ್ಲು ಹಾಕಿ ನಮ್ಮ ಸರ್ಕಾರ ಈ ಕೆಲಸ ಮಾಡಿದೆ ಅಂತ ಹೇಳುವುದು. 50 ವರ್ಷದಲ್ಲಿ ಇವರು ಏನು ಮಾಡಿದ್ದಾರೆ. ಅಂತ ಹೇಳಿಕೊಂಡು ಹೋಗುವುದು. . . . . .

ಶ್ರೀ ಆರಗ ಜ್ಞಾನೇಂದ್ರ : ಕಳಸಾ ಬಂಡೂರಿ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಳಸಾ ಬಂಡೂರಿ ಬಗ್ಗೆ ಏನು ಮಾಡಿದಿರಿ. ಜ್ಞಾನೇಂದ್ರ ರವರೇ ಸಿಟ್ಟಿಗೆ ಬರಬೇಡಿ. ಹಾಗಾದರೆ ಎನ್.ಡಿ.ಎ. ಸರ್ಕಾರ ನಿಮ್ಮದೇ ಇತ್ತಲ್ಲಾ, ಗೋವಾದಲ್ಲಿ ನಿಮ್ಮದೇ ಪಾರ್ಟಿ ಇತ್ತು. ಆಗ ಕಳಸಾ ಬಂಡೂರಿ ನಾಲಾ ಬಗ್ಗೆ ಬೆಳಗಾಂನಲ್ಲಿ ಎಷ್ಟು ಸತ್ಯಾಗ್ರಹ ನಡೆಯಿತು. ಧಾರಾವಾಡದಲ್ಲಿ ಕೂಡ ನಡೆಯಿತು. ಆಗ ಏಕೆ ಇದನ್ನು ತರಲಿಲ್ಲ?

ಶ್ರೀ ಆರಗ ಜ್ಞಾನೇಂದ್ರ : ಅದನ್ನು ನೀವು ತರುವುದಕ್ಕೆ ಪ್ರಯತ್ನ ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ನಿಮ್ಮನ್ನು ಕರೆದುಕೊಂಡು ಹೋಗಿಯೇ ಪ್ರಯತ್ನ ಮಾಡಿದ್ದೇವೆ. ಎಲ್ಲರನ್ನೂ ಕರೆದುಕೊಂಡು ಹೋಗಿ ಪ್ರಯತ್ನ ಮಾಡಿದ್ದೇವೆ. ನಿಮ್ಮ ಕಾಲದಲ್ಲೂ ಮಾಡಿದ್ದೇವೆ ನಮ್ಮ ಕಾಲದಲ್ಲೂ ಮಾಡಿದ್ದೇವೆ. ಸುಪ್ರೀಂಕೋರ್ಟಿನಲ್ಲಿದ್ದ ಪೆಟಿಷನ್ ಡಿಸ್‌ಮಿಸ್ ಆಯಿತು ಎಂದು ಹೇಳಿ ಆ ಕೋರ್ಟ್ ಆಶೀರ್ವಾದ ಹೊರತಾಗಿ, ನಿಮ್ಮ ಪ್ರಯತ್ನದಿಂದ ಏನೂ

ಇಲ್ಲ. ಅಥವಾ ನೀವೇನೂ ಅಲ್ಲಿಗೆ ಹೋಗಿ ಆ ಸ್ಟೇ ಏನು ವೆಕೇಟ್ ಮಾಡಿಸಿಕೊಂಡು Abeyance ಇದ್ದದ್ದನ್ನು ತೆಗೆಸಿದಿರಿ ಎಂದು ಏನೂ ಅಲ್ಲ. ಅದು ಏನೇ ಆಗಲಿ ಈ ಭಾಗದ ಜನರಿಗೆ ಚೆನ್ನಾಗಿ ಆಗುತ್ತದೆಂದು ಹೇಳಿ ನಾವೆಲ್ಲರೂ ಕೂಡ ಪ್ರಯತ್ನ ಮಾಡಿದ್ದು, ಅಷ್ಟೇ ಅಲ್ಲ ನಾನೂ ಕೂಡ ಇದೇ ಮಾತನ್ನು ಹೇಳಿದ್ದೇನೆ. ಒಂದು ವೇಳೆ Abeyance ನ್ನು ಕೇಂದ್ರ ಸರ್ಕಾರದವರು ತೆಗೆಯಲಿಲ್ಲವೆಂದರೆ ನಾವು ಯಾವುದೇ ರೀತಿಯಿಂದಾದರೂ ಈ ಕೆಲಸವನ್ನು ಪ್ರಾರಂಭ ಮಾಡೋಣವೆಂದು ಸ್ಪಷ್ಟವಾಗಿ ಮೊದಲೂ ಕೂಡ ಹೇಳಿದ್ದೆವು. ಅನೇಕ ಡ್ಯಾಮ್‌ಗಳು ಕೆರೆಗಳು ಕಟ್ಟಿ ನಿಂತಿದ್ದನ್ನು 6 ತಿಂಗಳಲ್ಲಿ ರೆಡಿಯಾಗಿದ್ದಾವೆಂಬುದು ನಮ್ಮ ಭಾವನೆ. ಎಲ್ಲವೂ six monthsನಲ್ಲಿ ಈ ನಿಸರ್ಗದ ನಿಯಮ, ಒಂದು ಬೀಜ ಬಿತ್ತಿದರೆ ಫಲ ಸಿಗಬೇಕಾದರೆ ಆ ತಳಿ ಹಾಗೂ ಗಿಡದ ಮೇಲೆ ಕನಿಷ್ಠ 5, 6 ವರ್ಷ ಬೇಕಾಗುತ್ತದೆ. ಮನುಷ್ಯ ಬೀಜ ಬಿತ್ತಿದರೂ ಕೂಡ ಅದಕ್ಕೆ 9 ತಿಂಗಳು 9 ದಿವಸ ಬೇಕು. ಇವರೆಲ್ಲರು 6 ತಿಂಗಳಲ್ಲಿಯೇ ಆಗಿದೆ ಎಂದು ಹೇಳುತ್ತಾರೆ. ಎಲ್ಲಾ 6 ತಿಂಗಳಲ್ಲಿ ಇದು ನಮ್ಮದು ಇದು ನಮ್ಮದು ನೀವು ಏನು ಮಾಡಿದಿರಿ. 50 ವರ್ಷದಲ್ಲಿ ಏನು ಮಾಡಿದಿರಿ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ. ಸ್ವಾಮಿ, ನಾವು 50 ವರ್ಷದಲ್ಲಿ ಏನೂ ಮಾಡದೇ ಹೋಗಿದ್ದರೆ, ಬೆಳಗಾಂನಲ್ಲಿ ಅಧಿವೇಶನ ನಡೆಯುತ್ತಿತ್ತಾ? 50 ವರ್ಷದಲ್ಲಿ ಕಾಂಗ್ರೆಸ್ ಏನೂ ಮಾಡದೇ ಹೋಗಿದ್ದರೆ, ಬೆಳಗಾಂನಲ್ಲಿ ಅಧಿವೇಶನ ನಡೆಯುತ್ತಿತ್ತಾ? 50 ವರ್ಷದಲ್ಲಿ ಕಾಂಗ್ರೆಸ್ ಏನೂ ಮಾಡದೇ ಹೋಗಿದ್ದರೆ ಭಾಕ್ರಾನಾಂಗಲ್ ಎನ್ನುವಂಥ ಡ್ಯಾಮ್ ಕಟ್ಟಿಸಿ ಯಾರಿಗೆ ಹೊಟ್ಟೆಗೆ ಅನ್ನವಿಲ್ಲ ಈ ದೇಶದಲ್ಲಿ ಅಮೇರಿಕದಿಂದ ಗೋಧಿಯನ್ನು ತರಿಸಿ ತಿನ್ನುತ್ತಿದ್ದರು, ಅವರಿಗೆ ಇವತ್ತು surplus ಆಗಿ ನೀವು ನಾವೆಲ್ಲರೂ ಕೂಡ Employment guarantee ನಲ್ಲಿ ಅಕ್ಕಿ ಕೊಡಿ ಎಂದು ಕೇಳುತ್ತಿದ್ದೇವಾ? ಇವೆಲ್ಲವನ್ನೂ ಕೂಡ ಮಾಡಿದ್ದನ್ನು ಯಾರೂ ಹೇಳುವುದಿಲ್ಲ. ಸುಮ್ಮನೆ ಹೇಳುವುದು 50 ವರ್ಷದಲ್ಲಿ ಪಂಡಿತ್ ಜವಾಹರಲಾಲ್‌ನಂತಹ ಮುತ್ಸದ್ದಿ, ಲಾಲ್‌ಬಹಾದ್ದೂರ್‌ಶಾಸ್ತ್ರಿ ಅಂತಹ ಮುತ್ಸದ್ದಿಗಳು ಇಂದಿರಾಗಾಂಧೀಜಿಯವರಂತಹ ಸಾಮಾಜಿಕ ನ್ಯಾಯ ಕೊಡತಕ್ಕಂಥವರು, ಯಾವ ಬ್ಯಾಂಕಿನಲ್ಲೂ ಬಡವರು ಕಾಲು ಇಡುತ್ತಿರಲಿಲ್ಲ ಅಂತಹ ಕಡೆ ಹೋಗಿ ನೀವು ಸಾಲವನ್ನು ಪಡೆದುಕೊಂಡು ಇವತ್ತು ಬಾಳಿ ಬದುಕಿ ಎಂದು ಹೇಳಿ ಭೂಸುಧಾರಣೆ ಕಾನೂನುಗಳು ಇಂತಹದ್ದನ್ನು ಮಾಡಿದವರಿಗೆ ನೀವೇನು ಮಾಡಿದಿರಿ. ಹಾವನೂರ್ ಕಮಿಷನ್ ಜಾರಿಯಲ್ಲಿ ತಂದು ಹಿಂದುಳಿದ ಜನಾಂಗಕ್ಕೆ ಒಂದು ಕ್ಲರ್ಕ್ ಪೋಸ್ಟ್ ಸಿಗುತ್ತಿರಲಿಲ್ಲ. ಒಂದು ಮೆಡಿಕಲ್ ಸೀಟ್ ಸಿಗುತ್ತಿರಲಿಲ್ಲ. ಅಂತಹವರಿಗೆ ಸಾವಿರಾರು ಮೆಡಿಕಲ್ ಸೀಟ್ಸ್ ಸಾವಿರಾರು ಸಂಖ್ಯೆಯಲ್ಲಿ ರಿಕ್ರೂಟ್‌ಮೆಂಟ್ ಆಗುವಾಗ ಅದು ಎಲ್ಲಾ ಕೂಡ ಅಚೀವ್‌ಮೆಂಟ್ ನಮ್ಮದು ಇದ್ದರೂ "ನೀವು ಏನೂ ಮಾಡಿಲ್ಲ" ಎನ್ನುತ್ತೀರಿ. ನಾವೂ ಪೂರ್ತಿ ಪಟ್ಟಿ ಬರೆದುಕೊಂಡು ಎಲ್ಲಾ ಕಡೆ ಹೇಳಿಕೊಂಡು ಓಡಾಡೋಣವೇ? ಜನರಿಗೆ ಗೊತ್ತಿದೆ. ಮಾನ್ಯ ಹನುಮಂತಯ್ಯನವರು ಕಟ್ಟಿಸಿದ ವಿಧಾನಸೌಧ ಕೂಡ ಕಾಂಗ್ರೆಸ್ ಪಾರ್ಟಿಯದ್ದೇ ಅದು ಏನು ಬೇರೆ ಬೇರೆಯವರ ಹೆಸರಿಗೆ ಹೋಗುವುದಿಲ್ಲ. ಲಿಂಗನಮಕ್ಕಿಡ್ಯಾಮ್ ಕಟ್ಟಿದವರೂ ಕೂಡ ಮಾನ್ಯ

ನಿಜಲಿಂಗಪ್ಪನವರೇ ಹೇಮಾವತಿ ಹಾಗೂ ಹಾರಂಗಿಡ್ಯಾಮ್ ಕಟ್ಟಿಸಿದವರೂ ಕಾಂಗ್ರೆಸ್ ಪಾರ್ಟಿಯವರೇ ನಾನು ಪಟ್ಟಿಯನ್ನು ಹೇಳಿಕೊಂಡು ಹೋಗುವುದಿಲ್ಲ. ನಾನು ಹೇಳುವುದು ಇಷ್ಟೆ. ನಾವು ಹಿಂದಿನ ಕಥೆಗಳನ್ನು ತೆಗೆದುಕೊಂಡು ನಾವು ಇದನ್ನು ಮಾಡಿದ್ದೇವೆಂದು ಹೇಳುವುದಿಲ್ಲ. ನೀವು Bicycle 25 ಕೋಟಿ ರೂ ಗಳದ್ದು ಕೊಟ್ಟಿದ್ದೀರಿ. ನೀವು Bicycle ಕೊಟ್ಟಿರುವುದನ್ನೇ ಹೇಳಿಕೊಂಡು ಹೋಗುತ್ತಿದ್ದೀರಿ. ಆದರೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಯರಿಗೆ ಕೋಟ್ಯಾಂತರ ರೂ.ಗಳ ಬಿಸಿಯೂಟವನ್ನು ಕೊಟ್ಟಿರುವುದನ್ನು ನೀವು ಹೇಳುವುದಿಲ್ಲ. ಲಕ್ಷಾಂತರ ಮನೆಗಳನ್ನು ಕಟ್ಟಿಸಿದ್ದು ಕೋಟ್ಯಾಂತರ ರೂ.ಗಳನ್ನು ತಂದು ಇವತ್ತಿನ ದಿವಸ ಸೂರು ಕೊಟ್ಟಿದ್ದು ಹೇಳುವುದಿಲ್ಲ. ಅದೇ ರೀತಿಯಾಗಿ ನೂರಾರು ಸ್ಕೂಲ್ ಬಿಲ್ಡಿಂಗ್ ಕಟ್ಟಿಸಿದ್ದು ಹೇಳುವುದಿಲ್ಲ. World Bank ನಿಂದ ಧರ್ಮಸಿಂಗ್‌ಜಿ ನೇತೃತ್ವದಲ್ಲಿ P.W.D. Minister ಇದ್ದಾಗ ಸುಮಾರು 2000–3000 ಕೋಟಿ ರೂ.ಗಳನ್ನು ತಂದು ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಿದ್ದು ಯಾರೂ ಹೇಳುವುದಿಲ್ಲ. ಮಳೆಗಾಲದಲ್ಲಿ ರಸ್ತೆ ಕೆಟ್ಟಾಗ ನಮ್ಮದೇ ಕೆಟ್ಟಿತಾ? ನಿಮ್ಮ ಯಾವ ರಸ್ತೆ ಕೆಡುವುದಿಲ್ಲವೆ? 20 ವರ್ಷ ನಿಮ್ಮ ರಸ್ತೆಗಳು Permanent ಆಗಿ ಹಾಗೆ ಉಳಿಯುತ್ತವಾ?

ಅಧ್ಯಕ್ಷರು : ಮಾನ್ಯ ಖರ್ಗೆ ಸಾಹೇಬರೆ, World Bank ನಿಂದ ದುಡ್ಡನ್ನು ತಂದಿದ್ದೀರಿ ಸರಿ. ಕೋಟಿ ಕೋಟಿ ರೂ.ಗಳ ಲೆಕ್ಕವಿರುವುದು ಸರಿ. ಕೋಟಿ ಕೋಟಿ ರೂ.ಗಳಲ್ಲಿ ಎಷ್ಟು ಸದುಪಯೋಗವಾಗಿದೆ ಅದರ ಬಗ್ಗೆನೂ ಸ್ವಲ್ಪ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋ, ನೋ. ಅದಕ್ಕೆ ನಾನು ಹೇಳುತ್ತೇನಲ್ಲಾ ಸದುಪಯೋಗವಾಗಿಲ್ಲವೆಂದರೆ ಅದಕ್ಕೆ ಶಿಕ್ಷೆ ಕೊಡುವುದಕ್ಕೆ ಬೇರೆ ಸಂಸ್ಥೆ ಇದೆ. ನಿಮ್ಮದು ಸದುಪಯೋಗವಾಗಿಲ್ಲವೆಂದರೂ ಕೊಡಿಸಬಹುದು, ನಮ್ಮದೂ ಕೊಡಿಸಬಹುದು. ಆದರೆ ನೀವು ಅದನ್ನೇ ಹೇಳಿಕೊಂಡು ಎಸ್ಕೇಪ್ ಆಗುವುದಕ್ಕಾಗುವುದಿಲ್ಲ. ಅವರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಕೊಡಿಸೋಣ. ನೀವು ತಪ್ಪು ಮಾಡಿದರೆ ಶಿಕ್ಷೆಗೆ ಒಳಗಾಗಬೇಕು, ಅದಕ್ಕೆ ತಯಾರಿರಬೇಕು. ಬರೀ ನಮ್ಮ ಫೋಟೋ ತೋರಿಸಿ ಶಿಕ್ಷೆಯಿಂದ ಪಾರಾಗಬೇಕೆಂದರೆ ಹೇಗೆ? ಈ ರೀತಿಯಾಗಿ ನಡೆಯುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತೇನೆ. ಯಾವುದೇ ಒಂದು ದೇಶ ಕಟ್ಟಬೇಕೆಂದರೆ, ಡೆವಲಪ್ ಮಾಡುತ್ತಾ ಮಾಡುತ್ತಾ ದೇಶ ಮುಂದೆ ಬರುತ್ತದೆ. ಅದರ ಬಗ್ಗೆ ನಮ್ಮಲ್ಲಿ ಹಿಂದಿಯಲ್ಲಿ ಒಂದು ಹೇಳುತ್ತಾರೆ. ಬಸ್ತೆ ಅಂದರೆ ಅದು ಬಸ್ತೆ ಬಸ್ತೆ ಬಸ್ತಿ ಆಗುತ್ತದೆ. ಅಂದರೆ ನೆಲೆಸಿಕೊಂಡು ಹೋದಹಾಗೆ ಊರು ಹುಟ್ಟುತ್ತದೆ. ಅಂದರೆ ಒಂದೇ ದಿವಸದಲ್ಲಿ ಹುಟ್ಟುತ್ತದೆಯಾ? ಹಾಗೆ ನಾವೆಲ್ಲರೂ ಕೂಡ ಪ್ರಯತ್ನವನ್ನು ಮಾಡಿ ಈ ದೇಶವನ್ನು ಅಭಿವೃದ್ಧಿಪಡಿಸಬೇಕೆಂದು ಮನಸ್ಸು ಮಾಡಿದರೆ ಆಗುತ್ತದೆಯೇ ಹೊರತಾಗಿ ಎಲ್ಲದ್ದಕ್ಕೂ ಏನಾದರೊಂದು ಹೇಳಿಕೊಂಡು ನಾವು ಕಾಲವನ್ನು ಕಳೆಯಬೇಕೆಂದರೆ ಆ ಮಾತು ಬೇರೆ. ಅದಕ್ಕೆ ಏನೂ ಔಷಧಿ ಇಲ್ಲ. ಏಕೆಂದರೆ ಅವರು ಅದೇ ಮಾಡುತ್ತಾರೆ ನಾವು ಇದನ್ನೇ ಹೇಳುತ್ತೇವೆ. ಅದಕ್ಕಾಗಿ ನಮ್ಮ ಗೃಹ ಸಚಿವರು ಪದೇ ಪದೇ ಹೇಳುತ್ತಾರೆ. you have got your

say. We have got our own way. ಏಕೆಂದರೆ ಮೆಜಾರಿಟಿ ಇದೆ. we have got our own way to do things. You have got to say in democracy" ನೀವು ಏನು ಹೇಳಬೇಕು ಅದನ್ನು ನೀವು ಹೇಳಿ. ಏನು ಬೊಗಳಬೇಕು ಬೊಗಳಿ ಹೋಗಿ ನಾವು ಮಾಡುವುದನ್ನು ಮಾಡುತ್ತೇವೆಂದು" ಅವರು ಎರಡು-ಮೂರು ಸಲ ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕಾಗಿ ಇಂತಹ ಪರಿಸ್ಥಿತಿಯಲ್ಲಿ ಇವರು ಇರುವಾಗ ಬರಗಾಲದ ಕೆಲಸ ಯಾವುದು ಆಗಿದೆ ಎನ್ನುವುದು ಮುಖ್ಯ. ಇದರ ಬಗ್ಗೆ ನೀವು ಅಂಕಿ ಸಂಖ್ಯೆಗಳನ್ನು ತರಿಸಿಕೊಂಡು ನೋಡಿ. ಅದರ ಬಗ್ಗೆ ಸದನದಲ್ಲೂ ಕೂಡ ಇಡಿ. ಯಾವ ಕೆಲಸಗಳೂ ಕೂಡ ಎಲ್ಲಿಯೂ ಕೂಡ ನಡೆದಿರುವುದಿಲ್ಲ. ಇದರ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಬಸವರಾಜರಾಯರೆಡ್ಡಿಯವರೂಕೂಡ Challenge ಮಾಡಿದರು. ಅ ಬಗ್ಗೆ Government orderನ್ನು ತಂದು ಸ್ಪಷ್ಟವಾಗಿ ಹೇಳಿದರು. ಇದರಲ್ಲಿ ಯಾವ್ಯಾವ್ಯಾಗ ಹಣ ಬಿಡುಗಡೆಯಾಗಿದೆ, ಏನೇನು ಆಗಿದೆ ಎಂದು ಹೇಳಿದರು, ಅದಕ್ಕೆ ಉತ್ತರವೇನೂ ಇಲ್ಲ. ಇರಲಿ, ಒಂದು ಕಡೆ ಬರಗಾಲದ ಪರಿಸ್ಥಿತಿ ಇನ್ನೊಂದು ಕಡೆ ಡಾ. ನಂಜುಂಡಪ್ಪನವರ ವರದಿಯನ್ನು ನಾವು ಜಾರಿಯಲ್ಲಿ ತರುತ್ತೇವೆ, ಇದನ್ನು ಹೇಗೆ ತರಬೇಕು? ಯಾವುದೇ ಸರ್ಕಾರ ಒಂದೇ ದಿವಸದಲ್ಲಿ ಜಾರಿಯಲ್ಲಿ ತರುವುದಕ್ಕೆ ಆಗುವುದಿಲ್ಲ. ಏಕೆಂದರೆ 19000 ಕೋಟಿ ರೂಪಾಯಿಗಳು ಅವರು ಹೇಳಿರುವುದನ್ನು ಯಾವ ಸರ್ಕಾರವೂ ಕೂಡ mobilize ಮಾಡಿ ಒಂದೇ ವರ್ಷದಲ್ಲಿ 19000 ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಆದರೆ ಹಂತಹಂತವಾಗಿ ಅದನ್ನು ಕೊಡಬೇಕು ನಾವು 5 ವರ್ಷಗಳನ್ನು ಲೆಕ್ಕ ಹಾಕಿಕೊಂಡರೂ ಕೂಡ ಅದರ escalation ಎಷ್ಟು ಆಗುತ್ತದೆ ಅದನ್ನು ನೋಡಿಕೊಂಡು ಅಷ್ಟು ಹಣವನ್ನು ಇಟ್ಟುಕೊಂಡು ಅದನ್ನು 5 ವರ್ಷಕ್ಕೆ ಮಾಡಬೇಕು. ಆದರೆ, ಇಲ್ಲಿ ಆಶ್ಚರ್ಯವೇನೆಂದರೆ, ಆ ನಂಜುಂಡಪ್ಪನವರ ವರಿದಿಯನ್ನು ಒಂದು ಕಡೆ ಬಿಟ್ಟುಬಿಡಿ. ಅದಕ್ಕೆ ಹಣ ಕೊಡುವ ವಿಷಯ ಬೇರೆ ಉಳಿಯಿತು. ಇರತಕ್ಕಂತಹ ಯೋಜನೆಗಳಲ್ಲಿಯೇ discrimination ಈಗ ನಾನು ಕೇಳುತ್ತೇನೆ. ಮೊನ್ನೆ High school ನ್ನು ಕೊಟ್ಟರು. ಏನು ಅದನ್ನು ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಕೊಟ್ಟಿದ್ದಾರೋ? ಏಕೆಂದರೆ, ಅದರಲ್ಲಿ Criteria ಹಾಕಿದ್ದಾರಲ್ಲಾ? Backward most backward ಮತ್ತು Normal ಒಟ್ಟಿಗೆ 3 category ಮಾಡಿದ್ದಾರೆ. ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? Junior college ಕೊಟ್ಟಿದ್ದೀರಿ, ಏನು ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಕೊಟ್ಟಿದ್ದೀರಾ? CRF FUND ಕೊಟ್ಟಿದ್ದೀರಿ, ನಂಜುಂಡಪ್ಪನವರ ವರಿದಿಯ ಮೇಲೆ ಕೊಟ್ಟಿದ್ದೀರಾ? discretionary fund ಕೊಡುತ್ತೀರಿ? XII finance commission ಮೇಲೆ ಅದನ್ನು ನಂಜುಂಡಪ್ಪನವರ ವರದಿಯ ಮೇಲೆ ಕೊಟ್ಟಿದ್ದೀರಾ? ಒಂದೆರಡು ವ್ಯತ್ಯಾಸವಾಗಬಹುದು, ನಿಮಗೆ ಬೇಕಾದವರಿಗೆ ಒಂದಿಬ್ಬರಿಗೆ ಜಾಸ್ತಿ ಕೊಡಬಹುದು. ಇನ್ನು ನಮ್ಮ ಎ.ಟಿ.ರಾಮಸ್ವಾಮಿಯವರು ಸ್ವಲ್ಪ ಕ್ಲೋಸ್ ಆಗಿಬಿಟ್ಟಿದ್ದಾರೆ. ನಮಗೆ 5.00 ಲಕ್ಷ ರೂ. ಗಳನ್ನು ಕೊಟ್ಟರೆ ಅವರಿಗೆ 10.00 ಲಕ್ಷರೂ. ಗಳನ್ನು ಕೊಡಬಹುದು. ಇದು

Exception. One or Two cases ಸಾರಸಗಟಾಗಿ, ಪಾರ್ಟಿ ಬೇಸಿಸ್ ಮೇಲೆ ತಮ್ಮದೇ ಅಂದರೆ ಬೇರೆ ಕಡೆ ನಿಮಗೆ ಮತ ಕಡಿಮೆ ಸಿಕ್ಕಿರಬಹುದು, ಅವರು ಜನರಲ್ಲವೇ? ಏನು ನಾವು ಆರಿಸಿ ಬಂದಿದ್ದೇ ಪಾಪ ಮಾಡಿದ್ದೇವೆಯೇ? ನೀವು ಯಾವುದಾದರೊಂದು norms ಆದರೂ ಹಾಕಿಕೊಳ್ಳಬೇಕು. ಈಗ ಡಾ: ನಂಜುಂಡಪ್ಪನವರ ವರದಿಯ ಪ್ರಕಾರ ಸರಿಪಡಿಸಲಿಕ್ಕೆ ಹೋದ ಬಜೆಟ್ಟಿನಲ್ಲಿ ನಿಮಗೆ ಅವಕಾಶ ಇತ್ತು ಅಥವಾ ಏನು Hospitals, colleges, high schools ಗಳಿಗೆ discretionary funds ನಿಂದ ಕೊಡುತ್ತೀರಿ ಹಾಗೆ ಕೊಡುವಾಗ ಸರಿಯಾದ ರೀತಿಯಿಂದ ನೀವು ಉಪಯೋಗ ಮಾಡಿದ್ದರೆ ಇವತ್ತು ಅಷ್ಟರಮಟ್ಟಿಗೆ ತಾರತಮ್ಯ ಕಡಿಮೆಯಾಗುತ್ತಿತ್ತು. ನೀವು ನೋಡಿ, ಇವತ್ತು 10,000 ಜನಸಂಖ್ಯೆಯಿರುವ ಕಡೆ ಒಂದು ಹೈಸ್ಕೂಲು. ಆ ಕ್ರೈಟಿರಿಯಾ ಮಾಡಿ ನಾವು ಈಗ ಕೊಟ್ಟಿದ್ದೇವೆ. ಹೀಗೇನಾದರೂ ಹೇಳಿದ್ದರೆ ಅನೇಕ ಸಮಸ್ಯೆಗಳು ಬಗೆಹರಿಯುತ್ತಿತ್ತು. ಆದರೆ ಇವತ್ತೇನಾಗಿದೆ, ನೀವು ಯಾವುದೇ ದೃಷ್ಟಿಯಿಂದ ನೀವು ಚಿಂತನೆ ಮಾಡಿ, ನೋಡಿ, ಅದರಲ್ಲಿ ಒಂದೂ ಕೂಡ ನಮೂದು ಮಾಡಿಲ್ಲ ಮತ್ತು ಒಂದೂ ಮಾತನ್ನೂ ಕೂಡ ಹೇಳಿಲ್ಲ. ಈ ಭಾಗದಲ್ಲಿ ಸೆಷನ್ ನಡೆಯಿತು. ಇದೊಂದು ವಿಶೇಷ ಅಧಿವೇಶನ. ಇದಕ್ಕೆ ಜೆ.ಡಿ.ಎಸ್. ಹಾಗೂ ಬಿ.ಜೆ.ಪಿ ಯವರು ಮೆರುಗು ತಂದಿದ್ದಾರೆ ಎಂದು. ನಂಜುಂಡಪ್ಪ ವರದಿ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ಆಗಬೇಕೆಂದು ನಿಮ್ಮ ಮನಸ್ಸಿನಲ್ಲಿ ಇದ್ದಿದ್ದರೆ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಸೇರಿಸಬಹುದಾಗಿತ್ತು? ಏನು ಸೇರಿಸಿದ್ದೀರಿ? ಅಧ್ಯಕ್ಷರೆ, ತಮಗೆ ಗೊತ್ತಿದೆ ನಾವು ರಾತ್ರಿ 11.20 ಗಂಟೆಯವರೆಗೆ ಚರ್ಚೆ ಮಾಡಿದ್ದೇವೆ. ಯಾವ ಮಾತು ಅದರಲ್ಲಿ ಸೇರಿವೆ? ಯಾವ ಕೆಲಸಗಳು ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಬಂದಿದೆ? ಸುಮಾರು 1409 ಕೋಟಿ ರೂ. ಗಳಷ್ಟು ಸಪ್ಲಿಮೆಂಟರಿ ಬಜೆಟ್ಟಿನಲ್ಲಿದೆ. ಆದರೆ ಉತ್ತರ ಕರ್ನಾಟಕಕ್ಕೆ ಸಿಕ್ಕಿದ್ದೇನು? ಏನೂ ಇಲ್ಲ? ಅದಕ್ಕೇನಾದರೂ ಪ್ರಾವಿಜನ್ ಮಾಡಿದ್ದೀರಾ? ಈಗ ಘೋಷಣೆ ಮಾಡುತ್ತಾರಂತೆ, ಅರೆ! ನಿಮ್ಮ ರೆಗ್ಯುಲರ್ ಬಜೆಟ್ ಮಾರ್ಚ್‌ನಲ್ಲಿ ಮುಗಿಯಿತು. ಸಪ್ಲಿಮೆಂಟರಿ ಬಜೆಟ್ ಮೊನ್ನೆ ಪಾಸ್ ಮಾಡಿಕೊಂಡಿದ್ದೀರಿ. ಈಗ ನಂಜುಂಡಪ್ಪ ವರದಿಯ ಮೇಲೆ "ನಾನು ಘೋಷಣೆ ಮಾಡುತ್ತೇನೆ." ಎಂದು ನಿಮ್ಮ ಘೋಷಣೆಗಳನ್ನು ತೆಗೆದುಕೊಂಡು ಮುಂದೆ ಬರುವಂತಹ ಸರ್ಕಾರಗಳು, ಏಕೆಂದರೆ ಪ್ರತಿಯೊಂದಕ್ಕೂ ಹೇಳಿಬಿಡುತ್ತೀರಲ್ಲಾ? ಅದಕ್ಕೆ ನಾವು 200 ಕೋಟಿ ರೂ. ಗಳ ಕಲ್ಲು ಹಚ್ಚಿದ್ದೇವೆ. ಇದಕ್ಕೆ ನಮ್ಮದು 100 ಕೋಟಿ ರೂ. ಗಳಷ್ಟು ಕಲ್ಲು ಇತ್ತು. ಆ ಹೈಸ್ಕೂಲುಗಳಿಗೆ ಇಷ್ಟು ಕೊಟ್ಟಿದ್ದೇವೆ. ಅದಕ್ಕೆ ಬಿಲ್ಡಿಂಗ್ ಇಲ್ಲ, ಅದು ಅವರ ಕೆಲಸ, ಹೀಗೆ ಹೇಳಲಿಕ್ಕೆ, ಅಂದರೆ ನೂರಾರು, ಸಾವಿರಾರು ಪ್ರಾಮಿಸ್ ಮಾಡಿ ಕೈತಪ್ಪಿಸಿಕೊಳ್ಳುವುದು. ಏಕೆಂದರೆ ನಾವಿರುತ್ತೇವೋ, ಬಿಡುತ್ತೇವೋ ನೋಡೋಣ. ಅಂತ ಹೇಳಿಬಿಡುವುದು, ಮುಂದೆ ಏನಾಗುತ್ತದೆಯೋ ನೋಡೋಣ ಅಂತ. ಇವತ್ತು ನಂಜುಂಡಪ್ಪನವರ ಕಮಿಟಿಯವರ ಬಗ್ಗೆ ಏನು ಕಾಳಜಿಯನ್ನು ಅವರು ತೋರಿಸಿದ್ದಾರೋ, ಇದು ಅತ್ಯಂತ ನಿರ್ಲಕ್ಷ್ಯ. ಅದರ ಮೇಲೆ ಯಾವುದೇ ಯೋಚನೆ, ಚಿಂತನೆಯನ್ನೂ ಮಾಡಿಲ್ಲ. ಯಾವ ಮೂಲಭೂತ ಸೌಕರ್ಯಗಳು ಈ ಭಾಗಕ್ಕೆ ಸಿಗಬೇಕು ಎಂದು ಹೇಳಿ ಕ್ರೈಟಿರಿಯಾ

ಹಾಕಿದ್ದರೋ, ಆ ಕ್ರೈಟಿರಿಯಾ ಪ್ರಕಾರ ಒಂದೂ ಕೂಡ ಇಲ್ಲ. ಮತ್ತೆ ಪದೇಪದೇ ನಂಜುಂಡಪ್ಪನವರ ವರದಿಯನ್ನು ನೀವಾದರೂ ಜಾರಿಯಲ್ಲಿ ತರಬಹುದಾಗಿತ್ತಲ್ಲವೇ ಎಂದು. ನಂಜುಂಡಪ್ಪನವರ ವರದಿಯ ಪ್ರಕಾರ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ, ಬೀದರ್‌ನಲ್ಲಿ ವೆಟರ್ನರಿ ಯುನಿವರ್ಸಿಟಿಯನ್ನು ಕೊಟ್ಟಿದ್ದಾರೆ.

ಶ್ರೀ ಸಿ.ಎಂ.ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಉತ್ತರ ಕರ್ನಾಟಕಕ್ಕೆ ಏನೂ ಕೊಟ್ಟಿಲ್ಲ ಎಂಬ ಮಾತನ್ನು ಹೇಳುತ್ತಿದ್ದೀರಿ, ನಾನು ಹೇಳುವುದನ್ನು ದಯವಿಟ್ಟು ಸ್ವಲ್ಪ ಕೇಳಿ ಈಗ ಅಭಿಯಾಚನೆ ಸಂಖ್ಯೆ 1 ರೊಳಗೆ 44.00 ಕೋಟಿ ರೂಪಾಯಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಬಿತ್ತನೆ ಬೀಜಕ್ಕೆ ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೀರಿ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ. ಆಮೇಲೆ ನೀವು ಹೇಳಬಹುದಲ್ಲಾ? ನೀವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆಂಬುದು ನನಗೆ ಅರ್ಥವಾಗುತ್ತಿಲ್ಲ. ಈಗ ಎತ್ತಿನ ಗಾಡಿಗಳಿಗೆ ಕೊಡುವುದಾಗಲಿ, ರಾಜ್ಯಾದ್ಯಂತ ರೈತ ಸಂಪರ್ಕ ಕೇಂದ್ರಗಳಿಗೆ ಕೊಡುವುದಾಗಲಿ ಇಡೀ ರಾಜ್ಯಕ್ಕೆ 54 ಕೋಟಿ ರೂಪಾಯಿಗಳು ಇದಕ್ಕೋಸ್ಕರ, ಸ್ವಚ್ಛ ಗ್ರಾಮಕ್ಕೆ ಹಣ ಕೊಡುವುದು ಬಾಕಿ ಉಳಿದಿದೆ. 54.00 ಕೋಟಿ ರೂಪಾಯಿಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿರಬೇಕಾದರೆ, ಏನು ದಕ್ಷಿಣ ಕರ್ನಾಟಕಕ್ಕೆ ಆಗಿದೆಯೇ? ಇವೆಲ್ಲಾ ಇರಬೇಕಾದರೆ ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಒಂದು ಸಾವಿರ ಗ್ರಾಮಗಳಿಗೆ ಇವತ್ತು ಕೊಡಬೇಕಾಗಿರುವ ಹಣವನ್ನು ಇಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಉದಾಸಿಯವರೇ, ಅವರ ವ್ಯಾಖ್ಯಾನ ಏನು ಗೊತ್ತೇ ಮಾನ್ಯ ಖರ್ಗೆಯವರದು. ಈ ಭಾಗದ ವಿಶೇಷ ಅಭಿವೃದ್ಧಿಗಾಗಿ ನಾವು ಏನು ಮಹಾ ಅಧಿವೇಶನವನ್ನು ಕರೆದಿದ್ದೇವೆ, ಈ ಅವಕಾಶವನ್ನು ಉಪಯೋಗಿಸಿಕೊಂಡು ಮಾಡಿದ್ದೇವೆಂದು ಹೇಳಿದ್ದೀರಲ್ಲಾ? ಬಜೆಟ್ಟಿನಲ್ಲಂತೂ ಏನು ಘೋಷಣೆ ಮಾಡಲಿಕ್ಕಾಗಲಿಲ್ಲ. ವಿಶೇಷವಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಏನಾದರೂ ಇದ್ದಿದ್ದರೆ ಅದನ್ನು ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಹೇಳಬಹುದಾಗಿತ್ತು. ಮೊನ್ನೆಯೂ ಹೇಳಲಿಲ್ಲ. ನಿನ್ನೆಯೂ ಹೇಳಲಿಲ್ಲ. ಈಗ ಏನು ಹೇಳುತ್ತೀರಿ? ನೀವು ಹೇಳುತ್ತಿರುವ ಕಾರ್ಯಕ್ರಮವು ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆ. ಇಲ್ಲಿರುವಂತಹ ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಹೊಸದಾಗಿ ನೀವು ಘೋಷಣೆ ಮಾಡಿದಂತಹ ಯಾವುದೇ ಕಾರ್ಯಕ್ರಮಗಳು ಯಾವುದೇ ಸ್ಥಿರವಾದಂಥ ಕಾರ್ಯಕ್ರಮ ನಿಮ್ಮ ನೆನಪು ಉಳಿಯುವಂಥದ್ದು, ಆ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಯಾವುದೂ ಇಲ್ಲ. ಎತ್ತು ಗಾಡಿ ಬರೇ ಉತ್ತರಕರ್ನಾಟಕದಲ್ಲಿ ಕೊಡುವುದು ಅಲ್ಲ. ಇಡೀ ರಾಜ್ಯಕ್ಕೆ ಕೊಡುವುದು.

ಶ್ರೀ ಸಿ.ಎಂ. ಉದಾಸಿ : ನಾನು ಹೇಳುವುದನ್ನು ಪೂರ್ತಿ ಕೇಳಿ. ನಂತರ ಮಾತನಾಡಿ. ಧಾರವಾಡ ಮತ್ತು ಗುಲಬರ್ಗಾ ಹೈಕೋರ್ಟ್‌ಗಳಿಗೆ 39.00 ಕೋಟಿ ರೂ.ಗಳು

ಬಿಡುಗಡೆಯಾಗಿರುವುದು ಇದರಲ್ಲಿ ಇದೆ. ಈಗೇನಾಗಿದೆ, ನೆರೆಹಾವಳಿಯಿಂದ ಗ್ರಾಮಗಳನ್ನು ಶಿಫ್ಟ್ ಮಾಡಬೇಕಾದಂತಹ ಸಂದರ್ಭದಲ್ಲಿ 54.00 ಕೋಟಿ ರೂ.ಗಳನ್ನು ಕೊಡುವುದಕ್ಕೆ ಸಹಿತ ಹಣ ಬಿಡುಗಡೆಯಾಗಿದೆ. ಇದೆಲ್ಲಾ ಇರಬೇಕಾದರೆ ಇಷ್ಟರವರೆಗೆ ನಿಮ್ಮ ವ್ಯಾಖ್ಯಾನ ಏನಿದೆಯೆಂದರೆ ಇಷ್ಟೆಲ್ಲಾ ಕೊಟ್ಟಿರಬೇಕಾದರೆ ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೀರಿ. ಎಂದು ಹೇಳಿದಿರಿ ಅದಕ್ಕೆ ಹೇಳಿದೆನೇ ಹೊರತು ತಮ್ಮ ಮಾತುಗಳಿಗೆ ಆಕ್ಷೇಪ ಮಾಡುವುದಕ್ಕಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ . . . .

ಶ್ರೀ ಡಿ.ಆರ್. ಪಾಟೀಲ್(ಗದಗ) : ಮಾನ್ಯ ಉದಾಸಿಯವರೇ, ಸುವರ್ಣ ಗ್ರಾಮೋದಯದ ಬಗ್ಗೆ ತಾವು ಹೇಳಿದಿರಿ. ನಾವು ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಡಿಸ್‌ಕಸ್ ಮಾಡುತ್ತಿರುವುದು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ನಾವು ಏನು ಮಾಡಬೇಕೆಂದು? ಈ ಸುವರ್ಣ ಗ್ರಾಮೋದಯದ ಸಹಿತ ನೀವು ಈ ಬೆಳಗಾವಿ ಡಿವಿಷನ್‌ಗೆ 91 ಹಳ್ಳಿಗಳನ್ನು ಸೆಲೆಕ್ಟ್ ಮಾಡಿದ್ದೀರಿ. ಬೆಂಗಳೂರು ಡಿವಿಷನ್‌ಗೆ 183 ಹಳ್ಳಿಗಳನ್ನು ಸೆಲೆಕ್ಟ್ ಮಾಡಿದ್ದೀರಿ. ಎಲ್ಲಿ ಯಾವುದಕ್ಕೆ ಒತ್ತು ಕೊಡುತ್ತಿದ್ದೀರಿ, ಅದರ ಬಗ್ಗೆ ವಿಚಾರ ಮಾಡಿ. ಅದು ಬೆಳಗಾವಿಯಲ್ಲಿ ಘೋಷಣೆಯನ್ನು ಮಾಡುತ್ತೀರಿ. ಈ ತಾರತಮ್ಯ ಏಕೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಸಭಾಧ್ಯಕ್ಷರೇ, ಮಾನ್ಯ ಡಿ.ಆರ್.ಪಾಟೀಲರಿಗೆ ತಪ್ಪು ಕಲ್ಪನೆ ಇದೆ, ನಾನೇನು ಹೇಳಿದ್ದೇನೆಂದರೆ 200 ಗ್ರಾಮೀಣ ಭಾಗದ ವಿಧಾಸಭಾ ಕ್ಷೇತ್ರಗಳಿವೆ, ಜನಸಂಖ್ಯೆ ಆಧಾರದ ಮೇಲೆ ಅದನ್ನು ಗುರುತಿಸುವಂತೆ ಕೆಲಸ ಮಾಡುತ್ತಿದ್ದೇವೆಂದು ಅವರ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಡಿ.ಆರ್.ಪಾಟೀಲ್ : ಉದಾಸಿಯವರೇ, ಒಂದು ಕೆಲಸ ನೀವು ಮಂತ್ರಿಮಂಡಲದೊಳಗೆ ಸವಿಸ್ತಾರವಾಗಿ ಚರ್ಚೆ ಮಾಡಿ ಮಾಡಿ ನೀವೊಬ್ಬರೂ ಒಂದು ಮಾಡುವುದು, ಮತ್ತೊಬ್ಬರೂ ಮತ್ತೊಂದು ಮಾಡುವುದು, ಆಗಾಗ ಅದನ್ನು ಪ್ರೇಮಕ್ಕೆ ಮಾಡಿದ ಹಾಗೆ ಅದನ್ನು ಒಪ್ಪಿಕೊಳ್ಳುವುದು. ಹೀಗೆ ಮಾಡುವುದರಿಂದ ಪ್ರಾದೇಶಿಕ ಅನ್ಯಾಯ ಬಹಳ ಆಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಆ ರೀತಿ ಆಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಈಗ ಆಗುತ್ತಿದೆಯಲ್ಲಾ, 6 ತಿಂಗಳೊಳಗೆ ನಿಮ್ಮೆಲ್ಲಾ Development Programmes ಎಲ್ಲಿ ಹೆಚ್ಚಾಗಿವೆ, ಅದನ್ನೆಲ್ಲಾ ಸ್ವಲ್ಪ ವಿಚಾರ ಮಾಡಿ.

ಅಧ್ಯಕ್ಷರು : ಇನ್ನು ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ಉದಾಸಿಯವರಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಬಹುಶಃ ಈ ನಂಜುಂಡಪ್ಪ ವರದಿ ಕೊನೆ ಭಾಗವನ್ನು ತಂದಿದ್ದೇನೆ. ನಾನು ಮಾತನಾಡುವಾಗ ಹೇಳುತ್ತೇನೆ. ನೀವು ಹೇಳಿದ ಹಾಗೆ ಮಾಡಿದರೆ ನೂರು ವರ್ಷಗಳಾದರೂ ಇದು ಜಾರಿಗೆ ಬರುವುದಿಲ್ಲ. ಈ ಸ್ಥಿತಿಯಿದೆ, ದಯವಿಟ್ಟು ನಿಮ್ಮ ಮಂತ್ರಿ ಮಂಡಲದ ಸದಸ್ಯರೆಲ್ಲ ಕುಳಿತುಕೊಂಡು ಓದಿರಿ.

ಅವರೇನು ಹೇಳಿದ್ದಾರೆ, ಮುವತ್ತೊಂದು ಸಾವಿರ ಕೋಟಿ ರೂ.ಗಳನ್ನು ಹೇಗೆ, ಯಾವರೀತಿ ಖರ್ಚು ಮಾಡಬೇಕು? ಎಷ್ಟು ವರ್ಷದಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಇವತ್ತಿನ ಲೆಕ್ಕಕ್ಕೆ ಅರವತ್ತು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ನಾವು ಏಳು ತಿಂಗಳಿನಿಂದ ಅಧಿಕಾರ ನಡೆಸುತ್ತಿದ್ದೇವೆ. ಸುಮ್ಮನೆ ಏನೆಂದರೆ ಅದು ಹೇಳಬೇಡಿ. ಎಸ್.ಎಸ್.ಪಾಟೀಲರವರೇ, ತಾವೇನು ಹೇಳುತ್ತಿದ್ದೀರಿ, ವಿಶ್ವಬ್ಯಾಂಕ್ ನೆರವಿನಿಂದ 39 ತಾಲ್ಲೂಕುಗಳಿಗೆ ಹಣ ಕೊಡಬೇಕಾದಂಥ ಸಂದರ್ಭದಲ್ಲಿ 600 ಕೋಟಿ ರೂ.ಗಳನ್ನು ನಂಜುಂಡಪ್ಪ ವರದಿಯ ಪ್ರಕಾರವೇ ಅನುದಾನ ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಅದರ ಪ್ರಕಾರ ಪ್ರತಿಯೊಂದು ಪಂಚಾಯಿತಿಗೆ ಹದಿಮೂರು ನೂರಾ ನಲವತ್ತಮೂರು ಪಂಚಾಯಿತಿಗಳಿಗೆ 38.00 ಲಕ್ಷ ರೂ.ಗಳಂತೆ ಅನುದಾನ ಬರುವಂತೆ ವ್ಯವಸ್ಥೆಯನ್ನು ಮಾಡಿದ್ದೇವೆ. ಇದೆಲ್ಲಾ ತಮ್ಮ ಗಮನದಲ್ಲಿದೆಯೆಂದು ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಯಾರು ಮಾಡಿದ್ದು ಅದನ್ನು; ನೀವು ಮಾಡಿದಿರಾ?

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗುಲಬರ್ಗಾದಲ್ಲಿ ಹಾಸ್ಪಿಟಲ್ ಕಟ್ಟಿಸಲಿಕ್ಕೆ ಪ್ರಾವಿಷನ್ ಮಾಡಿದ್ದೇವೆ. ಅದು ಉತ್ತರ ಕರ್ನಾಟಕದಲ್ಲಿ ಸ್ವಾಮಿ, ಎಲ್ಲೆಲ್ಲಿ ಮೆಡಿಕಲ್ ಕಾಲೇಜುಗಳನ್ನು ಮಾಡಬೇಕೆಂದು ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದೆ ಅದು ಉತ್ತರ ಇರಬಹುದು, ದಕ್ಷಿಣ ಇರಬಹುದು. ಬೆಳಗಾಂಗೆ ಮೆಡಿಕಲ್ ಕಾಲೇಜು ಕಟ್ಟಿಸುತ್ತಿದ್ದಾರೆ. ಗುಲಬರ್ಗಾದಲ್ಲಿ ಜರ್ಮನ್ ಏಡ್‌ನಿಂದ ಹಿಂದೆ ಸ್ಯಾಂಕ್ಷನ್ ಆದಂಥ ಈಗ ಹೋಗಿ ಶಂಕುಸ್ಥಾಪನೆ ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ನಾಲ್ಕೈದು ಸಾರಿ ಪ್ರಯತ್ನವಾಯಿತು. ಆಮೇಲೆ ಬೀದರ್‌ನಲ್ಲಿ ಮೆಡಿಕಲ್ ಕಾಲೇಜ್‌ಗೋಸ್ಕರ ಅಪ್‌ಗ್ರೇಡ್ ಮಾಡಿದಂಥ ಹಾಸ್ಪಿಟಲ್. ಹಾಸನದಲ್ಲಿ ಮಂಡ್ಯದಲ್ಲಿ, ಶಿವಮೊಗ್ಗದಲ್ಲಿ ಅದೇರೀತಿಯಾಗಿ ಮಾಡುತ್ತಿದ್ದಾರೆ. ನೀವೇನು ಸ್ವಾಮಿ ಹೊಸದಾಗಿ ಮಾಡಿದ್ದು? ಅದಕ್ಕೆ ಸುಮ್ಮನೆ ಕೈತೋರಿಸಿ ಅವಲಕ್ಷಣ ಮಾಡಿಕೊಳ್ಳಬೇಡಿ, ಕೈ ಚೆನ್ನಾಗಿದೆ, ವ್ಯಾಪಾರಸ್ಥರು ನೀವು. ಅದಕ್ಕಾಗಿ ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರಬೇಕೆಂದರೆ ಹದಿನಾರು ಸಾವಿರ ಕೋಟಿ ರೂಗಳಷ್ಟು, ಇವತ್ತಿನ ಅಂದರೆ ವರದಿ ಕೊಟ್ಟಾಗಿನಿಂದ ಇವತ್ತಿನ ಎಸ್.ಆರ್. ಪ್ರಕಾರ ನಾವು ಹೋಗಿದ್ದರೆ ಸುಮಾರು 25,000 ಕೋಟಿ ರೂ.ಗಳ ಮೇಲೆ ಹೋಗುತ್ತದೆ. ಅದಕ್ಕೆ ಇದನ್ನು ಟೈಮ್ ಬೌಂಡ್, ಟೈಮ್ ಫಿಕ್ಸ್ ಮಾಡಿ, ಐದು ಅಥವಾ ಆರು ವರ್ಷಇರಬಹುದು, ಈ ಆರು ವರ್ಷದಲ್ಲಿ 25,000 ಕೋಟಿ ರೂ.ಗಳನ್ನು ನಾವು ಖರ್ಚು ಮಾಡುತ್ತೇವೆ. ಪ್ರತಿವರ್ಷ ಐದೈದು ಸಾವಿರ ನಾವಿಲ್ಲಿ ಇಡುತ್ತೇವೆಂದು ಹೇಳಿ ನಾವು ಮಾಡಿದರೆ ಅರ್ಥ ಬರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ನಾವು ಬ್ಯಾಕ್‌ಲಾಗ್ ಹುದ್ದೆಯನ್ನು ಹೇಗೆ ತುಂಬುತ್ತೇವೆ? because ನಾವು ಅನೇಕ ವರ್ಷಗಳಿಂದ ಭರ್ತಿ ಮಾಡಿಲ್ಲದಿರುವುದರಿಂದ ಆ ಹುದ್ದೆಗಳನ್ನು at a time Special Recruitment ಮಾಡುತ್ತೇವೆ. ಅದೇರೀತಿಯಾಗಿ ಉದಾಹರಣೆಗೆ ಹೇಳಬೇಕಾದರೆ

Irrigation ನಲ್ಲಿ ಆಂಧ್ರದವರು ಮಾನ್ಯ ವೈ.ರಾಜಶೇಖರರೆಡ್ಡಿಯವರು, ಏನು ಮುಖ್ಯಮಂತ್ರಿಗಳಿಗೆ ಬಿಡುತ್ತೀರೋ ಇಲ್ಲವೇ ನೀವು ಹಿಡಿದುಕೊಂಡು ಇರುತ್ತೀರೋ ಏನು ಎಂಬುದು ಗೊತ್ತಾಗುವುದಿಲ್ಲ. ಆಮೇಲೆ ಇನ್ನೊಂದು ಏನೆಂದರೆ ಅವರು ಸುಮಾರು 25,000 ಕೋಟಿ ರೂ. ಗಳನ್ನು ಮೊಬಿಲೈಸ್ ಮಾಡಿ ಒಂದೇ ವರ್ಷದಲ್ಲಿ 10,000 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. 25,000 ಕೋಟಿ ರೂ.ಗಳಷ್ಟು ಕೆಲಸಗಳನ್ನು ಅಪ್ರೂವ್ ಮಾಡಿ ಒಂದೇ ವರ್ಷದಲ್ಲಿ 10,000 ಕೋಟಿ ರೂ.ಗಳಿಗೆ ಕೆಲಸವನ್ನು ನಿಗದಿ ಮಾಡಿ ಪ್ರಾರಂಭ ಮಾಡಬೇಕೆಂದು ಹೇಳಿ Irrigation works ಗೆ ಮಾಡಿದ್ದಾರೆ. ಹಾಗೆ ಇದು 25,000 ಕೋಟಿ ರೂ.ಗಳಷ್ಟಿದೆ ಎಂದು ತಿಳಿದುಕೊಳ್ಳಿ. ಇದಕ್ಕೆ ನೀವು ಐದು ಅಥವಾ ಆರು ವರ್ಷ ಒಂದು ಪ್ಲಾನ್ ಹಾಕಿ ಪ್ರತಿ ವರ್ಷ 5,000 ಕೋಟಿ ರೂ.ಗಳನ್ನು ನಂಜುಂಡಪ್ಪ ವರದಿ ಆಧಾರದ ಮೇಲೆ ಖರ್ಚು ಮಾಡುತ್ತೇವೆ ಎಂದು. ಇದು ಕೇವಲ ಒಂದು ಭಾಗದಲ್ಲಿ ಆಗುವುದಷ್ಟೇ ಅಲ್ಲ. ಕೇವಲ ಉತ್ತರಕರ್ನಾಟಕಕ್ಕೆ ಅಥವಾ ಹೈದರಾಬಾದ್ ಕರ್ನಾಟಕಕ್ಕೆ ಅಲ್ಲ. 114 ತಾಲ್ಲೂಕುಗಳು ಕರ್ನಾಟಕ ರಾಜ್ಯದಲ್ಲಿ ಶ್ರೀಮಾನ್ ನಂಜುಂಡಪ್ಪನವರು ಗುರುತಿಸಿದ್ದಾರೆ. ಆ 114ರಲ್ಲಿ ಸುಮಾರು 60% ಮಾತ್ರ ಉತ್ತರ ಕರ್ನಾಟಕದಲ್ಲಿವೆ, 40% ಸುಮಾರು ದಕ್ಷಿಣ ಕರ್ನಾಟಕದಲ್ಲಿವೆ. ಇಡೀ ರಾಜ್ಯದ ಸಮಗ್ರವಾಗಿ ಅಭಿವೃದ್ಧಿಯಾಗಬೇಕಾಗಿದ್ದರೆ ಈ ಕಡೆ 60% ಇರಬಹುದು, ಆ ಕಡೆ 40% ಇರಬಹುದು. ಅವು ಎರಡಕ್ಕೂ ಸೇರಿಸಿ ಇವತ್ತು ಸುಮಾರು 25,000 ಕೋಟಿ ರೂ.ಗಳು ಹೆಚ್ಚು ಕಡಿಮೆ, till ನಿಮ್ಮ ಅಸಮಾನತೆ ಇರುವುದನ್ನು ಸರಿಪಡಿಸಲಿಕ್ಕೆ ಇದೆ. ಇವತ್ತೇನಾಗಿದೆ, ಅಲ್ಲಿ ಸಮಾನತೆಯನ್ನು ತರುತ್ತೇವೆಂದು ಒಂದು ಕಡೆ ಹೇಳಿಕೊಂಡು ಹೋಗುತ್ತಿದ್ದೇವೆ. ಆದರೆ ಪುನ: ನಾವು ಅಸಮಾನತೆಯನ್ನು creat ಮಾಡುತ್ತಲೇ ಇದ್ದೇವೆ. ಏಕೆಂದರೆ ಕೊಟ್ಟ ಕಡೆ High School, Hospital, Junior College ಕೊಡುವುದು, ಅಂದರೆ further inequality ಯನ್ನು ನಾವು add ಮಾಡುತ್ತಿದ್ದೇವೆ. ಅಸಮಾನತೆಯನ್ನು ನಾವೇ ಸೃಷ್ಠಿ ಮಾಡುತ್ತಿದ್ದೇವೆ. ಇದನ್ನಾದರೂ ತಪ್ಪಿಸಬಹುದಾಗಿತ್ತಲ್ಲಾ, ಇದು ನಿಮ್ಮ ಕೈಯಲ್ಲೇ ಇತ್ತಲ್ಲಾ? ಹಿಂದಿನದು ಆಯಿತು, ಈಗಲಾದರೂ ಕೂಡ ಈ ಅಸಮಾನತೆಯನ್ನು injustice ಅನ್ನು imbalance ಅನ್ನು ಸರಿಪಡಿಸಲಿಕ್ಕೆ ಅವಕಾಶ ಇದ್ದಾಗಲೂ ಕೂಡ ನೀವು ಮಾಡಲಿಲ್ಲ. ಅದಕ್ಕೆ ಪದೇ ಪದೇ ನಮ್ಮ ಆರ್.ಡಿ.ಪಿ.ಆರ್. ಸಚಿವರು ಎದ್ದು ಹೇಳೇ ಹೇಳುತ್ತಿದ್ದಾರೆ. ಇದ್ದದ್ದೇ ಮಾಡಿಲ್ಲ ಇದು ಒಂದು ಕಡೆ, ಇನ್ನೊಂದು 8 ವರ್ಷದ ಯೋಜನೆ, 10 ವರ್ಷ ಯೋಜನೆ ಬಿಟ್ಟರೆ ಯಾವುದೂ ಕೂಡ ಆಗುವುದಿಲ್ಲ. ಇದಕ್ಕೆ ಪಂಚವಾರ್ಷಿಕ ಯೋಜನೆ ಇದ್ದಹಾಗೆ ಒಂದು time bound 5 ವರ್ಷದಲ್ಲಿ ನಾವೇ ಮಾಡೇ ತೀರುತ್ತೇವೆಂಬ ಪ್ರಯತ್ನವನ್ನು ಮಾಡಿದರೆ ಇದು ಆಗುತ್ತದೆ, ಇಲ್ಲವಾದರೆ ಇದೂ ಕೂಡ ನಮ್ಮ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ತುಸು ತುಸು ರೊಕ್ಕ ಕೊಟ್ಟು ನಲವತ್ತು, ಮುವತ್ತು ಕೋಟಿ ರೂ.ಗಳನ್ನು ಕೊಡುವುದು, ಪುನ: ನಿಮ್ಮ ಭಾಗದಲ್ಲಿ ಏನಾಗಿದೆಯೆಂದು ಕೇಳುವುದು? ಏಕೆಂದರೆ ಯಾವುದೇ ಒಂದು ಕೆಲಸಕ್ಕೆ ಪೂರ್ಣವಾಗಿ ನೀವು ಹಣ ಕೊಟ್ಟಾಗ ಮಾತ್ರ ಅದು ರಿಸಲ್ಟ್ ಕಾಣುತ್ತದೆ, ಎಲ್ಲಿ ಒಂದು ಸಾವಿರ

ಕೋಟಿ ರೂ. ಬೇಕು. ಅಲ್ಲಿ ಐವತ್ತು ಕೋಟಿ ರೂ.ಗಳನ್ನು ಕೊಟ್ಟರೆ ಇಪ್ಪತ್ತು ವರ್ಷ ಬೇಕು. ಆ ಇಪ್ಪತ್ತು ವರ್ಷದಲ್ಲಿ ನಾವು ಹಿಂದೆ ಬಿದ್ದಿದ್ದೇವೆ ಎಂದು ನಾವು ಹೇಳುವುದು. ನೀವು ಏನು ಮಾಡಿದ್ದೀರಿ ಎಂದು ಅವರು ಕೇಳುವುದು? ಅದೇರೀತಿಯಾಗಿ ಅನೇಕ ಸಾರಿ ಪ್ಲಾನಿಂಗ್ ನವರು ಒಪ್ಪುವುದಿಲ್ಲ. ಅವರು ತಮ್ಮ ಇತಿಮಿತಿಯಲ್ಲಿರತಕ್ಕಂಥ ಹಣವನ್ನು ಕೊಡುತ್ತಾರೆಯೇ ಹೊರತಾಗಿ ಈ Non-Plan Scheme ನಲ್ಲಿ ಹಣ ಕೊಡುವುದಿಲ್ಲ, ನಮ್ಮಲ್ಲಿಲ್ಲವೆಂದು ಹೇಳುತ್ತಾರೆ, ಆಗ ಇವರು ಬುದ್ಧಿವಂತಿಕೆಯಿಂದ ಏನು ಮಾಡುತ್ತಾರೆಂದರೆ Non-Plan ನಲ್ಲಿ ತಮಗೆ ಬೇಕಾದವರಿಗೆ ಒಂದಲ್ಲ ಒಂದು ರೂಪದಲ್ಲಿ ಕೊಡುವುದು, ನಮ್ಮಲ್ಲಿ ಡಿಸ್ಕ್ರಿಷನ್ ಎಂದು ಇಟ್ಟುಕೊಳ್ಳುವುದು, ಕಂಟಿಜೆನ್ಸಿಫಂಡ್ ಎಂದು ಹೇಳಿ ಕ್ರಿಯೇಟ್ ಮಾಡಿಕೊಳ್ಳುವುದು. ನೂರಾರು ಕೋಟಿ ರೂ.ಗಳನ್ನು ಇಟ್ಟುಕೊಂಡು ಬಂದವರಿಗೆಲ್ಲಾ ಖುಷಿ ಪಡಿಸಿ ಬರೆದುಕೊಳ್ಳುತ್ತಾ ಹೋಗುವುದು. ಏಕೆಂದರೆ individual influence ಮೇಲೆ ವೈಯಕ್ತಿಕವಾಗಿ ಅವರಿಗೆ satisfy ಮಾಡಲಿಕ್ಕೆ, ಏಕೆಂದರೆ ಎಲ್ಲಿಂದಾದರೂ ದುಡ್ಡು ಕಡಿಮೆ ಮಾಡಿ ಇನ್ನೊಬ್ಬರಿಗೆ ಕೊಡಬೇಕು. ಹೀಗೆ ಅಧ್ಯಕ್ಷರೇ, ನಾನು ಹೆಚ್ಚಿನ ವಿಷಯ ಪ್ರಸ್ತಾಪ ಮಾಡದೆ ಇಷ್ಟು ಮಾತ್ರ ನಾನು ಹೇಳುತ್ತಿದ್ದೇನೆ. ನಂಜುಂಡಪ್ಪ ವರದಿ ಆಧಾರದ ಮೇಲೆ ಇಲ್ಲಿಯವರೆಗೆ ಈ ಸರ್ಕಾರ ಯಾವ ಕಾಮಗಾರಿಯನ್ನೂ ಕೂಡ ತೆಗೆದುಕೊಂಡಿಲ್ಲ. ಅದಕ್ಕೆ ಹಣವನ್ನೂ ಕೂಡ ಆ ಬೇಸಿಸ್ ಮೇಲೆ ಅಲೋಕೇಷನ್ ಮಾಡಿಲ್ಲ. ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ಆಗಲಿ, ರೆಗ್ಯುಲರ್ ಬಜೆಟ್ಟಿನಲ್ಲಿ ಆಗಲಿ ಕೆಲಸಗಳನ್ನು ಗುರುತಿಸಿಲ್ಲ. ರ್‍ಯಾಂಡಮ್ ಆಗಿ ಯಾವ ಕೆಲಸ ಬೇಕು, ಅದನ್ನು ಸೇರಿಸುವುದು, ಬೇಡವೆನ್ನುವುದನ್ನು ಬಿಡತಕ್ಕಂಥ ಕೆಲಸ ಇವತ್ತು ಆಗಿದೆ. ನೀರಾವರಿ ಯೋಜನೆಗಳನ್ನೂ ಕೂಡ ಇವೊತ್ತು ಅದೇ ರೀತಿಯಾಗಿ ಮಾಡಬೇಕಾದಂತಹ ಪರಿಸ್ಥಿತಿ ಇದೆ. ಇಲ್ಲದಿದ್ದರೆ, ಆಂಧ್ರದವರು, ಮಹಾರಾಷ್ಟ್ರದವರು ಈಗಾಗಲೇ ಸಾಕಷ್ಟು ಬ್ಯಾರೇಜ್‌ಗಳನ್ನು ನಿರ್ಮಿಸುವ ಮುಖಾಂತರ ನಮ್ಮ ಕಡೆ ಬರತಕ್ಕಂಥ ನೀರನ್ನು ನಿಲ್ಲಿಸತಕ್ಕಂಥ ಕೆಲಸ ಮಾಡಿ ಮಹಾರಾಷ್ಟ್ರದವರು ಸಾಕಷ್ಟು ಅನ್ಯಾಯ ಮಾಡುತ್ತಿದ್ದಾರೆ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ, ಕೃಷ್ಣಾ ಬೇಸಿನ್ ಕೆಳಗಡೆ ಇರುವ ಆಂಧ್ರದವರೂ ಕೂಡ ಪದೇ ಪದೇ ನಮ್ಮನ್ನು ಕಾಡಿಸಿ unapproved project ಗಳನ್ನು ಅವರು ಹೊಡೆದುಕೊಂಡು ಹೋಗುತ್ತಿದ್ದಾರೆ. ಅದೇ ಪ್ರಯತ್ನ ಕಾವೇರಿ ಬೇಸಿನ್‌ನಲ್ಲೂ ಕೂಡ ಆಗುತ್ತಿದೆ. ನಾವು ಅನೇಕ ಸಲ ಸಣ್ಣ ನೀರಾವರಿ ಯೋಜನೆಗಳಲ್ಲಿ ನೀರು ತುಂಬಿಸುವುದಕ್ಕೆ ಹಿಂದೇಟು ಹಾಕುತ್ತೇವೆ. ಎಲ್ಲವನ್ನೂ ಕೂಡ ಪ್ರಚಾರ ಮಾಡಿಯೇ ಕೈಗೆತ್ತಿಕೊಳ್ಳಬೇಕಾಗಿಲ್ಲ. ಪ್ರಚಾರ ಮಾಡಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನೀವು ಹೋದಾಗ Inter state problems ಏನು ಇರುತ್ತವೆ, ಅದು ಹೆಚ್ಚಾಗುತ್ತದೆ. ನಿಮಗೆ ಕೆಲಸ ಬೇಕು, Constructive ಕೆಲಸ ಮಾಡಬೇಕೆಂದರೆ, ಬಹಳ ಗುಟ್ಟಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಅದು ಸಣ್ಣ ನೀರಾವರಿಗೆ ಕಾಲುವೆಯಿಂದ ನೀರು ತುಂಬಿಸುವುದಾಗಿರಬಹುದು, ಅಥವಾ ಕೆರೆಗಳ ದುರಸ್ತಿ ಇರಬಹುದು, ಇದೆಲ್ಲವೂ ಕೂಡ ಅದರಲ್ಲಿದೆ. ಅದರ ಜೊತೆ ಜೊತೆಗೆ ನಾನು ಕೃಷ್ಣ ಭಾಗ್ಯ ಜಲ ನಿಗಮಕ್ಕೆ, ಕರ್ನಾಟಕ ನೀರಾವರಿ ನಿಗಮಕ್ಕೆ ಮತ್ತು

ಕಾವೇರಿ ನೀರಾವರಿ ನಿಗಮಕ್ಕೆ ಇನ್ನೊಂದು ಸಲಹೆ ಕೊಟ್ಟಿದ್ದೆ. ಈ ಮೂರು ನಿಗಮಗಳವರು ಸೇರಿ, ಪ್ರತಿ ನಿಗಮದವರು ಒಂದು ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಎಸ್‌ಸಿಎಸ್‌ಟಿ ಜನಾಂಗದ ಏಳಿಗೆಗಾಗಿ ರೂಪಿಸಲಾಗಿರುವ ಗಂಗಾ ಕಲ್ಯಾಣ ಯೋಜನೆಗೆಂದು ಇಡಬೇಕು. ಏಕೆಂದರೆ, ಅವರಿಗೆ intotal 18 ಪರ್ಸೆಂಟ್‌ನಷ್ಟು ಹಣವನ್ನು ಬಜೆಟ್‌ನಲ್ಲಿ ಇರಿಗೇಶನ್‌ಗೆಂದು in total ನಾವು ತೆಗೆದುಕೊಡುವುದಕ್ಕಾಗುವುದಿಲ್ಲ. ಅದಕ್ಕೆ ಏನು ಮಾಡುತ್ತೇವೆಂದರೆ, ಅನೇಕ ಸಲ ಇರಿಗೇಶನ್‌ಗೆ ಮತ್ತು ದೊಡ್ಡ ದೊಡ್ಡ ಕೈಗಾರಿಕೆಗಳಿಗೆಂದು ಬಜೆಟ್‌ನಲ್ಲಿ ಅಲಾಟ್ ಆಗಿದ್ದನ್ನು ಕೊಡುವುದಕ್ಕೆ ಬಾರದ ಕಾರಣ ಕನಿಷ್ಠ ಪಕ್ಷ ಸಣ್ಣ ನೀರಾವರಿ ಯೋಜನೆಯೊಳಗೆ ಬರತಕ್ಕಂಥ ಗಂಗಾ ಕಲ್ಯಾಣ ಯೋಜನೆಗೆ ವಿಶೇಷವಾಗಿ ಎಲ್ಲಾ ಸೇರಿ ಸುಮಾರು 3,000–4,000 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಇಡುತ್ತೇವೆ. ಅದರಲ್ಲಿ ಕನಿಷ್ಠ ಒಂದು ನೂರು ಕೋಟಿ ರೂಪಾಯಿಯನ್ನು ಗಂಗಾ ಕಲ್ಯಾಣ ಯೋಜನೆಗೆ ತೆಗೆದಿಟ್ಟರೆ, ಏನೂ ಮಹಾ ದೊಡ್ಡ ಅಪರಾಧವಾಗುವುದಿಲ್ಲ. ಇವೊತ್ತು ಟರ್ನ್–ಕೀ ಬೇಸಿಸ್ ಮೇಲೆ ಬೋರ್‌ವೆಲ್ ಹಾಕಿ ಅಲ್ಲಿನ ಸಾವಿರಾರು ಜನರಿಗೆ ನೀರಿನ ಸೌಲಭ್ಯ ಒದಗಿಸಿಕೊಟ್ಟರೆ, Economically ಅವರಿಗೆ ನೀವು ದೊಡ್ಡ ಉಪಕಾರ, ಸಹಾಯ ಮಾಡಿದಂತಾಗುತ್ತದೆ ಮತ್ತು ತನ್ಮೂಲಕ ತಮ್ಮ ಕಾಲಿನ ಮೇಲೆ ನಿಲ್ಲುವುದಕ್ಕೆ ಅವರಿಗೆ ಅವಕಾಶವಾಗುತ್ತದೆ. ಹೋದ ಸಲ ನಾವು 15 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರೂ ಪೂರ್ತಿ ಯುಟಿಲೈಜೇಶನ್ ಆಗಿಲ್ಲ. ಅದು ಅಲ್ಲಿಗೇ ನಿಂತಿದೆ. ಅದಕ್ಕೆ ಹೊಸ ಬಜೆಟ್ ಏನೂ ಬೇಕಾಗಿಲ್ಲ. ಕೃಷ್ಣ ಜಲ ಭಾಗ್ಯ ನಿಗಮ ಮತ್ತು ಇನ್ನಿತರ ನಿಗಮಗಳಿಂದ ಹಣ ತೆಗೆದುಕೊಂಡು ಈ ಕೆಲಸ ಮಾಡಬಹುದು. ಅದರ ಬಗ್ಗೆ ನಾನು Finance Minister ಅವರಿಗೆ ಸಲಹೆ ಕೊಟ್ಟಿದ್ದೇನೆ. ಅವರೂ ಕೂಡ ಇದರ ಬಗ್ಗೆ ಗಮನಹರಿಸಬೇಕು. ಇತಂಹ ಸಮಸ್ಯೆಗಳಿವೆ. ನಾವು ಈಗ ಬೆಳಗಾಂಗೆ ಬಂದಿದ್ದೇವೆ. ಈ ಭಾಗದಲ್ಲಿ ಕೆಲವು ಸಮಸ್ಯೆಗಳಿವೆ. ಈ ಸಮಸ್ಯೆಗಳೆಲ್ಲವನ್ನೂ ನಾವು ಇವೊತ್ತು solve ಮಾಡಿ ಹೋಗಬೇಕಲ್ಲಾ. ಹಿಪ್ಪರಗಿ ಬ್ಯಾರೇಜ್‌ನ ಹಿನ್ನೀರಿನಲ್ಲಿ ಸುಮಾರು 21 ಹಳ್ಳಿಗಳು ಮುಳುಗಡೆಯಾಗುತ್ತವೆ. ಆ 21 ಹಳ್ಳಿಗಳು ಮುಳುಗಡೆಯಾಗುವ ಸಂಬಂಧ ನಾವು Rehabilitation programme ಮಾಡಬೇಕು. ಹೋದ ಸಲ ಜಾಮ್‌ದಾರ್‌ರವರು ಏನು ಒಂದು Rehabilitation programme ರೆಡಿ ಮಾಡಿದ್ದರು. ಬಾಗಲಕೋಟೆಗೆ ಸಂಬಂಧಿಸಿದಂತೆ ನಾವು ಹಿಂದೆ ಯಾವ ರೀತಿಯಾಗಿ ಸುಮಾರು 700–800 ಕೋಟಿ ರೂಪಾಯಿಗಳ Rehabilitation Project ಮಾಡಿದ್ದೆವು, ಅಂದರೆ, ಮನೆಗಳು, ಜಮೀನು, ಗುಡಿ–ಗುಂಡಾರಗಳು ಮುಳುಗಡೆಯಾದದ್ದಕ್ಕೆ ಆಗಿ comprehensive ಆಗಿ rehabilitation ಮಾಡಿ ಹಣ ಬಿಡುಗಡೆ ಮಾಡುವ ಕೆಲಸ ಬಾಗಲಕೋಟೆಯಲ್ಲಿ ನಡೆದಿದೆ. ಅದೇ ರೀತಿಯಾಗಿ ಹಿಪ್ಪರಗಿ ಬ್ಯಾರೇಜ್‌ಗೆ ಸಂಬಂಧಿಸಿದಂತೆ ಸ್ವಲ್ಪ ಮಾಡಬೇಕು. ಅದನ್ನು ಹೋಗಿ ಖುದ್ದಾಗಿ ನೋಡಲಿ. ಏಕೆಂದರೆ, ಅವರು ಹೇಳುವುದೇನೆಂದರೆ, ನಮ್ಮ ರೆವಿನ್ಯೂ ಸೆಕ್ರೆಟರಿಯವರಿಗೆ ಇದರ ಬಗ್ಗೆ ಸ್ವಲ್ಪ ಸಂಶಯ ಇದೆ. 'ಇದನ್ನು ಅನವಶ್ಯಕವಾಗಿ ತೆಗೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಒಂದು ಸಂಶಯ

ಅವರಲ್ಲಿ ಮೂಡಿದೆ. 'ಅದಕ್ಕೋಸ್ಕರ, ಇದಕ್ಕೆ ಅಡ್ಡ ಬರುತ್ತಾರೆ' ಎಂಬ ಮಾತನ್ನು ನನಗೆ ಹೇಳಿದರು. ನಾನು ಹೇಳಿದೆ. 'ಹಾಗಲ್ಲ, ಅವರೇ ಸ್ವತಃ ಹೋಗಿ ಅನೇಕ ಪ್ರಾಜೆಕ್ಟ್‌ಗಳನ್ನು ನೋಡಿಕೊಂಡು ಬಂದಿರುವವರಾಗಿದ್ದಾರೆ, ಇದರಲ್ಲಿ ತೊಂದರೆಯಾಗುವುದಕ್ಕೆ ಸಾಧ್ಯವಿಲ್ಲ. ನಾವು ಪ್ರಸ್ತಾಪ ಮಾಡುತ್ತೇವೆ' ಎಂದು ಹೇಳಿದೆವು. ಈಗ ಅಲ್ಲಿ 21 ಹಳ್ಳಿಗಳ ಜನರೆಲ್ಲರೂ ಸುಮಾರು 8–10 ವರ್ಷಗಳಿಂದ ಸತ್ಯಾಗ್ರಹ ಮಾಡಿಕೊಂಡು ಕುಳಿತಿದ್ದಾರೆ. ಅಥಣಿಯಲ್ಲಿ ಹೆಚ್ಚು ಸಮಸ್ಯೆಗಳಿರುವುದರಿಂದ ಅಲ್ಲಿನ ಜನರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ತಕ್ಷಣ ಸಹಾಯ ಮಾಡಬೇಕು. ಅದರ ಜೊತೆ ಜೊತೆಗೆ ಬಿಜಾಪುರದಲ್ಲಿ, ಹೊರ್ತಿಯಲ್ಲಿ ಸುಮಾರು 18 ದಿವಸದಿಂದ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರಿಗೆ ಸಣ್ಣ ಕೆರೆಗಳಿಗೆ ನೀರು ತುಂಬಿಸುವುದು, ಕಾಲುವೆಯಿಂದ ಲಿಫ್ಟ್ ಇರಿಗೇಶನ್ ಮುಖಾಂತರವಾದರೂ ಲಿಫ್ಟ್ ಮಾಡಿಯಾದರೂ ನೀರು ತುಂಬಿಸಬಹುದು, ಇಲ್ಲವೇ, ಎಲ್ಲೆಲ್ಲಿ ಸಾಧ್ಯವಿದೆಯೋ, ಅಂದರೆ, ground water ಅಥವಾ canal ನಿಂದ ನೀರು ತುಂಬಿಸುವುದಕ್ಕೆ ಸಾಧ್ಯವಿದೆ. ಇದ್ದಲ್ಲಿ, ನೀರು ತುಂಬಿಸುವ ಕೆಲಸ ಮಾಡಬಹುದು. ಅಲ್ಲಿನವರು ಸತ್ಯಾಗ್ರಹ ಕುಳಿತು ಸುಮಾರು 18 ದಿವಸಗಳಾದಾಗ, " ನಾನು ನಾಳೆ ಆ ಕಡೆ ಹೋದಾಗ ತಕ್ಷಣ ಆ ಕೆಲಸ ಮಾಡುತ್ತೇನೆ" ಎಂದು Irrigation Minister ಅವರು ಹೇಳಿದರು. Minor Irrigation, Major Irrigation ಇಬ್ಬರಿಗೂ ಸಂಬಂಧಪಟ್ಟದ್ದು. ಅಂದರೆ ಒಂದು ಕಡೆ ಯಡಿಯೂರಪ್ಪನವರೂ ಬೇಕು, ಇನ್ನೊಂದು ಕಡೆ ಈಶ್ವರಪ್ಪನವರೂ ಬೇಕು. ಅವರಿಬ್ಬರೂ ಕುಳಿತುಕೊಂಡು ಈ ಕೆಲಸ ಮಾಡಿದರೆ solve ಆಗುತ್ತದೆ. ಇಲ್ಲದಿದ್ದರೆ, ಆ ಜನರು Continuous ಆಗಿ ಹೀಗೆಯೇ ಸತ್ಯಾಗ್ರಹ ಕೂರುತ್ತಾರೆ. ನಾಳೆ ಅಥಣಿ, ಹೊರ್ತಿ, ಬಾಗಲಕೋಟೆ ಒಳಗೊಂಡಂತೆ ಇನ್ನು ಬೇರೆ ಬೇರೆ ಕಡೆಗಳಲ್ಲೂ ಇದೇ ರೀತಿಯಾಗಿ ಸತ್ಯಾಗ್ರಹ ಕುಳಿತರೆ, Law & Order problem create ಆಗುತ್ತದೆ. ಅಲ್ಲಿನ ಜನರು ರೊಚ್ಚಿಗೆದ್ದರೆ, ನಾಳೆ ನೀವೂ ಸಮಜಾಯಿಷಿ ನೀಡುವುದಕ್ಕಾಗುವುದಿಲ್ಲ, ನಾವೂ ಕೂಡ ಬಹಳ ಹೇಳಿದರೂ ಕೇಳುವುದಿಲ್ಲ. ಅವರು ಸಹಜವಾಗಿಯೇ ಇದೆಯೆಂದು ಹೇಳುತ್ತಾರೆ. "ನೀವು ಇದ್ದಾಗ ಸಮಸ್ಯೆ ಬಗೆಹರಿಯಲಿಲ್ಲ" ಎಂದು ಈಗಲೂ ಅವರು ಇದೇ ಮಾತನ್ನು ಹೇಳುತ್ತಾರೆ. ಅವರಿಗೆ ಇವೊತ್ತು ರಾಜಕೀಯ ಮುಖಂಡರ ಮೇಲೆ ವಿಶ್ವಾಸವಿಲ್ಲ. ಆದುದರಿಂದ, "ಕನಿಷ್ಠ ಪಕ್ಷ ಇವೊತ್ತಾದರೂ ನಮ್ಮ ಮೇಲೆ ನಂಬಿಕೆ ಇಡಿ" ಎಂದು ಸರ್ಕಾರ ಅವರ ಬಳಿಗೆ ಹೋಗಿ ಸಹಾಯ ಮಾಡಬೇಕು. ಇಲ್ಲದಿದ್ದರೆ, ಬಿಜಾಪುರ ಜಿಲ್ಲೆ ಬಗ್ಗೆ ನಿಮಗೆ ಗೊತ್ತಿದೆ. ಅಲ್ಲಿ ಮಳೆ ಬರುವುದಿಲ್ಲ, ಅಲ್ಲಿ Scanty rain fall ಬಹಳ ಇದೆ. ಅಂತಹ ಭಾಗದಲ್ಲಿ ಇದೊಂದು ಒಳ್ಳೆಯ ಕೆಲಸವಾಗುತ್ತದೆ. ಆ ಕೆಲಸ ಮಾಡಬೇಕೆಂದು ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಸತ್ಯಾಗ್ರಹ ಮಾಡುತ್ತಿರುವವರನ್ನು ಎಬ್ಬಿಸುವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು ಮತ್ತು ಈ ಭಾಗದಲ್ಲಿ ಸಮಸ್ಯೆ ಇರುವ ಕಾರಣ ಅವರಿಗೂ ಒಂದು ನೆಮ್ಮದಿ ಸಂಗತಿ ಏನೆಂದರೆ, 'ಬೆಳಗಾವಿಯಲ್ಲಿ ಅಧಿವೇಶನ ಆಗಿದ್ದಕ್ಕಾಗಿ ನಮ್ಮ ಸಮಸ್ಯೆಗೆ ಸರ್ಕಾರ ಸ್ಪಂದಿಸಿತು, ಅಸೆಂಬ್ಲಿ ಸ್ಪಂದಿಸಿತು ಮತ್ತು ಸ್ಪೀಕರ್‌ರವರೂ ಕೂಡ ಸಮಸ್ಯೆಗಳ

ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರು' ಎಂದು ನಿಮಗೂ ಕೀರ್ತಿ ಬರುತ್ತದೆ, ಅವರಿಗೂ ಹೆಸರು ಬರುತ್ತದೆ. ಅದಕ್ಕೋಸ್ಕರ, ಇಂತಹ ಬಡವರ ಕೆಲಸವನ್ನು ಮಾಡಬೇಕೆಂದು ಅಧ್ಯಕ್ಷರೆ ನೀವು ಒಂದು ಡೈರೆಕ್ಷನ್ ಕೊಡಿ. ಅಧ್ಯಕ್ಷರೆ, ನಿಮ್ಮ ಮಾತನ್ನು ಅವರು ಇತ್ತೀಚೆಗೆ ಕೇಳುತ್ತಿದ್ದಾರೆ. ಆದಕಾರಣ, ನೀವು ಡೈರೆಕ್ಷನ್ ಕೊಡಿ. ಇಂತಹ ಒಳ್ಳೆಯ ಕೆಲಸಕ್ಕೆ ನೀವು ಡೈರೆಕ್ಷನ್ ಕೊಡಲಿಲ್ಲವೆಂದರೆ, ಅಲ್ಲಿ ಅನಾಹುತವಾಗುತ್ತದೆ. ಅದಕ್ಕೋಸ್ಕರ, ದಯವಿಟ್ಟು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಕೇಳಿಕೊಂಡು ಇವೊತ್ತು ಸರ್ಕಾರ ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುವುದರಲ್ಲಿ ವಿಫಲವಾಗಿದೆ. ಬಜೆಟ್‌ನಲ್ಲೂ ಕೂಡ ಅದಕ್ಕೆ ಯಾವುದೇ ರೀತಿಯಿಂದಲೂ ಸ್ಪಂದಿಸಿಲ್ಲ, ಬರಗಾಲದ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ, ಇವೊತ್ತು ಒಂದು white paper ಇಡುವುದಕ್ಕೂ ಕೂಡ ಅವರಿಗೆ ಸಾಮರ್ಥ್ಯವಿಲ್ಲವೆಂದಾಗ ಇವರು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಎನ್ನುವುದನ್ನು ನಾನು ಇಲ್ಲಿಗೇ ಬಿಡುತ್ತೇನೆ. ಜನರು ತೀರ್ಮಾನ ಮಾಡುತ್ತಾರೆ. ಯಾವಾಗ, ಹೇಗೆ, ಯಾವ ರೀತಿ ಸ್ಪಂದಿಸಬೇಕೆಂಬುದು ಜನರಿಗೆ ಗೊತ್ತು, ನಾವು ಕೊನೆಗೆ ಏನು ಮಾಡಬಹುದು? ಒಂದು ಸಲ ಇಲ್ಲವೇ ಎರಡು ಸಲ ಅಲ್ಲಿ ಕೇಳಬಹುದು, ಅಪೀಲ್ ಮಾಡಬಹುದು, ಚರ್ಚೆ ಮಾಡಬಹುದು, ಸರ್ಕಾರದ ಮುಂದೆ ಮನವಿ ಮಾಡಬಹುದು. ಆದರೆ, ಸರ್ಕಾರ ಸ್ಪಂದಿಸಲಿಲ್ಲವೆಂದರೆ, ಕೊನೆಗೆ ಜನರಿದ್ದಾರೆ, ಜನತಾ ನ್ಯಾಯಾಲಯದ ಮುಂದೆ ನಿಂತು, 'ನಾವು ನಿಮ್ಮ ಬಗ್ಗೆ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಆದರೆ, ಈ ಸರ್ಕಾರ ಮೊಂಡುತನದಿಂದ ಯಾವುದೇ ಕೆಲಸ ಮಾಡುವುದಕ್ಕೂ ತಯಾರಿಲ್ಲ, ಸ್ಪಂದಿಸುವುದಕ್ಕೂ ತಯಾರಿಲ್ಲ' ಎಂದು ಹೇಳುತ್ತೇವೆ. ರಾತ್ರಿ ಸುಮಾರು 12 ಗಂಟೆ ಸಮಯದಲ್ಲೂ ನಮ್ಮವರು ಕೌನ್ಸಿಲ್‌ನಲ್ಲಿ ಮಲಗಿದರು. ಅದಕ್ಕೆ ಇನ್ನೂ ಕೂಡ ಪರಿಹಾರವಿಲ್ಲ. ಅಂದಾಗ, ಕೌನ್ಸಿಲ್‌ನಲ್ಲಿ ಮಲಗಿದರೂ ಅಷ್ಟೇ, ನಾವು ಮಾತನಾಡಿದರೂ ಅಷ್ಟೇ, agitation ಮಾಡಿದರೂ ಅಷ್ಟೇ. 'ನೀವು ಮಾಡುವುದು ಮಾಡಿ, ನಾವು ಮಾಡುವುದನ್ನು ಮಾಡುತ್ತೇವೆ' ಎನ್ನುವ ಸ್ಥಿತಿಯಲ್ಲಿದ್ದಾರೆ. ಅಂತಿಮವಾಗಿ ಜನರು ಇದರ ಬಗ್ಗೆ ನಿರ್ಣಯ ಮಾಡುತ್ತಾರೆ. ಇಷ್ಟಕ್ಕೆ ಮಾತ್ರ ನಾನು ಬಿಡುತ್ತೇನೆ. ಇಷ್ಟು ಹೊತ್ತು ತಾವು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್: ಅಧ್ಯಕ್ಷರೆ, ನನಗೆ ಸಮಯ ಕೊಡಬೇಕು.

ಅಧ್ಯಕ್ಷರು: ನಾನು ಮಾನ್ಯ ಸಿದ್ದು ಸವದಿ ಅವರನ್ನು ಕರೆದಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್ : ನನಗೆ ಯಾವಾಗ ಸಮಯ ಕೊಡುತ್ತೀರಿ? ನಾನು ಮೂರು ದಿವಸಗಳಿಂದಲೂ ಕೇಳುತ್ತಿದ್ದೇನೆ.

ಅಧ್ಯಕ್ಷರು: ಸಿದ್ದು ಸವದಿಯವರು.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನಗೆ ಯಾವಾಗ ಕೊಡುತ್ತೀರಿ?

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೆ, ಬೀದರ್‌ನವರಿಗೆ ಸ್ವಲ್ಪ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈ ಭಾಗದವರಿಗೇ ಮೊದಲು ಕೊಡೋಣವೆಂದು. ಆದರೆ ಸಿದ್ದುಸಾವದಿಯವರು ಇಲ್ಲ.

ಶ್ರೀ ರಾಜೇಂದ್ರ ವರ್ಮ : ಉತ್ತರ ಕರ್ನಾಟಕವೆಂದರೆ ಬೀದರ್, ಗುಲ್ಬರ್ಗಾ, ರಾಯಚೂರು ಬರುತ್ತದೆ.

ಅಧ್ಯಕ್ಷರು : ರಾಜೇಂದ್ರ ವರ್ಮರವರು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ನನಗೆ ಯಾವಾಗ ಸಮಯ ಕೊಡುತ್ತೀರಿ?

ಅಧ್ಯಕ್ಷರು: ಕೊಡುತ್ತೇನೆ. ನಿಮಗೆ ಎಲ್ಲಾ ಮುಗಿದ ಮೇಲೆ ಕೊಡುವುದು!

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಮಗೂ ಕೊಡಬೇಕು. ನಮ್ಮದು ಬರಗಾಲದ ಜಿಲ್ಲೆ.

ಅಧ್ಯಕ್ಷರು: ಆಯಿತು. ಮೊದಲು ಈ ಭಾಗದವರು ಮಾತನಾಡಲಿ.

ಶ್ರೀ ರಾಜೇಂದ್ರ ವರ್ಮ(ಹುಲುಸೂರ್) : ಮಾನ್ಯ ಅಧ್ಯಕ್ಷರೆ, ರಾಜ್ಯದ ಸಮ್ಮಿಶ್ರ ಸರ್ಕಾರ ಉತ್ತರ ಕರ್ನಾಟಕದ ಭಾಗದಲ್ಲಿ ವಿಧಾನಸಭೆಯ ಅಧಿವೇಶನ ಬೆಳಗಾವಿಯಲ್ಲಿ ಕರೆದಿದ್ದು ಇಡೀ ಕರ್ನಾಟಕ ಜನತೆಯ ಹೆಮ್ಮೆಯ ಮಾತಾಗಿದೆ. ಇದನ್ನು ನಾವು ಸ್ವಾಗತ ಮಾಡಬೇಕಾದದ್ದು ಕರ್ತವ್ಯ. ಹಿಂದೆ 60 ವರ್ಷಗಳಿಂದ ಈ ರಾಜ್ಯದೊಳಗೆ ಯಾವುದೇ ಸರ್ಕಾರ ಇಂಥ ಮಹತ್ವವಾದ ನಿರ್ಣಯವನ್ನು ತೆಗೆದುಕೊಂಡಿಲ್ಲ. ಆದರೆ ನಮ್ಮ ಸರ್ಕಾರ ಈ ಒಂದು ಮಹತ್ತರವಾದ ನಿರ್ಣಯವನ್ನು ತೆಗೆದುಕೊಂಡಿದ್ದಕ್ಕಾಗಿ ನಾವು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕ ಭಾಗದಲ್ಲಿ ಇರತಕ್ಕಂಥ ಹೈದ್ರಾಬಾದ್ ಕರ್ನಾಟಕ ಈವತ್ತು ಸ್ವಾತಂತ್ರ್ಯವಾಗಿ 60 ವರ್ಷ ಕಳೆದರೂ ಕೂಡ ಅಭಿವೃದ್ಧಿಯ ವಿಚಾರದಲ್ಲಿ ಏನೂ ಮುಂದುವರೆದಿಲ್ಲ. ಶಿಕ್ಷಣ ಇರಬಹುದು ಆರ್ಥಿಕ ವ್ಯವಸ್ಥೆ ಇರಬಹುದು ರಾಜಕೀಯ ವ್ಯವಸ್ಥೆ ಇರಬಹುದು, ಯಾರೇ ಬಂದರೂ ಕೂಡ ಉತ್ತರ ಕರ್ನಾಟಕದ, ಹೈದರಾಬಾದ್ ಕರ್ನಾಟಕ ಎಂದು ಹೇಳುವ ಮಾತಾಗಿದೆಯೇ ಹೊರತು ಅಲ್ಲಿ ಪ್ರಾಕ್ಟಿಕಲ್ ಆಗಿ ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ವ್ಯವಸ್ಥೆ, ರೈತರ ಬವಣೆಯನ್ನು ನೀಗಿಸುವಂಥ ಪ್ರಯತ್ನ ಇಲ್ಲಿಯವರೆಗೆ ಯಾವುದೇ ಸರ್ಕಾರ ಮಾಡಿಲ್ಲ. ಈಗ ನಮ್ಮ ಸಮ್ಮಿಶ್ರ ಸರ್ಕಾರ ಬಂದಮೇಲೆ ಬಡವರ ಬಗ್ಗೆಯಾಗಲಿ ರೈತರ ಬಗ್ಗೆಯಾಗಲಿ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದು ಯಶಸ್ವಿಯಾಗಲಿ ಎಂಬುದೇ ನಮ್ಮೆಲ್ಲರ ಭಾವನೆ. ಈವತ್ತು ಬೀದರ್ ಜಿಲ್ಲೆಗೆ ಒಂದು ಇತಿಹಾಸವಿದೆ. ಬೀದರ್ ಜಿಲ್ಲೆಯ ಮಹಾ ಪುರುಷರು ಎಂದರೆ ಶಿವಾಜಿಮಹಾರಾಜರ ಏರಿಯಾ ಇರಬಹುದು, ಗುರುನಾಯಕ್ ದೇವ್ ಜನರು ಇಲ್ಲಿರತಕ್ಕ ಏರಿಯಾ ಇದು, ಹಾಗೆಯೆ ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿ ಬಸವಣ್ಣನವರು ಬಸವಕಲ್ಯಾಣ ತಾಲ್ಲೂಕಿನಲ್ಲಿ ಅನುಭವ ಮಂಟಪದಲ್ಲಿ ಇಡೀ ದೇಶಕ್ಕೇ ಮಾದರಿಯಾದರು, ಸಮಾನತೆ ಇರಬೇಕು ಮೇಲು ಕೀಳು ಎಂಬುದು ಇರಬಾರದೆಂದು ಹೋರಾಟ ಮಾಡಿರತಕ್ಕಂಥ ಏರಿಯಾ ಇದು. ಬೀದರ್ ಜಿಲ್ಲೆಯೊಳಗೆ ಎಲ್ಲಾ ಭಾಷಿಕರಿದ್ದಾರೆ. ಬಹುಶಃ ನಾನು ತಿಳಿದುಕೊಂಡಂತೆ ಬೀದರ್‌ನಲ್ಲಿ 14 ಭಾಷೆಯನ್ನು ಆಡತಕ್ಕವರು ಇದ್ದಾರೆ. ಮರಾಠಿಗರೂ ಸಹ ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮರಾಠಿ ಜನಾಂಗದವರು, ಭಾಷಿಕರು ಎಲ್ಲಾದರು ಇದ್ದಾರೆಂದರೆ ಅದು ಬೆಳಗಾವಿ ಜಿಲ್ಲೆ ಎರಡನೆಯದು

ಬೀದರ್ ಜಿಲ್ಲೆ. ಗಡಿ ಭಾಗದಲ್ಲಿರತಕ್ಕ ಬೀದರ್ ಜಿಲ್ಲೆಗೆ ನಾವು ಶೈಕ್ಷಣಿಕವಾಗಿ ಬಹಳಷ್ಟು ಮುಂದುವರೆಯಬೇಕಾಗಿದೆ. ಇಲ್ಲಿನ ರೈತರು ಪ್ರತಿ ವರ್ಷ ಮಳೆ ಬಾರದಿರುವುದರಿಂದ, ಮಳೆ ಬಂದಿರುವುದರಿಂದ ಅನೇಕ ರೀತಿಯಿಂದ ರೈತರು ಬರಗಾಲಕ್ಕೆ ತುತ್ತಾಗುತ್ತ ಬಂದಿದ್ದಾರೆ. ಮೊನ್ನೆಯ ಸುದ್ದಿ ಪ್ರಕಾರ ಬೀದರ್‌ನಲ್ಲಿ ಬಹಳಷ್ಟು ಮಳೆ ಬಂದಿದೆ. ರಸ್ತೆಗಳು ಕೆಟ್ಟು ಹೋಗಿದೆ. ರೈತರ ಬೆಳೆ ನಾಶವಾಗಿದೆ. ಮೂರು ದಿವಸಗಳ ಹಿಂದೆ ಮಹಾರಾಷ್ಟ ಸರ್ಕಾರ ದನಗಾವ್ ಡ್ಯಾಂ ನಿಂದ ನೀರನ್ನು ಬಿಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಪ್ರತಿ ವರ್ಷ ಮಾಂಜ್ರಾ ನದಿಗೆ ನೀರು ಬಿಡುವಂಥ ಪ್ರಯತ್ನವನ್ನು ಮಾಡುತ್ತಾರೆ. ಆ ಸಂದರ್ಭದಲ್ಲಿ ಸಾವಿರಾರು ಎಕರೆ ಬೆಳೆ ನಾಶವಾಗುವಂಥದ್ದು ಮತ್ತು ಆ ಭೂಮಿಯಲ್ಲಿರುವ ಮಣ್ಣು ಕೊಚ್ಚಿಕೊಂಡು ಹೋಗುವಂಥದ್ದು. ರೈತರ ದನ ಜಾನುವಾರುಗಳು, ಮೋಟಾರು, ಪಂಪುಸೆಟ್ಟುಗಳೆಲ್ಲವೂ ಹರಿದುಹೋಗುವಂಥ ರೀತಿಯಾಗುತ್ತದೆ. ಪ್ರತಿ ವರ್ಷ ಆ ರೀತಿ ನೀರು ಬಿಟ್ಟಂಥ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದ ಸುಮಾರು 32 ಹಳ್ಳಿಗಳ ಜನರ ಸಂಪರ್ಕ ಮೂರ್‍ನಾಕು ತಿಂಗಳು ಕಡಿದು ಹೋಗುತ್ತದೆ. ಇದನ್ನು ತಡೆಗಟ್ಟುವ ಪ್ರಯತ್ನ ಮಾಡಬೇಕಾಗಿದೆ. ಪ್ರತಿ ವರ್ಷ ಮಹಾರಾಷ್ಟ ನೀರನ್ನು ಬಿಡುತ್ತಾರೆ. ನಮ್ಮ ಕರ್ನಾಟಕ ರಾಜ್ಯದ ಜನತೆ ಮೂರ್‍ನಾಕು ತಿಂಗಳು ಸಂಪರ್ಕವನ್ನು ಕಡಿದುಕೊಳ್ಳತಕ್ಕ ಸಂದರ್ಭ ಬರುತ್ತದೆ. ಅದಕ್ಕಾಗಿ ನಾವು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸಾಯಿಗಾವ್ ಎನ್ನುವಂಥ ಬ್ರಿಡ್ಜ್‌ನ್ನು ನೀವು ನಿರ್ಮಾಣ ಮಾಡಬೇಕು, ಜನರಿಗೆ ಹೋಗಿ ಬರಲು ಅನುಕೂಲ ಮಾಡಬೇಕು, ಬಸ್ಸು ಹೋಗಿಬರಲು, ಶಾಲಾ ಮಕ್ಕಳಿಗೆ ಹೋಗಿ ಬರಲು ಅನುಕೂಲವಾಗಬೇಕು, ಯಾರೊ ಅನಾರೋಗ್ಯ ಪೀಡಿತರು ಬಾಲ್ಕಿಗೆ, ಬಸವಕಲ್ಯಾಣ, ಬೀದರ್‌ಗೆ ಬರಬೇಕಾದರೆ ಅದರಿಂದ ಅನುಕೂಲವಾಗುತ್ತದೆಂದು ನಾನು ಪ್ರತಿ ಸಲ ಅಧಿವೇಶನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ಹಿಂದಿನ ಸರ್ಕಾರ ಅದನ್ನು ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅದಕ್ಕಾಗಿ ನಾನು ಈ ಸಮ್ಮಿಶ್ರ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಉಪಮುಖ್ಯಮಂತ್ರಿಯವರಿಗೆ ವಿನಂತಿ ಮಾಡುತ್ತೇನೆ. ನಮ್ಮ ರೈತರಿಗೆ ಅನುಕೂಲವಾಗುವಂತೆ, ಬಡವರಿಗೆ, ಶಾಲಾ ಮಕ್ಕಳಿಗೆ ಅನುಕೂಲವಾಗುವಂಥ ಬಸ್ಸುಗಳು ಓಡಾಟ ಮಾಡುವ ಸಲುವಾಗಿ ದಯವಿಟ್ಟು ನಮ್ಮ ಸರ್ಕಾರದವರು ಸಾಯಿಗಾವ್ ಬ್ರಿಡ್ಜ್‌ನ್ನು ನಿರ್ಮಾಣ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸರ್ಕಾರವಲ್ಲದೆಯೇ ಹಿಂದಿನ ಸರ್ಕಾರದಿಂದಲೂ ಕೂಡ ಸ್ವಾತಂತ್ರ್ಯವಾದಮೇಲೆ ದಲಿತರ ಮೇಲೆ ಸಾಕಷ್ಟು ದೌರ್ಜನ್ಯವಾಗಿದೆ. ಡಾ: ಅಂಬೇಡ್ಕರ್ ಮೂರ್ತಿಗೆ ಅವಮರ್ಯಾದೆಯಾಗಲಿ, ಅಂಬೇಡ್ಕರ್ ಪುತ್ತಳಿಕೆಯನ್ನು ಕಿತ್ತು ಹಾಕುವುದಾಗಲಿ, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಕೈಗೆ ಬಳೆ ತೊಡಿಸುವುದಾಗಲಿ, ಕೊರಳಲ್ಲಿ ಚಪ್ಪಲಿ ಹಾರ ಹಾಕುವುದಾಗಲಿ ಇಂಥ ಅನೇಕ ರೀತಿಯಾಗಿ ಬಾಬಾ ಸಾಹೇಬ್‌ರವರಿಗೆ ಅವಮರ್ಯಾದೆ ಮಾಡಿ ದಲಿತರ ಮೇಲೆ ದೌರ್ಜನ್ಯ ಮಾಡತಕ್ಕ ಘಟನೆಗಳು ಬಹಳಷ್ಟು ಕರ್ನಾಟಕ ರಾಜ್ಯದಲ್ಲಾಗುತ್ತಿದೆ. ಉದಾಹರಣೆಗೆ, ನಮ್ಮ ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನ ಜುಟ್ಟಾ ಗ್ರಾಮದಲ್ಲಿ ಇರತಕ್ಕ ದಲಿತರ ಮೇಲೆ ಬಹಳಷ್ಟು ದೌರ್ಜನ್ಯವಾಗಿತ್ತು. ಅಲ್ಲಿಗೆ

ನಾವು ಮತ್ತು ಅಧಿಕಾರಿ ವರ್ಗದವರು ಹೋಗಿ ಅವರಿಗೆ ಸಮಜಾಯಿಷಿಯನ್ನು ಹೇಳಿ ಅವರೆಲ್ಲರಿಗೆ ಕಾಂಪ್ರಮೈಸ್ ಮಾಡಿ ಒಳ್ಳೆಯ ರೀತಿಯಿಂದ ಬಾಳಬೇಕೆಂದು ಹೇಳಿ ಬಂದಿದ್ದೇವೆ. ಆ ಸಂದರ್ಭದಲ್ಲಿ ನಾವು ಮತ್ತು ಅಧಿಕಾರಿ ವರ್ಗದವರು ಆ ದಲಿತರ ಓಣಿಯನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುತ್ತೇವೆಂದು ಹೇಳಿ ಬಂದಿದ್ದೇವೆ. ಅಲ್ಲಿ ದಲಿತರಿಗೆ ಮನೆಗಳು ಇಲ್ಲ, ಅವರಿಗೆ ಮನೆಗಳನ್ನು ಕೊಡುತ್ತೇವೆಂದು ಹೇಳಿ ಬಂದಿದ್ದೇವೆ. ಕಿರಾಣಿ ಅಂಗಡಿಗಳಿಗೆ ಹೋಗುವುದಕ್ಕೆ ಕಡಿವಾಣವನ್ನು ಹಾಕಿದ್ದರು, ಇನ್ನೂ ಕೂಡ ಆ ದಲಿತರು ಮಾನಸಿಕ ಕೀಳರಿಮೆಯಲ್ಲಿ ಜೀವನ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ವಿನಂತಿ ಮಾಡುತ್ತೇನೆ, ಅಲ್ಲಿನ ದಲಿತರಿಗೆ ಒಂದು ನೂರು ಮನೆಗಳನ್ನಾದರೂ ಕೊಡಬೇಕು. ಅನಂತರ ಅಲ್ಲಿರತಕ್ಕ ಓಣಿ ಬಹಳಷ್ಟು ಹೊಲಸಾಗಿರತಕ್ಕ ಓಣಿ. ಒಂದೂ ಸಹ ಆರ್.ಸಿ.ಸಿ ಮನೆ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯವಾದಮೇಲೆ ಪ್ರಜಾಪ್ರಭುತ್ವದಲ್ಲಿ ಎಲ್ಲಾ ಸಮಾಜದವರು ತಲೆ ಎತ್ತಿ ಬಾಳತಕ್ಕ ಕೆಲಸವಾಗಬೇಕಾಗಿದೆ. ಅದಕ್ಕಾಗಿ ಆ ದಲಿತರಿಗೆ ನೂರು ಮನೆಗಳನ್ನು ಕೊಡುವುದರ ಮೂಲಕ ಹೊಸ ಸ್ಥಳವನ್ನು ಅವಕಾಶ ಮಾಡಿಕೊಡುವ ಮೂಲಕ, ಹಿಟ್ಟಿನ ಗಿರಣಿ, ಕಿರಾಣಿ ಅಂಗಡಿ, ಎಸ್‌ಸಿ.ಎಸ್‌ಟಿ ಅಭಿವೃದ್ಧಿ ನಿಗಮದಿಂದ ಆಟೋರಿಕ್ಷವನ್ನು ವಿದ್ಯಾವಂತರಿಗೆ ಕೊಡುವುದರ ಮೂಲಕ ದಲಿತರು ಹೆಮ್ಮೆಯಿಂದ ಬಾಳುವಂಥ ವ್ಯವಸ್ಥೆಯಾಗಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ, ನಮ್ಮ ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಸ್ವತಂತ್ರ್ಯ ಪೂರ್ವದಲ್ಲೂ ಹೋರಾಟ ಮಾಡಿದಂಥ ಸ್ವಾತಂತ್ರ್ಯ ಸೇನಾನಿಗಳಿದ್ದಾರೆ. ಅದರ ಜೊತೆಗೆ ರಜಾಕರ ಸಮಯದಲ್ಲಿ ಕೂಡ ಹೋರಾಟ ಮಾಡಿ ಮರಣ ಹೊಂದಿರುವ ಸೇನಾನಿಗಳಿದ್ದಾರೆ. ಉದಾಹರಣೆಗೆ, ನಮ್ಮ ಕ್ಷೇತ್ರದಲ್ಲಿ ಬರುವಂಥ ಕೋರ್ಟಾ ಗ್ರಾಮಕ್ಕೆ 17ನೇ ಸೆಪ್ಟೆಂಬರ್ 1948ನೇ ಇಸವಿಯಲ್ಲಿ ರಜಾಕರ ಸಮಯದಲ್ಲಿ ದಬ್ಬಾಳಿಕೆಯಾಗಿ ಅಲ್ಲಿನ ಆಸ್ತಿ ಪಾಸ್ತಿ ಲೂಟಿ ಮಾಡಿ ಸುಮಾರು ಎರಡು ನೂರು ಜನರಿಗೆ ಬಲಿದಾನ ಕೊಡುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಈವತ್ತು ನಮ್ಮ ಸರ್ಕಾರ ಯಾವುದೇ ರೀತಿಯಿಂದ ಆ ಒಂದು ಸಮಾಜಕ್ಕಾಗಿ ಹೋರಾಟ ಮಾಡಿದಂಥವರಿಗೆ, ನಮ್ಮ ಸಮಾಜದವರಿಗೆ ಮಾನ ಮಾರ್ಯಾದೆ ಉಳಿಸಬೇಕೆಂದು ನಿಜಾಮರ ಸರ್ಕಾರದೊಳಗೆ ಹೋರಾಟ ಮಾಡಿ ಏನು ಮರಣ ಹೊಂದಿದ್ದಾರೋ ಆ ಕುಟುಂಬಗಳಿಗೆ ಸರ್ಕಾರದಿಂದ ಇನ್ನೂ ಒಂದು ಪೈಸೆ ಸಹಸಿಕ್ಕಿಲ್ಲ. ಆಗಿನ ಕಾಲದಲ್ಲಿ ಮುನ್ಷಿಯವರು ಒಂದು ವರದಿ ಕೊಟ್ಟಿದ್ದಾರೆ. ಆ ಕೋರ್ಟಾ ಗ್ರಾಮದ ಬಂಗಾರ, ಬೆಳ್ಳಿ ಆಹಾರ ಧಾನ್ಯಗಳು 70 ಲಕ್ಷರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಅವರ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ.

12.00

ಆದರೆ ಇವತ್ತು ನಮ್ಮ ಕರ್ನಾಟಕ ರಾಜ್ಯದೊಳಗೆ ಎಷ್ಟೋ ಸರ್ಕಾರಗಳು ಬಂದವು, ಹೋದವು. ಇಲ್ಲಿ ನಿಜಾಮರ ವಿರುದ್ಧ ಹೋರಾಟ ಮಾಡಿ ಮಡಿದವರಿಗೆ ಇನ್ನೂ ಸಹಿತ ಒಂದೇ ಒಂದು single ಪೈಸಾ ಸಹಿತ ಮರಣ ಹೊಂದಿದ ಕುಟುಂಬಗಳಿಗೆ ಕೊಡಲಿಕ್ಕಾಗಿಲ್ಲ. ಪಿಂಚಣಿಯನ್ನು

ಸಹಿತ ಕೊಡಲಿಕ್ಕಾಗಿಲ್ಲ ಅದಕ್ಕಾಗಿ ತಮ್ಮ ಮುಖಾಂತರ ನಮ್ಮ ಸಮ್ಮಿಶ್ರ ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತೇನೆ. ಆ ಒಂದು ಗ್ರಾಮದ ಜನರು ನೆಮ್ಮದಿಯಿಂದ ಬಾಳುವಂತಹ ಒಂದು ಸ್ಮಾರಕ ಮಾಡಿ, ಸರ್ಕಾರದಿಂದ ಒಂದು ಯೋಜನೆ ಹಾಕಿಕೊಂಡು, ಆ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದರ ಜೊತೆಯಲ್ಲಿ ನಮ್ಮ ರಾಜ್ಯದಲ್ಲಿ ಬಹಳಷ್ಟು Backlog ಹುದ್ದೆಗಳು ಖಾಲಿ ಇವೆ. ನಾನು ಭಾರತೀಯ ಜನತಾ ಪಾರ್ಟಿಯ ರಾಜ್ಯ ಎಸ್‌ಸಿ ಮೋರ್ಚಾ ಅಧ್ಯಕ್ಷನಾಗಿರುವುದರಿಂದ ನಾನು ಎಲ್ಲರ ಪರವಾಗಿ ಮಾತನಾಡಬೇಕಾಗಿರುತ್ತದೆ. ಈ Backlog ಹುದ್ದೆಗಳು ಬಹಳಷ್ಟು ಖಾಲಿ ಇವೆ. ಇವುಗಳನ್ನು ತುಂಬಲು ನಮ್ಮ ಎಲ್ಲಾ ಸಂಘ ಸಂಸ್ಥೆಗಳು ಬಹಳ ಒತ್ತಾಯಿಸುತ್ತಿದ್ದಾರೆ. ನಮ್ಮ ಸಮಾಜದ ನವಯುವಕರು, ನಿರುದ್ಯೋಗಿಗಳು ಡಿಗ್ರಿಯಾಗಿ ಮನೆಯೊಳಗೆ ತಾಯಿ-ತಂದೆಗೆ ಭಾರವಾಗಿ ರೋಡ್‌ನಲ್ಲಿ ಅಡ್ಡಾಡುತ್ತಿದ್ದಾರೆ. ಅದಕ್ಕಾಗಿ ಈ Backlog ಹುದ್ದೆಗಳನ್ನು ನಮ್ಮ ಸರ್ಕಾರ ತುಂಬಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ. ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಉಳಿದಿರುವ ಎಲ್ಲಾ ಸಹಾಯಕ ಮತ್ತು ಕಿರಿಯ ಇಂಜಿನಿಯರ್ Backlog ಹುದ್ದೆಗಳನ್ನು KAT ಯಲ್ಲಿ Writ ಅರ್ಜಿ ಸಲ್ಲಿಸಿರುವ ನಿರುದ್ಯೋಗಿ ಇಂಜಿನಿಯರ್ ಅಭ್ಯರ್ಥಿಗಳಿಂದ ಶೀಘ್ರ ಭರ್ತಿ ಮಾಡಬೇಕು. ಸರ್ಕಾರಿ ಅನುದಾನಿತ ಇಂಜಿನಿಯರಿಂಗ್ Polytechnic ಮತ್ತು ITI college ಗಳಲ್ಲಿ Backlog supernumerary ಉಪನ್ಯಾಸಕರ ಹುದ್ದೆಗಳನ್ನು ಕೂಡಲೇ ತುಂಬಬೇಕು. ಸಾರಿಗೆ ಸಂಸ್ಥೆ ಮತ್ತು RTO ಇಲಾಖೆಯಲ್ಲಿ ಖಾಲಿ ಇರುವ Backlog engineer ಗಳ ಹುದ್ದೆಗಳನ್ನು ತುಂಬಬೇಕು. ವಿವಿಧ ಇಲಾಖೆಗಳ Backlog ನೇಮಕಾತಿಯಲ್ಲಿ Mechanical Engineer ಗಳಿಗೆ ಆದ ಅನ್ಯಾಯವನ್ನು ಸರಿಪಡಿಸಲು ಹೆಚ್ಚಿನ ಆದ್ಯತೆ ನೀಡಿ ಭರ್ತಿ ಮಾಡಬೇಕು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ದಿನಗೂಲಿ ನೌಕರರಲ್ಲಿ ಕೊರತೆ ಇರುವ ಶೇಕಡ 18ರಷ್ಟು ಹುದ್ದೆಗಳನ್ನು Backlog ಹುದ್ದೆಗಳೆಂದು ಪರಿಗಣಿಸಿ ಭರ್ತಿ ಮಾಡಬೇಕಾಗಿದೆ. ವಿವಿಧ ಇಲಾಖೆಗಳ ನಿಗಮ/ಮಂಡಳಿಗಳಲ್ಲಿ ಖಾಲಿಯಿರುವ ಸುಮಾರು 25 ಸಾವಿರ Backlog ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳನ್ನು ಭರ್ತಿಮಾಡಬೇಕಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವಾಗಿರುವುದರಿಂದ ಈ ಪ್ರದೇಶದಲ್ಲಿ ಕೈಗಾರಿಕೆಗಳು ಇಲ್ಲದಿರುವುದರಿಂದ ನಿರುದ್ಯೋಗಿ ಜನರ ಜೀವನ ಕಷ್ಟಕರವಾಗಿದೆ. ಕಾರಣ ಈ Engineer ಗಳು ಕೇವಲ ಸರ್ಕಾರಿ ಹುದ್ದೆಗಳ ಮೇಲೆ ಅವಲಂಬನೆಯಾಗಿರುವುದರಿಂದ ಈ ಭಾಗದ ಅಭ್ಯರ್ಥಿಗಳಿಗೆ Backlog ಹುದ್ದೆಗಳಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಶಾಸಕರೆಲ್ಲಾ ಈ ಅಧಿವೇಶನ ಮುಗಿದ ಬಳಿಕ ನಮ್ಮ ನಮ್ಮ ಜಿಲ್ಲೆಗೆ ಹೋಗಬೇಕಾಗಿದೆ. ನಾವು ಅಲ್ಲಿಗೆ ಹೋಗುವಂತಹ ಸಂದರ್ಭದಲ್ಲಿ ನಮ್ಮ ಜನರು ನಿರೀಕ್ಷೆ ಮಾಡುತ್ತಾರೆ. ಉತ್ತರ ಕರ್ನಾಟಕದಲ್ಲಿ ಇರತಕ್ಕಂಥ ಜಿಲ್ಲೆಗಳು ಇರಬಹುದು, ಹೈದರಾಬಾದ್-ಕರ್ನಾಟಕದ ಜಿಲ್ಲೆಗಳು ಇರಬಹುದು, ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥ ಜನರು

ಇರಬಹುದು, ಅವರು ಇವತ್ತು ಬೆಳಗಾವಿಯಲ್ಲಿ ಉತ್ತರ ಕರ್ನಾಟಕದಲ್ಲಿ ಈ ಒಂದು ಮಹತ್ತರವಾದಂತಹ ಅಧಿವೇಶನಕ್ಕೆ ನಮ್ಮ ಶಾಸಕರು ಹೋಗಿ ಬಂದಿದ್ದಾರೆ; ಅಲ್ಲಿಂದ ಏನೇನು ಯೋಜನೆಗಳನ್ನು ತಂದಿದ್ದಾರೆ ಎಂದು ನಮ್ಮ ಜೊತೆಯಲ್ಲಿ ವಿಚಾರ ಮಾಡುವಂತಹ ಸಂದರ್ಭ ಇದೆ. ಡಾ: ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಇವತ್ತು Border Area ದಲ್ಲಿ ಅಭಿವೃದ್ಧಿ ಕೆಲಸಗಳಾಗಬೇಕಾಗಿದೆ. ನಮ್ಮ ಬೀದರ್ ಜಿಲ್ಲೆ, ಆಂಧ್ರ ಮತ್ತು ಮಹಾರಾಷ್ಟ್ರ ಗಡಿಭಾಗದಲ್ಲಿ ಇರತಕ್ಕಂಥ Area ವಾಗಿದೆ. ಇವತ್ತು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಲಿ, ಆಂಧ್ರದ ಮುಖ್ಯಮಂತ್ರಿಯಾಗಲಿ, ಆಂಧ್ರದ Governor ಆಗಲಿ, ಮಹಾರಾಷ್ಟ್ರದ Governor ಇವರೆಲ್ಲರೂ ಸಹ ನಮ್ಮ ಬೀದರ್ ಜಿಲ್ಲೆಗೆ ಬಂದೇ ಹೋಗುತ್ತಾರೆ. ಈ ದೇಶದ ನಾಯಕರು, ಮಹಾರಾಷ್ಟ್ರದವರು ಇರಬಹುದು, ಆಂಧ್ರದವರು ಇರಬಹುದು, ಕರ್ನಾಟಕದವರು ಇರಬಹುದು, ಈ ಒಂದು ಜಿಲ್ಲೆಯಿಂದ ಬರತಕ್ಕಂಥ ನಮ್ಮ ನಾಯಕರು ಮತ್ತು ಕಾಂಗ್ರೆಸ್ ನಾಯಕರೂ ಕೂಡ ಇರಬಹುದು. ಅವರೆಲ್ಲರೂ ಇಲ್ಲಿಗೆ ಬಂದೇ ಮುಂದೆ ಹೋಗಿ ಸರ್ಕಾರಕ್ಕೆ ಹೀಯಾಳಿಸುತ್ತಾರೆ. ನಮ್ಮ ಬೀದರ್ ಜಿಲ್ಲೆ ಕರ್ನಾಟಕದ ಕಿರೀಟ ಇದೆ. ಇವತ್ತು ನಾವು ರಸ್ತೆಗಳಿಂದ ವಂಚಿತರಾಗಿದ್ದೇವೆ, ಕುಡಿಯುವ ನೀರಿನ ವ್ಯವಸ್ಥೆಯಿಂದ ವಂಚಿತರಾಗಿದ್ದೇವೆ, ಶಾಲೆ–ಕಾಲೇಜುಗಳಿಂದ ವಂಚಿತರಾಗಿದ್ದೇವೆ. ಇವತ್ತು ಹೈದರಾಬಾದ್–ಕರ್ನಾಟಕದಲ್ಲಿ ಸುಮಾರು 5–7 ಜಿಲ್ಲೆಗಳಿವೆ. ಇವತ್ತು ಒಂದು Airport ಅನ್ನೂ ಸಹ ಈ ಭಾಗದಲ್ಲಿ ಮಾಡಲಿಕ್ಕಾಗಿಲ್ಲ. ಬಹಳ ಸೂಕ್ಷ್ಮವಾಗಿ ನಂಜುಂಡಪ್ಪ ವರದಿ ಆಧಾರ ಮುಂದಿಟ್ಟುಕೊಂಡು ನಮಗೊಂದು Airport ಕೊಡಿ. ಎಲ್ಲಿ ಕೊಟ್ಟರೂ ನಮಗೆ ಸಂತೋಷವಿದೆ. ಆದರೆ ಒಂದು Air port ಕೊಡಿ. ಬೀದರ್‌ನಲ್ಲಿ ಸಧ್ಯಕ್ಕೆ Aerodrome Traning school ಇದೆ. ಅಲ್ಲಿ ನೀವು Airport ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಲ್ಲಿ ಎಲ್ಲಾ ಜನರೂ ಬಂದು ಹೋಗುವುದಕ್ಕೆ ಅವಕಾಶ ಸಿಗುತ್ತದೆ. ನಾಯಕರುಗಳಿಗೂ ಕೂಡ ಹೋಗಿ ಬರಲಿಕ್ಕೆ ಅವಕಾಶ ಸಿಗುತ್ತದೆ. ಗಡಿ ಭಾಗದಲ್ಲಿ ಇವತ್ತು ಶೈಕ್ಷಣಿಕವಾಗಿ ಬಹಳಷ್ಟು ತಾರತಮ್ಯವಾಗಿದೆ. ಇವತ್ತು ನಂಜುಂಡಪ್ಪ ವರದಿ ಆಧಾರವಾಗಿಟ್ಟುಕೊಂಡು ನಾವು ಇಲ್ಲಿ ಅಭಿವೃದ್ಧಿ ಮಾಡಬೇಕಾಗಿದೆ. ಕಳೆದ 50 ವರ್ಷಗಳಿಂದ ಉತ್ತರ ಕರ್ನಾಟಕದ ಭಾಗಕ್ಕಿಂತಲೂ ಕೂಡ ನಮ್ಮ ಹೈದರಾಬಾದ್–ಕರ್ನಾಟಕ ವಂಚಿತವಾಗಿದೆ. ಶೈಕ್ಷಣಿಕ ವಿಷಯದಲ್ಲಿ ಮಹಾರಾಷ್ಟ್ರದ ಗಡಿಭಾಗದಲ್ಲಿ ನಮ್ಮ ಸ್ಕೂಲುಗಳು ಬೇಕು. ನಮ್ಮ ಮರಾಠಿ ಭಾಷೆಯ ಸ್ಕೂಲುಗಳೂ ಬೇಕು. ಇವತ್ತು ನಮ್ಮ ಕ್ಷೇತ್ರದಲ್ಲಿ....

ಅಧ್ಯಕ್ಷರು : ಸಮಯವಾಯಿತು.

ಶ್ರೀ ರಾಜೇಂದ್ರವರ್ಮ : ಮಾನ್ಯ ಅಧ್ಯಕ್ಷರೆ, ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಇನ್ನು ಸ್ವಲ್ಪ ಹೊತ್ತಿನಲ್ಲೇ ನಾನು ಮುಗಿಸುತ್ತೇನೆ. ಇವತ್ತು ನಮ್ಮಲ್ಲಿ ಬ್ರಿಡ್ಜ್‌ನಿರ್ಮಾಣವಾಗಬೇಕು. ಇವತ್ತು ನಮ್ಮ ಕಡೆಗೆ ಹೋಗಿಬರುವಂತಹ ರಸ್ತೆಗಳ ಡಾಂಬರೀಕರಣವಾಗಬೇಕು. ನಾನು ಹುಲಸೂರು

ಕ್ಷೇತ್ರದಿಂದ ಎರಡನೇ ಸಾರಿಗೆ ಆರಿಸಿ ಬಂದಿದ್ದೇನೆ. ಒಂದು ಸಲ ಆರಿಸಿ ಬಂದವರ್‍ಯಾರೂ ಎರಡನೇ ಸಲ ಆರಿಸಿ ಬರದಂತಹ ಇತಿಹಾಸವೇ ಇಲ್ಲ. ನಾನು ಅಲ್ಲಿಂದ ಎರಡನೇ ಬಾರಿಗೆ ನಿಮ್ಮೆಲ್ಲರ ಆಶೀರ್ವಾದದಿಂದ ಮತ್ತು ನಿಮ್ಮ ಆಶೀರ್ವಾದದಿಂದ ಆರಿಸಿ ಇತಿಹಾಸ ನಿರ್ಮಾಣ ಮಾಡಿದ್ದೇನೆ. ಅಲ್ಲಿ ಕಾಲೇಜು ಇಲ್ಲ. Proper hulsur ನಲ್ಲಿ ಸರ್ಕಾರಿ High schools ಸಹ ಇಲ್ಲ. ಅದಕ್ಕಾಗಿ ನಾನು ವಿನಂತಿ ಮಾಡುತ್ತಿದ್ದೇನೆ. ಸರ್ಕಾರ ನಮ್ಮದಿದೆ. ನಮ್ಮ ಸರ್ಕಾರದಲ್ಲಿ ಇರತಕ್ಕಂಥ ಎಲ್ಲಾ ಮಂತ್ರಿಗಳಿಗೂ ಕೆಲಸ ಮಾಡಬೇಕೆನ್ನುವಂತಹ ಭಾವನೆ ಇದೆ. ಮುಖ್ಯಮಂತ್ರಿಗಳು ತರುಣರಿದ್ದಾರೆ. ಅವರಿಗೆ ಮುಂದೆ ಇನ್ನೂ ಭವಿಷ್ಯ ಇದೆ. ನಿಮ್ಮ ಮುಖಾಂತರ ನಾನು ಅವರಿಗೆ ವಿನಂತಿ ಮಾಡುತ್ತೇನೆ. ಇವೆಲ್ಲಕ್ಕೂ ಕೂಡ ಗಮನ ಕೊಡಬೇಕು. ಇವತ್ತು ಮೆಡಿಕಲ್ ಕಾಲೇಜು ಈ ವರ್ಷ ಪ್ರಾರಂಭವಾಗಬೇಕಾಗಿತ್ತು. ಆದರೆ Buildings ತಯಾರಾಗಿದೆ. ಇನ್ನೂ ಕೂಡ Staff ಇಲ್ಲ. ಈ ವರ್ಷ Start ಆಗುತ್ತದೆಂದು ಬಹಳ ನಿರೀಕ್ಷೆ ಇಟ್ಟಿದ್ದೆವು. ಅದು ಆರಂಭವಾದರೆ ದಲಿತರಿಗೆ ಬಹಳಷ್ಟು ಅವಕಾಶಗಳು ಸಿಗುವಂತಹ ವ್ಯವಸ್ಥೆಯಾಗುತ್ತದೆ. ದಯವಿಟ್ಟು ಅದನ್ನು ಕೂಡಲೇ ಆರಂಭಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ತಾವು ನನಗೆ ಮಾತನಾಡಲು ಇಷ್ಟೊಂದು ಸಮಯಾವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದನೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಸಿದ್ದು ಕಲ್ಲಪ್ಪ ಸವದಿ (ಜಮಖಂಡಿ) : ಸನ್ಮಾನ್ಯ ಅಧ್ಯಕ್ಷರೆ, ಬರಗಾಲ, ನೆರೆ ಹಾವಳಿ ಹಾಗೂ ನಂಜುಂಡಪ್ಪ ವರದಿ ಕುರಿತು ಸದನದಲ್ಲಿ ನಡೆದಿರತಕ್ಕಂಥ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಸುಮಾರು ಎರಡು ವರ್ಷಗಳಿಂದ ಮಹಾರಾಷ್ಟ್ರದಲ್ಲಿ ಮಳೆ ಜಾಸ್ತಿಯಾಗಿ, ಮಹಾರಾಷ್ಟ್ರ ಸರ್ಕಾರ ತಮ್ಮ ಜುರಾಲ ಜಲಾಶಯದಲ್ಲಿ ಇರತಕ್ಕಂಥ ನೀರನ್ನು ಹೆಚ್ಚುವರಿಯಾಗಿ ಬಿಟ್ಟಿದ್ದರಿಂದ ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು 30 ಹಳ್ಳಿಗಳು ನೆರೆ ಹಾವಳಿಯಿಂದ ತೊಂದರೆಗೆ ಒಳಪಟ್ಟಿವೆ. ಈ ಎರಡು ವರ್ಷಗಳಿಂದ ಬಂದಿರತಕ್ಕಂಥ ಪ್ರವಾಹದಿಂದ ಸುಮಾರು 30 ಹಳ್ಳಿಗಳು ಸಂಪೂರ್ಣವಾಗಿ ನೀರಿನಿಂದ ಸುತ್ತುವರಿದು, ಅಲ್ಲಿರತಕ್ಕಂಥ ಎಲ್ಲಾ ರಸ್ತೆಗಳೂ, ಮುಖ್ಯ ರಸ್ತೆಗಳಿಂದ ಹಿಡಿದು ಎಲ್ಲಾ ರೈತರ ಹೊಲ-ಗದ್ದೆ ರಸ್ತೆಗಳು ನೀರಿನ ರಭಸದಿಂದ ಕಿತ್ತು ಹೋಗಿದೆ. ರೈತರು ಬೆಳೆದಿರತಕ್ಕಂಥ ಸಾವಿರಾರು ಎಕರೆ ಕಬ್ಬು, ಬಾಳೆ, ಅರಿಶಿನ ಬೆಳೆ ನಾಶವಾಗಿದೆ. ರೈತರು ತಮ್ಮ ಜಮೀನುಗಳಲ್ಲಿ ಹಾಕಿಕೊಂಡಿರತಕ್ಕಂಥ ಮನೆಗಳು ಸಂಪೂರ್ಣವಾಗಿ ನಾಶವಾಗಿರುತ್ತವೆ. ಆ ಹಳ್ಳಿಗಳಲ್ಲಿ ಇರತಕ್ಕಂಥ ಎಲ್ಲಾ ಮನೆಗಳು ವಿಶೇಷವಾಗಿ ನೀರಿನಿಂದ ಬಿದ್ದಿವೆ. ಇಷ್ಟೊಂದು ದುರಂತದಾಯಕ ಸಂಗತಿ ನಮ್ಮ ತಾಲ್ಲೂಕಿನಲ್ಲಿ ನಡೆದಿದೆ. ಅದರಲ್ಲಿ ಈಗಾಗಲೇ ಆಲಮಟ್ಟಿ ಯೋಜನೆಯಲ್ಲಿ ಬಹುತೇಕ ಹಳ್ಳಿಗಳು ಪುನರ್ ವಸತಿಗೊಳಿಸಿದ್ದರೂ ಸಹಿತ, ಇನ್ನೂ ನನ್ನ ಕ್ಷೇತ್ರದಲ್ಲಿ, ನನ್ನ ತಾಲ್ಲೂಕಿನಲ್ಲಿ 8 ಹಳ್ಳಿಗಳಿಗೆ ಪುನರ್ ವಸತಿ ಕೊಡಬೇಕಾಗಿದೆ. ಅದರಲ್ಲಿ ವಿಶೇಷವಾಗಿ ಎರಡು

ಹಳ್ಳಿಗಳು ಆಲಮಟ್ಟಿ ಯೋಜನೆಯಲ್ಲಿದ್ದರೆ, ಇನ್ನುಳಿದ ಆರು ಹಳ್ಳಿಗಳು ಹಿಪ್ಪರಗಿ ಯೋಜನೆ ಅಡಿಯಲ್ಲಿ ಬರುತ್ತಿವೆ. ಆ ಎಲ್ಲಾ ಹಳ್ಳಿಗಳಿಗೆ ತಕ್ಷಣದಿಂದ ಪುನರ್ ವಸತಿ ಕಲ್ಪಿಸಲು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಆಲಮಟ್ಟಿ ಯೋಜನೆಯಲ್ಲಿ ಪುನರ್ ವಸತಿ ಕಲ್ಪಿಸಿಕೊಟ್ಟರೂ ಸಹಿತ, ಆ ಹಳ್ಳಿಗಳ ಜನರು ಆ ಪುನರ್ ವಸತಿ ಕೇಂದ್ರಕ್ಕೆ ಹೋಗುವ ಸ್ಥಿತಿಗೆ ಬಂದಿಲ್ಲ. ಅದಕ್ಕೆ ಕಾರಣಗಳು ಬಹಳಷ್ಟಿವೆ. ಏಕೆಂದರೆ, ಆ ಮುಳುಗಡೆಯಾಗಿರತಕ್ಕಂಥ ಹಳ್ಳಿಯಲ್ಲಿ ಇರತಕ್ಕಂಥ ಸಾವಿರಾರು ಎಕರೆ ಫಲವತ್ತಾದ ಜಮೀನುಗಳಿಗೆ ಪರಿಹಾರ ಕೊಟ್ಟಿಲ್ಲ. ಅದಕ್ಕಾಗಿ ಅನಿವಾರ್ಯವಾಗಿ ತಮ್ಮ ಜಾನುವಾರುಗಳನ್ನು ಮತ್ತು ತಮ್ಮ ಜಮೀನುಗಳಲ್ಲಿ ಬೇಸಾಯ ಮಾಡಲಿಕ್ಕೆ ಆ ಹಳೆಯ ಊರುಗಳಲ್ಲೇ ಜನ ವಸತಿ ಇರತಕ್ಕಂಥ ಸಂಗತಿ ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ಇದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ಏನು ಈ ಹಿಂದೆ 521 ರವರೆಗೆ ಸರ್ವೆ ಮಾಡಿ ಕೇವಲ 519.60 ಮಾತ್ರ ಜಮೀನನ್ನು ವಶಪಡಿಸಿಕೊಂಡಿದ್ದೀರಿ, ಆ 521ರವರೆಗೆ ತಾವು ವಶಪಡಿಸಿಕೊಂಡು, ಅವರಿಗೆ ಪರಿಹಾರ ಕೊಟ್ಟರೆ ಆ ಎಲ್ಲಾ ಸಂತ್ರಸ್ತರು ತಮ್ಮ ಹೊಸ ಊರುಗಳಿಗೆ ಹೋಗಿ ನೆಮ್ಮದಿಯಿಂದ ಜೀವನ ಸಾಗಿಸುವಂತಹ ವ್ಯವಸ್ಥೆಯಾಗುತ್ತದೆ. ಅಲ್ಲಿಯವರೆಗೆ ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವಂತಹ ವ್ಯವಸ್ಥೆಯಾಗಬೇಕು. 521ರವರೆಗೆ ವಶಪಡಿಸಿಕೊಳ್ಳಬೇಕು. ಆ ನದಿ ಪ್ರವಾಹ ಬಂದಾಗ ಮಾತ್ರ ನಿಮ್ಮನ್ನು ಸ್ಥಳಾಂತರ ಮಾಡಿಸುತ್ತೇವೆ, ಆ ಪ್ರವಾಹ ಹೋದಮೇಲೆ ಮತ್ತೆ ನೀವು ನಿಮ್ಮ ಹಳೆಯ ಊರಿನಲ್ಲಿ ಇರಲು ಹೋಗಬಹುದು ಎನ್ನುವಂಥ ಈ ದೇಶದಲ್ಲಿ ಎಲ್ಲೂ ಇಲ್ಲ. ಅದಕ್ಕಾಗಿ ಯು.ಕೆ.ಪಿ. ಯಲ್ಲಿ ಆ ಮನೆಗಳಿಗೆ ಪರಿಹಾರವನ್ನು ಕೊಟ್ಟಿರೋ, ಅವರಿಗೆ ಯಾವ ರೀತಿಯಾಗಿ ಸೈಟ್‌ಗಳನ್ನು ಕೊಟ್ಟಿರೋ ಆ ರೀತಿಯಾಗಿಯೇ ಅವರಿಗೆ ಇಲ್ಲಿ ಪರಿಹಾರವನ್ನು ಕೊಟ್ಟು ಅವರನ್ನು ಸ್ಥಳಾಂತರ ಮಾಡುವ ಕ್ರಮ ಜಾರಿಗೆ ಬರಬೇಕು. ಕಳೆದ ಎರಡು ವರ್ಷಗಳಿಂದ ಆ ಜನರು ಸಂತ್ರಸ್ಥರಾಗಿದ್ದರೂ ಕೂಡ ಹಿಂದಿನ ಸರ್ಕಾರ ಅವರಿಗೆ ಪುನರ್ವಸತಿಯನ್ನು ಕಲ್ಪಿಸಿಲ್ಲ. ಆದರೆ ನಮ್ಮ ಸಮ್ಮಿಶ್ರ ಸರ್ಕಾರ ಈ ಬಾರಿ ಫ್ಲಡ್ ಬಂದಾಗ ತಕ್ಷಣ ಆ ಹಳ್ಳಿಗಳ ರೈತರ ನೆರವಿಗೆ ಬಂದು ತಕ್ಷಣದಲ್ಲಿ ಯಾವ ರೀತಿಯ ವ್ಯವಸ್ಥೆಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಿದ್ದಾಗಿದೆ. ಈಗ ತಕ್ಷಣ ಅವರಿಗೆ ಪುನರ್ವಸತಿ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇದರ ಜೊತೆಗೆ ನಮ್ಮಲ್ಲಿ ಒಂದೆರಡ್ಮೂರು ಹಳ್ಳಿಗಳನ್ನು ಮಾತ್ರ ಭಾಗಶ: ಮುಳುಗಡೆ ಪ್ರದೇಶಗಳು ಎಂದು ಆದೇಶವನ್ನು ಕಳುಹಿಸಿದ್ದಾರೆ. ಆ ಹಳ್ಳಿಗಳನ್ನು ಭಾಗಶ: ಮುಳುಗಡೆ ಎಂದು ಒಪ್ಪಿಕೊಳ್ಳುವುದಕ್ಕೆ ಆ ಹಳ್ಳಿಯ ಜನರು ಒಪ್ಪುವುದಿಲ್ಲ. ಅವುಗಳನ್ನು ಸಂಪೂರ್ಣ ಮುಳುಗಡೆ ಪ್ರದೇಶ ಎಂದು ಮಾಡಬೇಕು. ಸಂಪೂರ್ಣ ಮುಳುಗಡೆ ಎಂದು ಮಾಡಿ ಅಲ್ಲಿರುವಂಥ ಹಳ್ಳಿಗಳನ್ನು ಸ್ಥಳಾಂತರ ಮಾಡುವಂಥ ವ್ಯವಸ್ಥೆ ಜಾರಿಯಾಗಬೇಕು. ಇನ್ನು ನಮ್ಮ ತಾಲ್ಲೂಕಿನಲ್ಲಿ ವಿಶೇಷವಾಗಿ ಒಂದು ಕಡೆ ನದಿ ಪ್ರವಾಹ ಬಂದು ಆ ಭಾಗಗಳಲ್ಲಿ ವಾಸ ಮಾಡುವ ರೈತರು ಮತ್ತು ಇತರ ಜನರು ಪ್ರವಾಹದಿಂದ

ತೊಂದರೆಗೊಳಪಟ್ಟರೆ, ಇನ್ನೊಂದು ಕಡೆ ಭೀಕರ ಬರಗಾಲದಿಂದ ಬೆಳೆಗಳೆಲ್ಲಾ ಹಾಳಾಗಿ ಜನರು ಗುಳೆ ಹೋಗುವಂಥ ಸಂದರ್ಭ ಬಂದಿರುತ್ತದೆ. ಬರಗಾಲ ಕಾಮಗಾರಿಗಳಿಗಾಗಿ ನಮ್ಮ ಸರ್ಕಾರ ತಕ್ಷಣ ಪ್ರತಿ ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುವುದರ ಮುಖಾಂತರ ಬರ ಪರಿಹಾರ ಕಾಮಗಾರಿ ಬರದಿಂದ ನಮ್ಮ ಜಿಲ್ಲೆಯಲ್ಲಿ ಸಾಗಿದೆ. ಇದಕ್ಕಾಗಿ ಸಮ್ಮಿಶ್ರ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದಕ್ಕೆ ಇನ್ನೂ ಹೆಚ್ಚಿನ ಅನುದಾನವನ್ನು ಕೊಡಬೇಕು. ನಾನು ಒಂದೆರಡು ದಿವಸಗಳಿಂದ ಕೇಳುತ್ತಿದ್ದೇನೆ. ಈಗಿನ ಸಮ್ಮಿಶ್ರ ಸರ್ಕಾರ ತಾರತಮ್ಯ ಮಾಡುತ್ತಿದೆ, ತಾರತಮ್ಯ ಮಾಡುತ್ತಿದೆ ಎನ್ನುವಂಥ ಮಾತುಗಳನ್ನು ವಿರೋಧ ಪಕ್ಷದವರು ಹೇಳುತ್ತಿರುವುದನ್ನು ನಾನು ಕೇಳುತ್ತಿದ್ದೇನೆ. ನಾನು ಹೊಸದಾಗಿ ಶಾಸಕನಾಗಿ ಬಂದು ಎರಡು ವರ್ಷಗಳಾಯಿತು. ಆದರೆ ನಾನು ಮೊದಲು ಬಂದಾಗ ಹಿಂದಿನ ಸರ್ಕಾರ ನನ್ನ ಕ್ಷೇತ್ರಕ್ಕೆ ಒಂದು ಪೈಸೆಯಷ್ಟು ತಾರತಮ್ಯ ಮಾಡಬಾರದು ಎನ್ನುವ ದೃಷ್ಟಿಯಿಂದ ನೋಡಲೇ ಇಲ್ಲ. ಅನೇಕ ವಿಷಯಗಳಲ್ಲಿ ತಾರತಮ್ಯ ಮಾಡಿದ್ದಾರೆ. ಯಾವಾಗ ಅವರು ಕಾಲೇಜು ಕೊಟ್ಟರು, ಯಾವಾಗ ಹೈಸ್ಕೂಲ್‌ಗಳನ್ನು ಕೊಟ್ಟರು ಎಂಬುದು ನಮಗೆ ಗೊತ್ತೇ ಇಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ಆರು ಮಂದಿ ಶಾಸಕರಿದ್ದೇವೆ. ಜೆ.ಡಿ.ಎಸ್. ಶಾಸಕರು ಒಬ್ಬರು ಇದ್ದರು. ಅವರಿಗೆ ಮಾತ್ರ ಆರೂ ಮಂದಿಗಿಂತ ಹತ್ತು ಪಟ್ಟು ಹೆಚ್ಚಿಗೆ ಅನುದಾನವನ್ನು ಕೊಟ್ಟು ಅವರ ಕ್ಷೇತ್ರ ಅಭಿವೃದ್ಧಿಯಾಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ನಮ್ಮ ಕಡೆ ಬಹಳಷ್ಟು ತಾರತಮ್ಯವನ್ನು ಮಾಡಿದ್ದಾರೆ. ಆದರೆ ಈಗ ನಿಮಗೆ ಆ ಭಗವಂತ ಪಾಠ ಕಲಿಸಿದ ಎಂದು ನನಗೆ ಬಹಳಷ್ಟು ಸಂತೋಷವಾಗುತ್ತಿದೆ. ಏಕೆಂದರೆ ನೀವು ಅಧಿಕಾರದಲ್ಲಿದ್ದಾಗ ವಿರೋಧ ಪಕ್ಷದವರಾದ ನಮಗೆ ಎಷ್ಟೊಂದು ಮಾನಸಿಕವಾದ ಹಿಂಸೆಯನ್ನು ಕೊಟ್ಟಿದ್ದಿರಿ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಿ. ನೀವು ಬೇಕಾದರೆ ಆಗಿನ ಅಂಕಿ ಸಂಖ್ಯೆಯನ್ನು ತೆಗೆಸಿ ನೋಡಿಕೊಳ್ಳಿ. ಯಾವ ಯಾವ ಕ್ಷೇತ್ರಕ್ಕೆ ಏನೇನಾಗಿದೆ ಎಂಬುದನ್ನು ತೆಗೆಸಿ ನೋಡಿಸಿ. ಆಗ ನಿಮಗೇ ಗೊತ್ತಾಗುತ್ತದೆ. ಹಿರಿಯರು ಹೇಳಿದ ಒಂದು ಗಾದೆ ಮಾತು ಇದೆ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂದು ಹೇಳಿರುವುದು ಇದೆ. ಈಗ ನಮ್ಮ ಕಾಲ ಬಂದಿದೆ. ಈಗ ನೀವು ಒದ್ದಾಡುವಂಥ ಪರಿಸ್ಥಿತಿ ಬಂದಿದೆ ಅದೇನೂ ದೊಡ್ಡದಲ್ಲ. ಏಕೆಂದರೆ ಹಿಂದೆ ನೀವು ಹಾಗೆ ನಮಗೆ ಮಾಡಿದ್ದಿರಿ. ಮಾಡಿದ್ದುಣ್ಣೋ ಮಾರಾಯ, ನೀವು ಬಿತ್ತಿದ ಬೆಳೆ ಉಣ್ಣುತ್ತಿದ್ದಿರಿ. ಆದರೂ ಕೂಡ ನಮ್ಮ ಸಮ್ಮಿಶ್ರ ಸರ್ಕಾರ ನೀವು ಮಾಡಿದ ಹಾಗೆ ತಾರತಮ್ಯ ಮಾಡಿಲ್ಲ. ಎಲ್ಲಾ ಕಡೆಗೂ ಕೂಡ ಸಮನಾಗಿ ಹೈಸ್ಕೂಲ್‌ಗಳನ್ನು ಕಾಲೇಜುಗಳನ್ನು ಕೊಡುವಂಥ ವ್ಯವಸ್ಥೆ ಮಾಡಿರುವುದನ್ನು ನಾನು ಕಂಡಿದ್ದೇನೆ. ಇಲ್ಲೇ ನಿಮ್ಮ ಸವದತ್ತಿ ಮಾಮಿನಿಯವರು ಇದ್ದರು. ನನ್ನ ಕ್ಷೇತ್ರಕ್ಕೆ ಮೂರು ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ, ಎರಡು ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದಾರೆ ಎನ್ನುವಂಥ ಮಾತುಗಳನ್ನು ಕಾಂಗ್ರೆಸ್‌ನವರು ನಮಗೆ ಹೇಳಿದ್ದಾರೆ.

(ಅಡಚಣೆ)

ನೀವು ಇದ್ದ ಕಾಲಕ್ಕೆ ಏನು ಕೊಟ್ಟಿರಿ ಹೇಳಿ. ನೀವು ಇದ್ದ ಕಾಲಕ್ಕೆ ಏನು ಕೊಟ್ಟಿರಿ ಹೇಳಿ.

ಶ್ರೀ ಎ. ಕೃಷ್ಣಪ್ಪ: ಈಗ ಕೊಟ್ಟ ಹೈಸ್ಕೂಲ್‌ಗಳು, ಕಾಲೇಜುಗಳು, ರೋಡ್‌ಗಳು, ಆಸ್ಪತ್ರೆಗಳು, ಇವೆಲ್ಲವನ್ನೂ ಸಮನಾಗಿ ಕೊಟ್ಟಿದ್ದಾರೆಯೇ? ನೀವೇನು ಇಲ್ಲಿ ಸುಳ್ಳು ಹೇಳುವುದಕ್ಕೆ ಬಂದಿದ್ದೀರಾ? ಸುಳ್ಳು ಹೇಳಬೇಡಿ. ಕುಳಿತುಕೊಳ್ಳಿರಿ

(ಅಡಚಣೆ)

ಶ್ರೀ ಸಿದ್ದು ಸವದಿ : ಮಾನ್ಯ ಕೃಷ್ಣಪ್ಪನವರೆ, ನಿಮ್ಮ ಸರ್ಕಾರವಿದ್ದಾಗ ನಮ್ಮ ಭಾಗಕ್ಕೆ ಬಹಳ ಅನ್ಯಾಯ ಮಾಡಿದ್ದಾರೆ. ಬಹಳಷ್ಟು ಮಾನಸಿಕ ಹಿಂಸೆಯನ್ನು ಅನುಭವಿಸಿದ್ದೇವೆ.

(ಅಡಚಣೆ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಕೃಷ್ಣಪ್ಪನವರೆ ಕುಳಿತುಕೊಳ್ಳಿ.

ಶ್ರೀ ಎ.ಕೃಷ್ಣಪ್ಪ: ಅವರಿಗೆ ಇಷ್ಟಬಂದ ಹಾಗೆ ಮಾತನಾಡುತ್ತಿರುವುದನ್ನು ನಾವು ಕೇಳುವುದಕ್ಕೆ ಬಂದಿದ್ದೇವೆಯೇ?

ಅಧ್ಯಕ್ಷರು : ಇಲ್ಲಿ ಎಲ್ಲರೂ ಕೇಳಿರಪ್ಪಾ "ಯಾವ ಸರ್ಕಾರಗಳೂ (ಅಡಚಣೆ) ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಆದುದರಿಂದ ನೀವು ಏನು ಹೇಳಬೇಕೋ ಸಮಸ್ಯೆಗಳ ಬಗ್ಗೆ ಅಷ್ಟನ್ನು ಮಾತನಾಡಿ.

(ಅಡಚಣೆ)

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಈ ತಾರತಮ್ಯದ ಬಗ್ಗೆ ನಾನು ಇನ್ನೊಂದು ಮಾತನ್ನು ಹೇಳಬಯಸುತ್ತೇನೆ.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯ ಕ್ಲಾರಿಫೈ ಮಾಡಬಯಸುತ್ತೇನೆ. ಈಗ ಕೃಷ್ಣಪ್ಪನವರು ಸೇರಿದಂತೆ ಇವರೆಲ್ಲಾ ಹೇಳಿದರು, ನಮಗೆಷ್ಟು ಕೊಟ್ಟಿದ್ದಾರೆ. ನಿಮಗೆಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಹೇಳಿದರು. ನಾನು ನೋಡಿದ್ದೇನೆ. ಎಲ್ಲಾ ಲಿಸ್ಟ್ ತರಿಸಿದ್ದೇನೆ. ಹಿಂದೆ ಯಾರು ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದಾರೆ, ಯಾರು ಯಾರಿಗೆ ಕಡಿಮೆ ಕೊಟ್ಟಿದ್ದಾರೆ ಅವುಗಳ ಬಗ್ಗೆ ಎಲ್ಲವನ್ನೂ ನೋಡಿ ನಾವು ಸರಿಯಾಗಿ ಕೊಟ್ಟಿದ್ದೇವೆ. ಕೆಲವು ಕಡೆ ಹೆಚ್ಚು ಈಗಾಗಲೇ ತೆಗೆದುಕೊಂಡಿರುವವರಿಗೆ ನಾವು ಕಡಿಮೆ ಕೊಟ್ಟಿದ್ದೇವೆ. ಹಿಂದೆ ಕಡಿಮೆ ಸಿಕ್ಕದ್ದವರಿಗೆ ಹೆಚ್ಚು ಕೊಟ್ಟಿದ್ದೇವೆ. ಇದರಲ್ಲಿ ಏನು ತಪ್ಪಿದೆ? ಅವರಿದ್ದಾಗ ಏನು ಹೇಗೆ ಮಾಡಿದ್ದಾರೆ ಎಂಬ ಬಗ್ಗೆ ಒಂದು ಲಿಸ್ಟ್ ಕೊಡಲಿ ಸಾರ್. ಅವರಿದ್ದಾಗ ಏನು ಮಾಡಿದ್ದಾರೆ ಹೇಳಲೇ, ಯಾರಿಗೂ ಒಂದೂ ಕೊಟ್ಟಿಲ್ಲ. ಒಬ್ಬೊಬ್ಬರಿಗೂ ಒಂದೂ ಕೊಟ್ಟಿಲ್ಲ. ಅವರು ತಮ್ಮದನ್ನೇ ಮಾಡಿದ್ದಾರೆ. ಎಲ್ಲವನ್ನೂ ಬೇಕಾದವರಿಗೆ ಮಾಡಿದ್ದಾರೆ. ಈ ವಿಚಾರ ಮೇಲಿಂದ ಮೇಲೆ ಬರುತ್ತಿದೆ. ನಾನು ಅದಕ್ಕಾಗಿ ಹೇಳುತ್ತೇನೆ. ಕಾಂಗ್ರೆಸ್‌ನವರು ಇದ್ದಾಗ ಎಷ್ಟೆಷ್ಟು ಶಾಲೆಗಳನ್ನು ಕೊಟ್ಟಿದ್ದಾರೆ. ಎಷ್ಟೆಷ್ಟು ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ನಾನು ಲಿಸ್ಟ್ ಕೊಡುತ್ತೇನೆ. ನೋಡಿಕೊಳ್ಳುವಿರಂತೆ. ಯಾರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ಹೇಳುತ್ತೇನೆ. ಈಗ ಬಹಳ ಅವರು ಮಾತನಾಡುತ್ತಾರೆ. ಆಗ ಯಾರು ಯಾರಿಗೆ ಅನ್ಯಾಯವಾಗಿದೆ ಅವರಿಗೆ ನಾವು ಕೊಟ್ಟಿದ್ದೇವೆ. ಡಾ: ನಂಜುಂಡಪ್ಪ ವರದಿ ಪ್ರಕಾರ ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು : ಆಯಿತು ಈಗ ಕುಳಿತುಕೊಳ್ಳಿ.

ಶ್ರೀ ಬಸವರಾಜ ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಅವರು ಆಪಾದನೆ ಮಾಡುವಾಗ ಅವರು ತಮ್ಮ ಎದೆ ಮುಟ್ಟಿಕೊಂಡು ಆಪಾದನೆಯನ್ನು ಮಾಡಬೇಕಾಗುತ್ತದೆ. ಅವರು ಏನು ಮಾಡಿದ್ದಾರೆ ನಾನು ಹೇಳುತ್ತೇನೆ. ಅವರು ಒಂದೂ ಕೊಟ್ಟಿಲ್ಲ. 20 ವರ್ಷದಿಂದ ಒಂದು ಶಾಲೆಯನ್ನು ಇವರು ಕೊಟ್ಟಿಲ್ಲ. ಉತ್ತರ ಕರ್ನಾಟಕಕ್ಕೆ ಡಾ: ನಂಜುಂಡಪ್ಪ ವರದಿ ಪ್ರಕಾರ ಶಾಲೆ ಬಿಟ್ಟಂಥ ಮಕ್ಕಳಿಗಾಗಿ ಶಾಲೆಯನ್ನು ಕೊಟ್ಟಿದ್ದೇವೆ. ಅದು ತಪ್ಪೇ? ಹೇಳಲಿ ಇವರು. ನಾನು ಲಿಸ್ಟ್ ಕೊಡುತ್ತೇನೆ. ಇವರೇನು ಮಾಡಿದ್ದಾರೆ ಮತ್ತು ನಾವೇನು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ.

(ಅಡಚಣೆ)

ರಾಜಕಾರಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ. ಅವರ ಸರ್ಕಾರ ಇದ್ದಾಗ ಅವರೂ ಹಾಗೆಯೇ ಮಾಡಿದ್ದಾರೆ. ನಮ್ಮ ಸರ್ಕಾರ ಬಂದಾಗ ನಾವೂ ಮಾಡಿದ್ದೇವೆ. ಇದರಲ್ಲಿ ತಪ್ಪೇನಿದೆ?

ಅಧ್ಯಕ್ಷರು : ಅವರದ್ದೂ ತಪ್ಪಿಲ್ಲ, ನಿಮ್ಮದೂ ತಪ್ಪಿಲ್ಲ.

ಶ್ರೀ **ಬಿ.ಎಸ್. ಹೊರಟ್ಟಿ** : ಹಿರಿಯಕ್ಕನ ಚಾಳು ಮನೆ ಮಂದಿಗೆಲ್ಲಾ ಎನ್ನುವಂತೆ ಅವರು ಏನು ಮಾಡಿದ್ದಾರೆ ಹಾಗೆಯೇ ನಾವೂ ಮಾಡಿದ್ದೇವೆ.

ಅಧ್ಯಕ್ಷರು: ಆಯಿತು, ಆಯಿತು, ಸವದಿಯವರೆ, ತಾವು ಮುಂದುವರೆಸಿ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರ್ಕಾರವನ್ನು ಹಾಗೂ ನಮ್ಮ ಶಿಕ್ಷಣ ಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಪ್ರಥಮ ಬಾರಿಗೆ ನಮ್ಮ ಭಾಗಕ್ಕೆ ಹೆಚ್ಚಿನ ಶಾಲೆಗಳನ್ನು ಹಾಗೂ ಹೆಚ್ಚು ಜೂನಿಯರ್ ಕಾಲೇಜುಗಳನ್ನು ಕೊಟ್ಟಿದ್ದಾರೆ. ಇನ್ನೊಂದು ವಿಷಯದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿರುವ ಬಗ್ಗೆ ನಾನು ಹೇಳಬಯಸುತ್ತೇನೆ. ರಾಜ್ಯದಲ್ಲಿ ಪ್ರಕೃತಿ ವಿಕೋಪವಾದಾಗ ಪರಿಹಾರ ಕ್ರಮಗಳನ್ನು ಮಾಡುವ ಕರ್ತವ್ಯ ಕೇವಲ ರಾಜ್ಯ ಸರ್ಕಾರಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಕೇಂದ್ರ ಸರ್ಕಾರದವರೂ ಕೂಡ ರಾಜ್ಯ ಸರ್ಕಾರದ ಸಹಾಯಕ್ಕೆ ಬರಬೇಕಾಗುತ್ತದೆ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ಏಕೆಂದರೆ ಕಳೆದ ವರ್ಷ ಫ್ಲಡ್ ಕೇವಲ ಮೂರ್ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಬಂದಿತ್ತು. ಆಗ ಕೇಂದ್ರ ಸರ್ಕಾರ 350 ಕೋಟಿ ರೂಪಾಯಿಗಳನ್ನು ಪರಹಾರವಾಗಿ ಕೊಟ್ಟದ್ದು ತಮಗೆಲ್ಲರಿಗೂ ಗೊತ್ತಿದೆ. ಆದರೆ ಈ ವರ್ಷ ಕರ್ನಾಟಕದ ಅರ್ಧ ಭಾಗದಲ್ಲಿಯೇ ಫ್ಲಡ್ ಬಂದಿದೆ. ಅರ್ಧ ಕರ್ನಾಟಕದ ಭಾಗದಲ್ಲಿ ಬರಗಾಲ ಬಂದಿದೆ. ಇದಕ್ಕಾಗಿ 1600 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಮ್ಮ ಸರ್ಕಾರ ಕೇಂದ್ರ ಸರ್ಕಾರವನ್ನು ಕೇಳಿದರೆ ಕೇಂದ್ರ ಸರ್ಕಾರದವರು ಕೇವಲ 250 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದು ತಾರತಮ್ಯ ಹೌದೋ ಅಲ್ಲವೋ ಎಂಬ ಬಗ್ಗೆ ನೀವೇ ವಿಚಾರ ಮಾಡಿ ನೋಡಬೇಕು. ಇಷ್ಟೊಂದು ಭೀಕರ ಬರಗಾಲ ಬಂದಾಗ, ರಾಜ್ಯದಲ್ಲಿ ಅರ್ಧ ಜಿಲ್ಲೆಯಲ್ಲಿ ಪ್ರವಾಹ ಬಂದಾಗ ತೊಂದರೆಯಾದಾಗ ಹತ್ತಾರು ಪಟ್ಟು ಅನುದಾನವನ್ನು ಕೊಡಬೇಕಾಗಿತ್ತು. ಈ ವರ್ಷ ಕೇಂದ್ರ

ಸರ್ಕಾರದವರು ಕೊಟ್ಟಿಲ್ಲ. ಏನಾದರೂ ಸ್ವಲ್ಪ ಕೊಟ್ಟಿದ್ದರೆ ನಮ್ಮ ರಾಜ್ಯ ಸರ್ಕಾರದ ಖಜಾನೆಯಿಂದ ಕೊಡಿಸುವಂಥ ಕೆಲಸವನ್ನು ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಹೇಳಬಯಸುತ್ತೇನೆ ಇನ್ನು ಮುಂದಾದರೂ ಈ ರೀತಿಯ ತಾರತಮ್ಯವನ್ನು ಕೇಂದ್ರ ಸರ್ಕಾರದವರು ಮಾಡಬಾರದು ನಾನು ಅವರ ಬಗ್ಗೆ ದೋಷಾರೋಪಣೆ ಮಾಡುತ್ತಿಲ್ಲ. ಪ್ರಕೃತಿ ವಿಕೋಪವಾದಾಗ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರೊಡನೆ ಸಮಾಲೋಚನೆ ಮಾಡಿ ಸಮಾನಾಂತರವಾಗಿ ಸರಿಯಾದ ವ್ಯವಸ್ಥೆ ಮಾಡುವಂಥ ಪ್ರವೃತ್ತಿ ಜಾರಿಯಾಗಬೇಕು. ಈ ಹಿಂದೆ ನೇಕಾರರ ಬಗ್ಗೆ ನಮ್ಮ ಸಮ್ಮಿಶ್ರ ಸರ್ಕಾರ ಬಹಳಷ್ಟು ಅನುಕೂಲತೆ ಮಾಡಿಕೊಟ್ಟಿದೆ. ಅವರಿಗೆ ಬಡ್ಡಿ ರಿಯಾಯಿತಿಯಾಗಲಿ, ವಿದ್ಯುತ್ ಸಬ್ಸಿಡಿಯಾಗಲಿ, ಈ ರೀತಿಯಾಗಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಮೊದಲ ಬಾರಿಗೆ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ರಾಜ್ಯದ ನೇಕಾರರ ಪರವಾಗಿ ನಾನು ಅಭಿನಂದನೆಯನ್ನು ಹೇಳಬಯಸುತ್ತೇನೆ. ಈ ಬಡ್ಡಿ ಸಬ್ಸಿಡಿ ಏನಿದೆ ಅದು ಪವರ್‌ಲೂಮ್ ಇರುವಂತಹ ನೇಕಾರರಿಗೆ ಅದರಲ್ಲೂ ಸುಸ್ಥಿತಿಯಲ್ಲಿರುವಂತಹ ನೇಕಾರರಿಗೆ ಅನುಕೂಲವಾಗಿದೆ. ಮಾನ್ಯ ಮಾಧುಸ್ವಾಮಿಯವರು ಮೊನ್ನೆ ಹೇಳಿದ ಪ್ರಕಾರ ರಾಜ್ಯ ಸರ್ಕಾರದ ಹಣಕಾಸಿನ ಇಲಾಖೆಯಿಂದ ತೆಗೆದುಕೊಂಡಿರುವಂತಹ ಸಾಲವಾಗಲಿ ಅಥವಾ ಕ್ರೆಡಿಟ್ ಸೊಸೈಟಿಯಿಂದ ತೆಗೆದುಕೊಂಡಿರತಕ್ಕಂಥ ಸಾಲವಾಗಲಿ ಆ ಸಾಲದ ಮೇಲೆ ನೇಕಾರರಿಗೆ ಬಡ್ಡಿ ಮನ್ನಾ ಮಾಡಿಲ್ಲ. ಈ ಎರಡು ಕಡೆಯಿಂದ ತೆಗೆದುಕೊಂಡಿರುವಂತಹ ಸಾಲಕ್ಕೆ ಬಡ್ಡಿ ಮನ್ನಾ ಮಾಡಿದರೆ ಆ ಬಡ ನೇಕಾರರಿಗೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಈ ರಾಜ್ಯ ಸರ್ಕಾರ ಬಡ ನೇಕಾರರ ಬಡ್ಡಿಯನ್ನು ಸಹ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಈ ಅಧಿವೇಶನದ ಸಂದೇಶ ಬಹಳ ಒಳ್ಳೆಯದಿದ್ದು, ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಮಾಡುತ್ತೇನೆ. ಇಲ್ಲಿರುವಂತಹ ಗಡಿ ಭಾಗದ ಜನರಿಗೆ ಬೆನ್ನೆಲುಬಾಗಿ ನಿಂತು ಅಧಿವೇಶನ ಮಾಡುವುದರ ಮುಖಾಂತರ ಬೆಳಗಾಂ ಕರ್ನಾಟಕದ ಅವಿಭಾಜ್ಯ ಅಂಗ ಎಂದು ನಮ್ಮ ಸರ್ಕಾರ ತೋರಿಸಿಕೊಟ್ಟಿದೆ. ಆದರೆ ಅದರ ಜೊತೆಗೆ ಇನ್ನೊಂದು ಮಾತನ್ನು ನಾನು ಹೇಳಬಯಸುತ್ತೇನೆ, ಉತ್ತರ ಕರ್ನಾಟಕ ಅಂದರೆ ಕೇವಲ ಬೆಳಗಾಂ ಅಲ್ಲ. ಅದರ ಜೊತೆಗೆ ಇದರಷ್ಟೇ ತೊಂದರೆಯಲ್ಲಿರತಕ್ಕಂಥ ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ ಹಾಗೂ ರಾಯಚೂರು ಜಿಲ್ಲೆಗಳಿವೆ. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆ ಸಹ ಬಹಳಷ್ಟು ತೊಂದರೆಗೆ ಒಳಪಟ್ಟಿದೆ. ಈ ರಾಷ್ಟ್ರಕ್ಕೆ ಲಕ್ಷಾವಧಿ ಎಕರೆ ಜಮೀನನ್ನು ತ್ಯಾಗ ಮಾಡುವುದರ ಮುಖಾಂತರ ಆಲಮಟ್ಟಿ ಯೋಜನೆಗೆ ಅನುಕೂಲವನ್ನು ಮಾಡಿಕೊಟ್ಟಿರುವಂತಹ ಜಿಲ್ಲೆ ಬಾಗಲಕೋಟೆ. ನಾವು ಸಹ ಬಹಳಷ್ಟು ತೊಂದರೆಗೆ ಒಳಪಟ್ಟಿದ್ದೇವೆ. ಇನ್ನು ನಮ್ಮ ಜಿಲ್ಲೆಯಲ್ಲಿ ಪುನರ್ವಸತಿ ಸರಿಯಾಗಿ ಆಗಿಲ್ಲ. ಅದಕ್ಕಾಗಿ ತಾವು ಮುಂದಿನ ಅಧಿವೇಶನವನ್ನು ಕರೆಯುವುದಿದ್ದರೆ ಬಾಗಲಕೋಟೆ ಜಿಲ್ಲೆಯಲ್ಲಿ ಕರೆಯಬೇಕು ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ

ನಾನು ಒತ್ತಾಯ ಮಾಡುತ್ತೇನೆ. ಅಲ್ಲಿರುವಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಅಲ್ಲಿಯೇ ಒಂದು ಅಧಿವೇಶನವನ್ನು ಕರೆದರೆ ಆ ಜಿಲ್ಲೆಯ ಶಾಸಕರು, ನಾವೆಲ್ಲರೂ ಸಹ ಈ ಬೆಳಗಾಂನಲ್ಲಿ ಏನು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ ಅದಕ್ಕಿಂತ ಒಳ್ಳೆಯ ವ್ಯವಸ್ಥೆಯನ್ನು ಮಾಡಿಕೊಡುವುದಕ್ಕೆ ತಯಾರಿದ್ದೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ ಪ್ರವಾಹ ಬಂದಾಗ ನನ್ನ ಕ್ಷೇತ್ರವಾದ ಜಮಖಂಡಿ ನಗರ ಸೇರಿಕೊಂಡು ಅಲ್ಲಿ ಇಡೀ ತಾಲ್ಲೂಕು ನಡುಗಡ್ಡೆಯಾಗಿ ನಿರ್ಮಾಣವಾಗಿದೆ. ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಲ್ಲಿ ತುಂಬಾ ಮಹತ್ವವಾಗಿರುವಂತಹ ಸುಮಾರು 50 ವರ್ಷಗಳಿಂದ ಬೇಡಿಕೆ ಇರುವಂತಹ 25 ಕೋಟಿ ರೂಪಾಯಿಯ ಖರ್ಚು ಮಾಡಿ ಒಂದು ಬ್ರಿಡ್ಜ್ ಮಾಡಿಕೊಟ್ಟರೆ, ಆ ಜಮಖಂಡಿ ಇಡೀ ತಾಲ್ಲೂಕು ನಡುಗಡ್ಡೆಯಾಗುವುದನ್ನು ತಪ್ಪಿಸಿದ ಹಾಗೆ ಆಗುತ್ತದೆ. ಅದಕ್ಕಾಗಿ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಡವನ್ನು ಹೇರಬಯಸುತ್ತೇನೆ. ಆ ಬ್ರಿಡ್ಜ್ ಕಾರ್ಯವನ್ನು ಜರೂರಾಗಿ ತೆಗೆದುಕೊಳ್ಳುವಂತಹ ವಿನಂತಿಯನ್ನು ಮಾಡುತ್ತೇನೆ. ಇನ್ನು ನಮ್ಮ ಭಾಗಕ್ಕೆ ಅತೀ ಅವಶ್ಯವಾಗಿರುವಂತಹ ಒಂದು ಸಂಗತಿಯೆಂದರೆ ಹಿಂದೆ ಬ್ರಿಟೀಷ್ ಸರ್ಕಾರ ಇದ್ದಾಗ ರೈಲ್ವೆ ಲೈನ್ ಸರ್ವೆ ಮಾಡಿದ್ದಾರೆ. ಕುಡುಚಿ ವಯಾ ಜಮಖಂಡಿ ಹಾಗೂ ಬಾಗಲಕೋಟೆಗೆ ಹೋಗುವುದಕ್ಕೆ ಬ್ರಿಟಿಷ್ ಸರ್ಕಾರ ಇದ್ದಾಗ ಸರ್ವೆ ಮಾಡಿದ್ದು, ಅದು ಇನ್ನೂ ಜಾರಿಗೆ ಬಂದಿಲ್ಲ. ಮೊನ್ನೆ ಕಮಿಟಿಯಿಂದ ಕೇಂದ್ರಕ್ಕೆ ನಾವು ಹೋದಂತಹ ಸಂದರ್ಭದಲ್ಲಿ ಮಾನ್ಯ ಲಾಲೂ ಪ್ರಸಾದ್ ಯಾದವ್, ಕೇಂದ್ರದ ಮಂತ್ರಿ ಇವರನ್ನು ಬೇಟಿಯಾಗಿ ಅದರ ಬಗ್ಗೆ ವಿಚಾರ ಮಾಡಿದಾಗ 242 ಕೋಟಿ ರೂಪಾಯಿಗೆ ಎಸ್ಟಿಮೇಟ್ ಆಗಿದೆ. 111 ಕಿಲೋಮೀಟರ್ ರಸ್ತೆ ಇದೆ, ಅದಕ್ಕೆ ರಾಜ್ಯಸರ್ಕಾರದ ಪಾಲು ಹಣ ತುಂಬಿದರೆ ನಾವು ತಕ್ಷಣ ಕೈಗೆ ಕೆಲಸವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಮಾನ್ಯ ರೈಲ್ವೆ ಸಚಿವರು ಹೇಳಿದ್ದಾರೆ. ಅದಕ್ಕಾಗಿ ತಮ್ಮ ಮುಖಾಂತರ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ, ಈ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ಆ ರೈಲ್ವೆ ಲೈನ್ ಮಾಡುವುದು ಬಹಳ ಅವಶ್ಯ ಇದೆ. ಏಕೆಂದರೆ ನಮ್ಮ ಭಾಗದಲ್ಲಿ ಹತ್ತಾರು ಸಕ್ಕರೆ ಫ್ಯಾಕ್ಟರಿಗಳು, ಹತ್ತಾರು ಸಿಮೆಂಟ್ ಫ್ಯಾಕ್ಟರಿಗಳು, ಈ ರೀತಿಯಾಗಿ ಬಹಳಷ್ಟು ಇಂಡಸ್ಟ್ರೀಸ್ ಬಂದಿದ್ದರಿಂದ ಅಲ್ಲಿ ನಮಗೆ ಆ ರೈಲ್ವೆ ಲೈನ್‌ನ ಅವಶ್ಯಕತೆ ಇದೆ. ತಕ್ಷಣ ಈ ಬಾಗಲಕೋಟೆ ಹಾಗೂ ಗದಗ್ ಮುಗಿದನಂತರ ಕರ್ನಾಟಕದ ರಾಜ್ಯದ ಪಾಲು ಹಣವನ್ನು ಕೇಂದ್ರ ಸರ್ಕಾರಕ್ಕೆ ತುಂಬುವುದರ ಮುಖಾಂತರ ಆ ರೈಲ್ವೆ ಲೈನ್‌ನ್ನು ಸಹ ತಕ್ಷಣ ತೆಗೆದುಕೊಳ್ಳಲು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಕಬ್ಬಿನ ಸಮಸ್ಯೆ ಬಗ್ಗೆ...

ಅಧ್ಯಕ್ಷರು : ಸಮಸ್ಯೆಗಳು ಬಹಳ ಇದೆ ರೀ. ತಾವು ಬೇಗ ಮುಗಿಸಬೇಕು.

ಶ್ರೀ ಸಿದ್ದು ಸವದಿ : ಆ ಭಾಗದಲ್ಲಿ ಕಬ್ಬು ಬೆಳೆಯುವ ಕಡೆಯವನಾಗಿರುವುದರಿಂದ ಹಿಂದೆ ಫ್ಯಾಕ್ಟರಿಗಳು ಒಂದು ಸಾವಿರ ರೂಪಾಯಿ ಸಕ್ಕರೆ ಧಾರಣೆ ಇರುವಾಗ ಅಷ್ಟೆ ಕಬ್ಬಿನ ರೇಟ್ ಕೊಟ್ಟಿರುವುದು ಬಹಳಷ್ಟು ಉದಾಹರಣೆಗಳು ಇದೆ. ಆದರೆ ಇವತ್ತು ಸಕ್ಕರೆ ಧಾರಣೆ 1800, 1900

ಹಾಗೂ 2000 ರೂಪಾಯಿಯವರೆಗೆ ಇದೆ. ಆದರೆ ರೇಟ್ 1200 ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಬೆಳಗಾಂ ನಲ್ಲಿ ರೇಟ್ ಫಿಕ್ಸ್ ಮಾಡುವಾಗ ಆ ರೈತರ ನಿಯೋಗದಲ್ಲಿ ನಾನೂ ಕೂಡ ಇದ್ದೆ. ಮೊದಲ ಕಂತು ಎಂದು 1200 ರೂಪಾಯಿಗೆ ಹೋದ ವರ್ಷ ನಾವು ಫಿಕ್ಸ್ ಮಾಡಿದ್ದೇವೆ. ಆದರೆ ನಮ್ಮ ಎಲ್ಲಾ ಸಕ್ಕರೆ ಫ್ಯಾಕ್ಟರಿಯವರು 1200 ರೂಪಾಯಿ ಒಂದೇ ಕಂತು ಕೊಟ್ಟು ಕೈತೊಳೆದುಕೊಂಡು ಬಿಟ್ಟಿದ್ದಾರೆ. ಅದಾಗಬಾರದು. ಮಹಾರಾಷ್ಟ್ರ ಕಬ್ಬು ಹೆಚ್ಚಿಗೆ ರಿಕವರಿ ಬರುತ್ತದೆನ್ನುವ ಮಾತನ್ನು ಹೇಳುತ್ತಾರೆ. ನಿನ್ನೆ ಮಾನ್ಯ ಸಚಿವರು ಹೇಳಿದರು, ಆದರೆ ಸತ್ಯ ಸಂಗತಿ ಹಾಗೆ ಇಲ್ಲ. ಹೆಚ್ಚಿಗೆ ರಿಕವರಿ ಬರುವಂಥಾದ್ದು ಕಬ್ಬು ಯಾವುದೆಂದರೆ ಬಿಜಾಪುರ, ಬಾಗಲಕೋಟೆ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಇದೆ. ಈ ಕಬ್ಬನ್ನು ಮಹಾರಾಷ್ಟಕ್ಕೆ ತೆಗೆದುಕೊಂಡು ಹೋಗಿ ಅವರು ನುರಿಸುತ್ತಾರೆ. ಅವರು ನುರಿಸಿದಂತಹ ಕಬ್ಬು ಹೇಗೆ ಹೆಚ್ಚು ಬಂತು, ನಮಗೆ ಹೇಗೆ ಕಡಿಮೆ ಬಂತು? ಅದು ಸತ್ಯಸಂಗತಿ ಅಲ್ಲ. ಹಿಂದೆ ಹೇಗೆ ಸಕ್ಕರೆ ರೇಟ್ ಒಂದು ಸಾವಿರ ರೂಪಾಯಿ ಇದ್ದಾಗ ಕಬ್ಬಿಗೆ ಸಾವಿರ ರೂಪಾಯಿ ರೇಟ್ ಕೊಡುತ್ತಿದ್ದರು, ಹಾಗೆ ಈಗ ಎರಡು ಸಾವಿರ ರೂಪಾಯಿ ರೇಟ್ ಇದೆ ಅದೇರೀತಿ ಎರಡು ಸಾವಿರ ರೂಪಾಯಿ ಮಾಡಿ. ನಾವು ಸುಮ್ಮನೆ ಬೇಡುತ್ತಿಲ್ಲ, ಸಕ್ಕರೆ ಫ್ಯಾಕ್ಟರಿ ಉಳಿಯಬೇಕು. ಆ ಸಕ್ಕರೆ ಫ್ಯಾಕ್ಟರಿ ಉಳಿದಾಗ ನಾವು ರೈತರು ಬದುಕುತ್ತೇವೆ. ಅದಕ್ಕಾಗಿ 1500 ರೂಪಾಯಿ ಕೊಡುವುದಕ್ಕೆ ತೊಂದರೆ ಇಲ್ಲ. ಸರ್ಕಾರಿ ಫ್ಯಾಕ್ಟರಿಗಳ ಮಾಲೀಕರನ್ನು ಕರೆಸಿ ಅವರ ಮೇಲೆ ಒತ್ತಡ ಹೇರಿ ಅವರಿಗೆ 1500 ರೂಪಾಯಿ ಕೊಡುವುದಕ್ಕೆ ಹೇಳಬೇಕು. 1500 ರೂಪಾಯಿಯಂತೆ ರೇಟ್ ಅವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ, ಈಗಾಗಲೇ ರೈತರುಗಳು ಹೋರಾಟ ಮಾಡುತ್ತಿದ್ದಾರೆ, ಅವರ ಬೆಂಬಲಕ್ಕೆ ಸರ್ಕಾರ ನಿಲ್ಲಬೇಕೆಂದು ಹೇಳಿ, ನನಗೆ ನಮ್ಮ ಭಾಗದ ಸಮಸ್ಯೆಗಳನ್ನು ಈ ವಿಧಾನಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಬಿ.ಆರ್. ಪಾಟೀಲ್...

ಬಿ.ಆರ್. ಪಾಟೀಲ್(ಆಳಂದ) : ಮಾನ್ಯ ಅಧ್ಯಕ್ಷರೆ, ನಿನ್ನೆ ಜಂಟಿ ಸದನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಈ ಸ್ಥಾನದಲ್ಲಿ ಕುಳಿತಿದ್ದಾಗ ಬಹಳ ಸುಗಮ ಸಂಗೀತದ ಹಾಡನ್ನು ಕೇಳಿದ್ದೇವೆ. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎನ್ನುವಂತಹ ಹಾಡನ್ನು ಕೇಳಿ ನಾವೆಲ್ಲರೂ ಸಂತೋಷಪಟ್ಟೆವು. ಮತ್ತೆ ಅಭಿಮಾನ ಪಟ್ಟೆವು. ಮತ್ತು ಅದರ ಜೊತೆಗೆ ಕರ್ಕಿಯವರು ಕೂಡ ಹಾಡಿದಂತಹ, ಹಚ್ಚೇವು ಕನ್ನಡದ ದೀಪ, ಹಾಡನ್ನು ಅಭಿಮಾನದಿಂದ, ಸ್ವಾಭಿಮಾನದಿಂದ ಇಲ್ಲಿ ಹಾಡನ್ನು ಕೇಳಿದೆವು. ಮಾನ್ಯ ಶಂಕರ ಮೂರ್ತಿ ಯವರು ಮಾತನಾಡುತ್ತಾ ಉದಯವಾಯಿತು ನಮ್ಮ ಚೆಲುವ ಕನ್ನಡನಾಡು ಎನ್ನುವಂತಹ ಮಾತನ್ನು ಹೇಳಿದರು. ಹೌದು ನಮ್ಮ ಈ ಚೆಲುವ ಕನ್ನಡ ನಾಡು ಉದಯವಾಗಲಿ ಎಂದು ಹಾಡಿದವರು, ಉದಯವಾಯಿತು ಎನ್ನುವಂತಹ ಮಾತಿಗೆ ಬಂದಾಗ ನಾವು ಸ್ವಲ್ಪ ನಿಂತು ಯೋಚನೆ ಮಾಡಬೇಕಾಗುತ್ತದೆ. ನಿಜವಾಗಿ ಕೂಡ ಈ ಕನ್ನಡ ನಾಡು ಸಮಗ್ರವಾಗಿ ಉದಯವಾಯಿತೋ ಮತ್ತು ಈ ಎಲ್ಲಾ ಕನ್ನಡ ನಾಡಿನ ಮನೆ ಮನೆಗಳಲ್ಲಿ ಈ

ಜ್ಯೋತಿಯ ದೀಪ ಉರಿಯಿತೋ ಎನ್ನುವಂಥಾದನ್ನು ನಾವೆಲ್ಲರೂ ಇಲ್ಲಿ ಕುಳಿತು ಚಿಂತನೆ ಮಾಡಬೇಕಾಗುತ್ತದೆ, ಚರ್ಚೆ ಮಾಡಬೇಕಾಗುತ್ತದೆ. ಆಗ ಈ ಸುವರ್ಣ ಕರ್ನಾಟಕದ ಆಚರಣೆಗೆ ನಿಜವಾಗಿ ಒಂದು ಅರ್ಥ ಬರುತ್ತದೆ, ಆ ದಿಕ್ಕಿನಲ್ಲಿ ಇವತ್ತು ಬೆಳಗಾವಿಯಲ್ಲಿ ಸರ್ಕಾರ ಅಧಿವೇಶನವನ್ನು ಕರೆದಿದ್ದಾರೆ, ಅದಕ್ಕೆ ಚರ್ಚೆಯಾದರೆ ಮಾತ್ರ ಒಳ್ಳೆಯ ಹೆಸರು ಬರುತ್ತದೆ ಮತ್ತು ರಾಜ್ಯದ ಜನತೆಗೂ ಕೂಡ ಒಂದು ಒಳ್ಳೆಯ ಸಂದೇಶ ಹೋಯಿತು ಎನ್ನುವ ಉದ್ದೇಶದಿಂದ ನಾನು ಇಲ್ಲಿ ಮಾತನಾಡುವುದಕ್ಕೆ ಇಚ್ಚೆಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಗಡಿನಾಡಿನ ಒಬ್ಬ ಶಾಸಕನಾಗಿ ಬಹಳ ನೊಂದ ಮನಸ್ಸಿನಿಂದ ನಾನು ಹೇಳುತ್ತೇನೆ. ಇವತ್ತು ಬಹಳಷ್ಟು ಗಡಿನಾಡಿನ ಪ್ರದೇಶದ ಜನರು ಮನಸ್ಸಿನಲ್ಲಿ ಒಂದು ತರಹ ನೋವಿದೆ. ಏನೋ ಒಂದು ಭಾಷೆ ಅಭಿಮಾನದಿಂದ 1956 ರಲ್ಲಿ ವಿಶಾಲ ಕರ್ನಾಟಕದ ಕಲ್ಪನೆಗೆ ಒಪ್ಪಿ ಈ ರಾಜ್ಯದಲ್ಲಿ ಏನು ನಾವು ಬಂದು ಸೇರಿದೆವು, ನಾವು ಸೇರಿದ ನಂತರ ಸಮಾನವಾದಂತಹ ಅವಕಾಶಗಳು, ಸಮಾನವಾದಂತಹ ಅಭಿವೃದ್ಧಿ ಮತ್ತು ಸಮಾನವಾದಂತಹ ಎಲ್ಲಾ ಸೌಕರ್ಯಗಳು ನಮಗೂ ಸಿಗುತ್ತವೆ, ನಾವೂ ಈ ಕರ್ನಾಟಕ ಕಟ್ಟುವಲ್ಲಿ ನಾವು ಮಹತ್ವವಾದ ಪಾತ್ರವನ್ನು ವಹಿಸುತ್ತೇವೆ ಎನ್ನುವಂತಹ ಭಾವನೆಯನ್ನು ಇಟ್ಟುಕೊಂಡು ನಿಜಾಮ ರಾಜ್ಯವನ್ನು ಬಿಟ್ಟು ಬಂದೆವು. ಇವರು ಮುಂಬಯಿ ಕರ್ನಾಟಕವನ್ನು ಬಿಟ್ಟು ಬಂದರು, ಕೆಲವರು ಮದ್ರಾಸ್ ಪ್ರಾಂತ್ಯದಿಂದ ಬಂದರು. ಕೊಡಗಿನವರೂ ಕೂಡ ನಮ್ಮ ಜೊತೆಗೆ ಬಂದು ಕರ್ನಾಟಕ ಎನ್ನುವಂತಹ ಒಂದು ರಾಜ್ಯದ ಕಲ್ಪನೆಯನ್ನು ನಾವು ಅಂದು ಕೊಟ್ಟೆವು; ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಬಹಳ ನೋವಿನಿಂದ ಒಂದು ಮಾತನ್ನು ಹೇಳಬೇಕಾಗುತ್ತದೆ. ಗಡಿನಾಡಿನ ಅಧ್ಯಯನದ ಬಗ್ಗೆ ಸಾಹಿತಿ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ರಾಜ್ಯಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿತು. ಸಮಿತಿ ರಚನೆ ಮಾಡಿದ ಮೇಲೆ ಅವರು ಇಡೀ ರಾಜ್ಯದ ಸುತ್ತೆಲ್ಲಾ ಅವರು ಅಧ್ಯಯನ ಮಾಡುತ್ತಾರೆ. ಅಧ್ಯಯನ ಮಾಡಿದ ಮೇಲೆ ಬಹಳ ನೋವಿನ ಹಾಗೂ ದು:ಖದ ಒಂದು ಸಂಗತಿ ಅವರು ವರದಿಯಲ್ಲಿ ಏನು ಹೇಳುತ್ತಾರೆಂದರೆ, ಅಥಣಿ ತಾಲ್ಲೂಕಿನ 23 ಗ್ರಾಮದ ಹಳ್ಳಿಯವರು ನಾವು ಇವತ್ತು ಮಹಾರಾಷ್ಟಕ್ಕೆ ಹೋಗುತ್ತೇವೆಂದು ಹೇಳಿರುವ ಮಾತನ್ನು ಶ್ರೀ ಬರಗೂರು ರಾಮಚಂದ್ರಪ್ಪನವರು ತಮ್ಮ ವರದಿಯಲ್ಲಿ ಬರೆದಿರುವುದನ್ನು ನೋಡಿದರೆ, ಇವತ್ತು ಸುವರ್ಣ ಕರ್ನಾಟಕದ ಆಚರಣೆಯ ಬಗ್ಗೆ ಈ ಸದನದಲ್ಲಿ ನಿಂತು ನಾವು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗುತ್ತದೆ. ನಾವು ಎಲ್ಲಿ ತಪ್ಪಿದ್ದೇವೆ, ಎಲ್ಲಿ ಎಡವಿದ್ದೇವೆ, ಯಾವ ರೀತಿಯಲ್ಲಿ ಇದನ್ನು ಸರಿಪಡಿಸಿಕೊಳ್ಳಬೇಕೆಂಬುದು ನಿಜವಾಗಿಯೂ ಇದು ಸದನದ ಜವಾಬ್ದಾರಿ, ಸರ್ಕಾರದ ಜವಾಬ್ದಾರಿಯಾಗಿದೆ. ನನ್ನ ಹಳ್ಳಿಯ ಪಕ್ಕದಲ್ಲಿ ಒಂದು ಗ್ರಾಮ ಪಂಚಾಯತ್ ಇದೆ, ಅದು ಆಳಂದ ತಾಲ್ಲೂಕಿನ ಹಿರೊಳ್ಳಿ ಗ್ರಾಮಪಂಚಾಯತ್ ಎಂದು ಇದೆ. ಅವರ ದಿನನಿತ್ಯದ ವ್ಯಾಪಾರ, ವಹಿವಾಟು ಸಂಬಂಧಗಳಿಗೆ ದಿನಾಲೂ ಮಹಾರಾಷ್ಟಕ್ಕೆ ಹೋಗುತ್ತಾರೆ. ಇವರು ಅಧಿಕೃತವಾಗಿ ಕಚೇರಿಯ ಕೆಲಸಕ್ಕೆ, ವಿದ್ಯಾಭ್ಯಾಸಕ್ಕೆ ನಮ್ಮ ಕಡೆಗೆ ಬರುತ್ತಾರೆ. ಅದು ನಮ್ಮ ಗಡಿಭಾಗದ ಎಲ್ಲಾ ಸಮಸ್ಯೆಗಳು ಈ ರೀತಿಯಲ್ಲಿ ಇವೆ. ಅವರು ಗ್ರಾಮ ಪಂಚಾಯತ್‌ನಲ್ಲಿ ಒಮ್ಮೆ ಠರಾವನ್ನು ಪಾಸ್ ಮಾಡಿದರು. ನಾವು ಮಹಾರಾಷ್ಟಕ್ಕೆ

ಹೋಗುತ್ತೇನೆಂದು ಮಾಡಿದರು. ಅದು ನನ್ನ ಮನಸ್ಸಿಗೆ ಬಹಳ ನೋವಾಯಿತು. ನಾವು ಏನಪ್ಪಾ ಎಲ್ಲಿಗೆ ಹೊರಟ್ಟಿದ್ದೇವೆಂದು ಅನಿಸಿತು. ಒಂದು ವಿಶಾಲ ಕರ್ನಾಟಕದ ಕಲ್ಪನೆಯನ್ನು ತೊಟ್ಟು ಈ ನಾಡನ್ನು ಕಟ್ಟಬೇಕು, ಈ ನಾಡನ್ನು ಮುಂದಕ್ಕೆ ತರಬೇಕು. ಈ ನಾಡಿನ ಭಾಷೆ, ಸಂಸ್ಕೃತಿ ಉಳಿಯಬೇಕೆನ್ನುವ ಭಾವನೆಯನ್ನು ಇಟ್ಟುಕೊಂಡು ಕರ್ನಾಟಕದಲ್ಲಿ ಬಂದಂತಹ ಈ ಗಡಿನಾಡ ಭಾಗದ ಜನತೆಯ ನೋವು ಇವತ್ತು ನಿಜವಾಗಿಯೂ ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು, ಮತ್ತೆ ಇದರ ಬಗ್ಗೆ ನಾವೆಲ್ಲರೂ ಚರ್ಚೆಯನ್ನು ಮಾಡಬೇಕು. ನಾನು ಅದಕ್ಕೆ ಒಪ್ಪುವುದಿಲ್ಲ, ಯಾರೂ ಕೂಡ ಈ ರಾಜ್ಯವನ್ನು ಒಡೆಯಬಾರದು, ಕಷ್ಟ ಬರಲಿ, ಸುಖ ಬರಲಿ, ನೋವು ಇರಲಿ, ನಾವೆಲ್ಲರೂ ಸಂಯಮದಿಂದ, ಶಾಂತಿಯಿಂದ, ಈ ನಾಡಿನ ಅಭಿವೃದ್ಧಿಗೆ ಶ್ರಮಿಸಬೇಕೆನ್ನುವಂಥವರಲ್ಲಿ ನಾನೂ ಕೂಡ ಒಬ್ಬ. ಇವತ್ತು ಅವರಿಗೆ ಅಭಿವೃದ್ಧಿಯ ವಿಷಯದಲ್ಲಿ ನೋವಾಗಿದೆ. ಅವರಿಗೆ ಭಾಷೆಯ ವಿಷಯದಲ್ಲಿ ದುರಾಭಿಮಾನ ಹುಟ್ಟಿಲ್ಲ. ಅಥವಾ ಇಲ್ಲಿ ನಾಯಕತ್ವದ ಬಗ್ಗೆ ಅವರಿಗೆ ಬೇರೆ ಭಾವನೆ ಇಲ್ಲ, ಅವರಿಗೆ ನಾವು ಅಭಿವೃದ್ದಿಯಿಂದ ವಂಚಿತರಾಗುತ್ತಿದ್ದೇವೆ. ನಮಗೆ ಏನು ಸೌಲಭ್ಯ, ಸಿಗಬೇಕಾಗಿತ್ತೋ ಅದು ಸಿಗುತ್ತಾ ಇಲ್ಲ. ನಮಗೆ ಸರ್ಕಾರದಿಂದ ಏನು ಅನುಕೂಲಗಳು ಆಗಬೇಕಾಗಿತ್ತೋ, ಅದು ಆಗುತ್ತಾ ಇಲ್ಲವೆಂಬ ಭಾವನೆ ಗಡಿನಾಡಿನ ಭಾಗದ ಜನರ ಮನಸ್ಸಿನಲ್ಲಿ ಇವತ್ತಿಗೂ ಕೂಡ ಇದೆ. ಈ ಸುವರ್ಣ ಕರ್ನಾಟಕದ ಅಂಗವಾಗಿ, ಈ ನಾಡಿನ ಸಾಹಿತಿಗಳು, ಕಲಾವಿದರು, ಮತ್ತು ಎಲ್ಲರೂ ಸೇರಿ, ಅಕ್ಟೋಬರ್ 2ನೇ ತಾರೀಖಿನಿಂದ ಬೆಳಗಾವಿ ಜಿಲ್ಲೆಯ ಗಡಿಭಾಗದಿಂದ, ಗಡಿ ಅಧ್ಯಯನದ ಬಗ್ಗೆ, ಗಡಿ ಸಮಸ್ಯೆಗಳ ಬಗ್ಗೆ, ಚರ್ಚೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿ ಚಂದ್ರುರವರ ನಾಯಕತ್ವದಲ್ಲಿ, ಶ್ರೀ ಗೊರೂರು ಚನ್ನಬಸಪ್ಪನವರು, ಚಂದ್ರಶೇಖರ್ ಪಾಟೀಲ್‌ರವರು, ಇಂತಹ ಎಲ್ಲಾ ಮೇಧಾವಿಗಳು ಗಡಿನಾಡಿನ ಜನರ ಭಾವನೆಗಳನ್ನು, ಗಡಿನಾಡಿನ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ, 2ನೇ ತಾರೀಖಿನಿಂದ ಪ್ರವಾಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ನಾವೆಲ್ಲರೂ ಸಹಕಾರವನ್ನು ಕೊಡಬೇಕು, ಮತ್ತೆ ನಾವೆಲ್ಲರೂ ಭಾಗಿಗಳಾಗಬೇಕು. ಈ 50ವರ್ಷಗಳನ್ನು ಕಳೆದರೂ ಕೂಡ, ಏಕೆ ಗಡಿನಾಡಿನ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಮಾನ್ಯ ವೈಜನಾಥಪಾಟೀಲ್‌ರವರು ಮೊನ್ನೆ ಒಂದು ಸಂದರ್ಭದಲ್ಲಿ ಹೇಳಿದರು. ಅದು ಆಂಧ್ರ ಪ್ರದೇಶಕ್ಕೆ ಹೊಂದಿಕೊಂಡಿರುವಂಥ ತಾಲ್ಲೂಕು, ಇವತ್ತು 127 ಶಿಕ್ಷಕರ ಹುದ್ದೆಗಳು ಖಾಲಿ ಚಿಂಚೋಳಿ ಒಂದೇ ತಾಲ್ಲೂಕಿನಲ್ಲಿ ಇವೆ. ಇದೇ ರೀತಿಯಲ್ಲಿ ಎಲ್ಲಾ ಕಡೆಗಳಲ್ಲೂ ಇವೆ. ಇವತ್ತು ಈ ದೇಶ, ಈ ಸಮಾಜ ಸಂವೃದ್ಧಿವಾಗಬೇಕೆಂದರೆ, ಬೆಳೆಯ ಬೇಕೆಂದರೆ, ಶಿಕ್ಷಣ ಬಹಳ ಮಹತ್ವವಾದದ್ದು. ಇದು ಹಿಂದುಳಿದಿರುವಂಥಾದ್ದಕ್ಕೆ ಐತಿಹಾಸಿಕ ಕಾರಣಗಳು ಇವೆ. ನಾವು ಯಾರ ಮೇಲೂ ಆಪಾದನೆಯನ್ನು ಹೊರಿಸಿ ಭಾಷಣವನ್ನು ಮಾಡಿ ಮನೆಗೆ ಹೋಗುವುದಕ್ಕೆ ಆಗುವುದಿಲ್ಲ. ಇದಕ್ಕೆ ಐತಿಹಾಸಿಕ ಕಾರಣಗಳಿವೆ. ನಾವು ಏಕೆ ಹಿಂದುಳಿದಿದ್ದೇವೆ, ಸಾಮಾಜಿಕವಾಗಿ, ಆರ್ಥಿಕವಾಗಿ, ಮತ್ತು ಬೇರೆ ಬೇರೆ ಕಾರಣಗಳಿಂದ ಹಿಂದುಳಿದಿದ್ದೇವೆಂಬುದಕ್ಕೆ ಆಧಾರಗಳು ಇವೆ, ಪುರಾವೆಗಳು

ಇವೆ, ಇದನ್ನೆಲ್ಲಾ ಮೆಟ್ಟಿ ನಿಂತು ನಾವು ಈ ಭಾಗವನ್ನು ಅಭಿವೃದ್ಧಿಪಡಿಸುವಂತಹ ಜವಾಬ್ದಾರಿ, ಯಾವುದೇ ಪಕ್ಷದ ಸರ್ಕಾರವಿರಲಿ, ಯಾರೇ ಮುಖ್ಯಮಂತ್ರಿ ಇರಲಿ, ಅದನ್ನು ನಿಭಾಯಿಸುವಂತಹ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ನಮ್ಮ ಹಿಂದಿನ ಸರ್ಕಾರದವರು ಡಾ:ನಂಜುಂಡಪ್ಪನವರ ವರದಿ ಆಯೋಗವನ್ನು ಮಾಡಿದರು. ಇದರಲ್ಲಿ ಒಂದು ಮುಖ್ಯವಾದ ವಿಷಯವನ್ನು ಹೇಳಿದ್ದಾರೆ. ನಮ್ಮ ಸಂವಿಧಾನದ ಆಶಯ ಏನು ಇತ್ತು. ಭಾರತ ಸಂವಿಧಾನದ ಆಸೆ ಎಲ್ಲರೂ ಸಮಾನವಾಗಿ ಇರಬೇಕು, ಎಲ್ಲರೂ ಸದ್ಭಾವನೆಯಿಂದ ಇರಬೇಕು, ಮತ್ತು ಎಲ್ಲರೂ ಸಂವೃದ್ಧವಾದ ರಾಷ್ಟವನ್ನು ಕಟ್ಟಬೇಕು. ಎನ್ನುವಂತಹ ಆಸೆಯನ್ನು ಇಟ್ಟುಕೊಂಡು ನಾವು ಸಂವಿಧಾನವನ್ನು ಸ್ವೀಕಾರ ಮಾಡಿದಂಥವರು ನಾವು. ಡಾ:ನಂಜುಂಡಪ್ಪನವರ ವರದಿಯಲ್ಲಿ ``Our constitution emphasises securing equity and equality not only among individuals but also amongst the groups of people in different areas or engaged in different vocations'' ಎನ್ನುವ ಮಾತನ್ನು ಸಂವಿಧಾನದ ಆಶಯದ ಬಗ್ಗೆ ಈ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸಂವಿಧಾನದಲ್ಲಿ ಸಮಾನತೆ ವೈಯಕ್ತಿಕವಾಗಿ ಬರುವುದರ ಜೊತೆಗೆ, ಸಮೂಹಗಳ ಮಧ್ಯೆ ಮತ್ತು ಎಲ್ಲಾ ಕ್ಷೇತ್ರಗಳಲ್ಲಿ, ಎಲ್ಲಾ ಉದ್ಯಮಗಳಲ್ಲಿ ಅವರಿಗೆ ಈ ಅವಕಾಶವನ್ನು ಕೊಡಬೇಕು. ಅದು ನಮ್ಮ ಸಂವಿಧಾನದ ಆಶಯವೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ, ಡಾ: ನಂಜುಂಡಪ್ಪನವರ ವರದಿಯಲ್ಲಿ ಅದನ್ನು ಹೇಳುತ್ತಾರೆ. ಇನ್ನೊಂದು ಬಹಳ ಮುಖ್ಯವಾದ ಮಾತನ್ನು ಅದರಲ್ಲಿ ಹೇಳುತ್ತಾರೆ. ಅದು ಏನೆಂದರೆ, ಯಾವುದೇ ಒಂದು ನೋವುಗಳ ಆಗದ ಹಾಗೆ ನೋಡಿಕೊಳ್ಳುವ ಬಗ್ಗೆ, ಇದು ಗಡಿನಾಡ ಭಾಗದ ಅಥವಾ ಯಾವುದೇ ಭಾಗದವರ ನೋವು ಆಗದ ಹಾಗೆ ನೋಡಿಕೊಳ್ಳುವ ಬಗ್ಗೆ, ಒಂದು ಎಚ್ಚರಿಕೆಯ ಗಂಟೆಯನ್ನೂ ಕೂಡ, ಡಾ:ನಂಜುಂಡಪ್ಪನವರ ವರದಿಯಲ್ಲಿ ಎತ್ತಿ ತೋರಿಸುತ್ತಾರೆ. ಅವರು ಏನು ಹೇಳುತ್ತಾರೆಂದರೆ ``Any strategy of development cannot ignore the emotional aspects of people of the regions, since linguistic harmony is not just a matter of equal access to the socio-economic and infrastructure facilities but also opportunity to serve in different spheres''. ಮತ್ತೆ ಹೇಳುತ್ತಾರೆ. ದಯಮಾಡಿ ಎಲ್ಲಾ ಸದಸ್ಯರು ಇದನ್ನು ಕೇಳಬೇಕು. ಮಾನ್ಯ ಶ್ರೀರಾಮರೆಡ್ಡಿಯವರೆ, ನಾವು ನೀವೆಲ್ಲಾ ಗಡಿ ಪ್ರದೇಶದಲ್ಲಿ ಇರುವವರು. ``It is feared that the continued regional imbalance coupled with emotional disturbances bound to affect oneness of the State'' ಈ ರೀತಿ regional imbalance ಮಾಡಿಕೊಂಡು ಹೋದರೆ, ರಾಜ್ಯದ ಜನತೆಯ ಮನಸ್ಸಿನಲ್ಲಿ ಒಂದಾಗಿ ಉಳಿಯುವಂತಹ ಭಾವನೆ ಉಳಿಯುವುದಿಲ್ಲವೆಂಬ ಎಚ್ಚರಿಕೆಯ ಘಂಟೆಯನ್ನು ಡಾ: ನಂಜುಂಡಪ್ಪನವರ ವರದಿಯಲ್ಲಿ ಸ್ಪಷ್ಟವಾಗಿ ನಮಗೆಲ್ಲಾ ಈ ಮುಖಾಂತರ ಕೊಟ್ಟಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಬಹಳ ಹಳೆಯ theory. 1947ರಲ್ಲಿ ಮಹಾತ್ಮಾ ಗಾಂಧಿಯವರು ಇದೇ ಬೆಳಗಾಂನಲ್ಲಿ ಇದೇ ವಿಚಾರವನ್ನು ಹೇಳಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ : ನಾನು ಆ ವಿಚಾರಕ್ಕೂ ಬರುತ್ತೇನೆ. ಇದು ನಮ್ಮ ಎದುರಿಗೆ ಎಚ್ಚರಿಕೆಯ ಘಂಟೆಯನ್ನು ಬಾರಿಸಿ ಈ ವರದಿಯನ್ನು ನಮ್ಮ ಮುಂದೆ ಇಟ್ಟು ಈ ನಾಡಿನ ಅಭಿವೃದ್ಧಿಯ ಬಗ್ಗೆ ಒಂದು ವಿಸ್ತೃತ ವರದಿಯನ್ನು ಕೊಟಿದ್ದಾರೆ. ಇವತ್ತು ತಾತ್ವಿಕವಾಗಿ ಮತ್ತು ವೈಜ್ಞಾನಿಕವಾಗಿ ಮತ್ತು ಶಾಸ್ತ್ರೀಯವಾಗಿ ಡಾ. ನಂಜುಂಡಪ್ಪನವರ ವರದಿ ಬಂದ ಮೇಲೆ ಇವತ್ತಿಗೂ ಕೂಡ, ಅದು ಹಿಂದಿನ ಸರ್ಕಾರ ಇರಬಹುದು, ಇಂದಿನ ಸರ್ಕಾರ ಇರಬಹುದು, ಇದನ್ನು ತಾತ್ವಿಕವಾಗಿ ಈ ವರದಿಯನ್ನು ಒಪ್ಪಿದ್ದೇವೆ ಎನ್ನುವಂಥ ಸರ್ಕಾರಿ ಆದೇಶ ಇವತ್ತಿಗೂ ಸಹ ಎಲ್ಲಿಯೂ ಕೂಡ ಹೊರಗಡೆ ಬಂದಿಲ್ಲ. ಯಾವ ಯಾವ ಕ್ಷೇತ್ರಗಳಲ್ಲಿ ಡಾ. ನಂಜುಂಡಪ್ಪನವರ ವರದಿಯನ್ನು ಒಪ್ಪಿದ್ದೇವೆ ಎನ್ನುವ ಆದೇಶ ಕೂಡ ಇವತ್ತಿಗೂ ಕೂಡ ಸರ್ಕಾರದಿಂದ ಬಂದಿಲ್ಲ. ಡಾ. ನಂಜುಂಡಪ್ಪನವರ ವರದಿ ಎಲ್ಲೆಲ್ಲಿ ಅನುಕೂಲ ಆಗುತ್ತದೆ ಎಲ್ಲೆಲ್ಲಿ ಸಾಧ್ಯವಾಗುತ್ತದೆ ಅಲ್ಲಿನ ಮಟ್ಟಕ್ಕೆ ಮಾತ್ರ ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ತಾತ್ವಿಕವಾಗಿ ಈ ಡಾ. ನಂಜುಂಡಪ್ಪನವರ ವರದಿ ನಮಗೆ ಅಭಿವೃದ್ಧಿಗೆ ಪೂರಕವಾದಂಥ ಒಂದು ಮುನ್ಸೂಚನೆಯಾಗಿದೆ. ಅದನ್ನು ನಾವು ಒಪ್ಪುತ್ತೇವೆ. ಆ ನಿಟ್ಟಿನಲ್ಲಿ ಈ ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತೇವೆಂಬ ಮಾತಿನಲ್ಲಿ ಸರ್ಕಾರ ನಿಲುವನ್ನು ತಾಳಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಡಾ. ನಂಜುಂಡಪ್ಪನವರ ವರದಿಯನ್ನು ತಾತ್ವಿಕವಾಗಿ ಒಪ್ಪಿದ್ದೇವೆಂದು ಸರ್ಕಾರ ಹೇಳಿದೆಯೇ, ಹೊರತು ಇದುವರೆಗೂ ಸರ್ಕಾರದ ಆದೇಶ ಹೊರಗಡೆ ಬಂದಿಲ್ಲ. ಆದರೆ it is left to the mercy of the government , whether to implement or not to implement. Till this date, no government has given an administrative order saying that it is mandatory for the government to implement it.

SRI. B.R. PATIL : That is my point. ನಾವು ಡಾ. ನಂಜುಂಡಪ್ಪನವರ ವರದಿಯನ್ನು ಪಕ್ಷಾತೀತವಾಗಿ, ಅಧ್ಯಯನ ಮಾಡಿದ್ದನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ, ಮತ್ತೆ ಇದನ್ನು ಶಾಸ್ತ್ರೀಯವಾಗಿ ಇದೆ, ವೈಜ್ಞಾನಿಕವಾಗಿ ಇದೆಯೆಂದು ಒಪ್ಪುತ್ತೇವೆ. ಆದರೆ, ಅಧಿಕೃತವಾದ ಆದೇಶ ಸರ್ಕಾರದಿಂದ ಎಲ್ಲಿಯವರೆಗೂ ಹೊರಗೆ ಬೀಳುವುದಿಲ್ಲವೋ, ಅಲ್ಲಿಯವರೆಗೂ ಯಾವುದೇ ಇಲಾಖೆಯ ಮೇಲೆ. ಅಥವಾ ಯಾವುದೇ ಮಂತ್ರಾಲಯಗಳ ಮೇಲೆ ಇದು ಬೈಂಡಿಂಗ್ ಆಗಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. Mandatory ಮಾಡಿಲ್ಲ. ಇದು ಸರ್ಕಾರಿ ಆದೇಶವಾಗಬೇಕು. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಈ ಗಡಿಭಾಗದಲ್ಲಿ ಬಂದು ಅಧಿವೇಶನವನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ. ಇದಕ್ಕೆ ಎಲ್ಲರೂ ಕೂಡ ಸಹಕಾರವನ್ನು

ಮಾಡಿದ್ದಾರೆ. ಇದರ ಬಗ್ಗೆ ಜನರ ನೀರಿಕ್ಷೆ ಕೂಡ ಇದೆ. ಏನಾದರೂ ಒಂದು ಐತಿಹಾಸಿಕವಾದ ನಿರ್ಣಯ ಈ ಸದನದಲ್ಲಿ ಆಗುತ್ತದೆ, ಉತ್ತರ ಕರ್ನಾಟಕದ ಜನರ ಆಸೆಗಳು ಈಡೇರುತ್ತವೆ, ನಮ್ಮ ಅಭಿವೃದ್ಧಿಯ ಬಗ್ಗೆ ಸರ್ಕಾರ ಸ್ಪಂದಿಸುತ್ತದೆ; ನಮಗೇನಾದರೊಂದು ಹೊಸ ಭಾವನೆ ಬರುತ್ತದೆ ಎನ್ನುವ ಆಸೆಯನ್ನಿಟ್ಟುಕೊಂಡು ಇಲ್ಲಿಯ ಜನ ನೋಡುತ್ತಿರತಕ್ಕಂಥ ಈ ಸಂದರ್ಭದಲ್ಲಿ ತಾವು ಒಂದು ಕೆಲಸ ಮಾಡಿ, ನಾವು ನಂಜುಂಡಪ್ಪ ವರದಿಯನ್ನು ಸಂಪೂರ್ಣವಾಗಿ ಒಪ್ಪಿದ್ದೇವೆ, ನಾವು ಇದನ್ನು ಅಕ್ಷರಶ: ಕಾರ್ಯಗತ ಮಾಡುತ್ತೇವೆ ಎನ್ನುವಂಥ ಒಂದು ಸರ್ಕಾರೀ ಆದೇಶವನ್ನು ತಾವು ಪ್ರಕಟಿಸಿದರೆ, ಆಗ ನಿಮ್ಮ ಎಲ್ಲಾ ಇಲಾಖೆಗಳವರು ಇದನ್ನು ಪಾಲಿಸಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಅವರವರಿಗೆ ಇಷ್ಟ ಬಂದ ಹಾಗೆ ಈ ವರದಿಯನ್ನು ಉಪಯೋಗ ಮಾಡಿಕೊಂಡು ಮುಂದೆ ಹೋಗುತ್ತಿರುತ್ತಾರೆ. ಆಗ ಮತ್ತೆ ಇಲ್ಲಿ, ನಮಗೆ ಅನ್ಯಾಯವಾಗಿದೆ, ನಮಗೆ ತೊಂದರೆಯಾಗಿದೆ ಎನ್ನುವಂಥ ಮಾತುಗಳು ನಿರಂತರವಾಗಿ ಕೇಳಿ ಬರುತ್ತಿರುತ್ತವೆ. ದಯಮಾಡಿ ತಾವು ಆ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇವತ್ತು ಖರ್ಗೆ ಸಾಹೇಬರು ಮಾತನಾಡುತ್ತಾ, ನಂಜುಂಡಪ್ಪ ವರದಿಯನ್ನು ಅಧ್ಯಯನ ಮಾಡುವಾಗ, ಬಹುತೇಕವಾಗಿ ಎಲ್ಲೆಲ್ಲಿ ಬರ ಇದೆಯೋ ಅಲ್ಲಿ ಬಡತನವಿದೆ ಎನ್ನುವುದನ್ನು ಗುರುತಿಸಿದ್ದಾರೆ. 88 ತಾಲ್ಲೂಕುಗಳಲ್ಲಿ ನಿರಂತರವಾಗಿ ಬರವಿದ್ದು, ಅವುಗಳಲ್ಲಿ 78 ತಾಲ್ಲೂಕುಗಳಲ್ಲಿ ಅತಿ ಹೆಚ್ಚಿನ ಬಡತನವಿದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಒತ್ತಿ ಹೇಳಿದ್ದಾರೆ. ಅದರಲ್ಲಿ 48 ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿವೆ, 30 ತಾಲ್ಲೂಕುಗಳು ಮಾತ್ರ ಹಳೆಯ ಮೈಸೂರಿನಲ್ಲಿವೆ. ಇದು ನಮ್ಮ ಅಭಿವೃದ್ಧಿಯ ಸ್ಪಷ್ಟವಾದಂಥ ಚಿತ್ರಣ. ಅಂಥ ಒಂದು ಪ್ರಯತ್ನ ನಮ್ಮಲ್ಲಿ ನಡೆಯಬೇಕಾಗಿದ್ದರೆ, ಇವತ್ತು ಸರ್ಕಾರದವರು ನಂಜುಂಡಪ್ಪ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಮುಂದೆ ಬರಬೇಕು.

ಇನ್ನು, ವಿಕೇಂದ್ರೀಕರಣ ವ್ಯವಸ್ಥೆಯನ್ನು ನಾವು ಸಂವಿಧಾನಬದ್ಧವಾಗಿ ಮತ್ತು ತಾತ್ವಿಕವಾಗಿ ಒಪ್ಪಿದ್ದೇವೆ. ಯಾವುದೇ ಅಭಿವೃದ್ಧಿ ಕಟ್ಟಕಡೆಯ ಮನುಷ್ಯನಿಗೆ ಮುಟ್ಟಬೇಕಾಗಿದ್ದರೆ ವಿಕೇಂದ್ರೀಕರಣ ವ್ಯವಸ್ಥೆಯನ್ನು ನಾವು ಒಪ್ಪಲೇಬೇಕು. ಅದರ ಮುಖಾಂತರ ಗ್ರಾಮೀಣ ಭಾಗದ ಅಭಿವೃದ್ಧಿ ಮಾಡುವುದನ್ನು ನಾವು ನಂಬಬೇಕು. ಎಲ್ಲಾ ಅಭಿವೃದ್ಧಿಯು ವಿಧಾನಸಭೆಯಿಂದ ಆಗುತ್ತದೆ, ಎಲ್ಲ ಅಭಿವೃದ್ಧಿಗಳು ಲೋಕಸಭೆಯಿಂದ ನಡೆಯಲಿ ಎನ್ನುವಂಥ ಮಾತನ್ನು ಹೇಳುತ್ತಾ ಹೋದರೆ, ಅಭಿವೃದ್ಧಿಯಾಗುವುದಿಲ್ಲ. ಇವತ್ತು ಜಿಲ್ಲಾ ಪಂಚಾಯಿತಿಗಳ ಸ್ಥಿತಿಗತಿ ಏನಾಗಿದೆ ಎನ್ನುವುದನ್ನು ನೋಡಬೇಕು. ನನಗೆ ಸ್ವಲ್ಪ ಸಮಯ ಕೊಟ್ಟರೆ ನಾನು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಈಗಾಗಲೇ ತಾವು ಮಾತನಾಡಲು ಪ್ರಾರಂಭಿಸಿ 15 ನಿಮಿಷವಾಯಿತು. ಹಿರಿಯ ಸದಸ್ಯರು ಎಂದು ನಾನು ಇಷ್ಟುಹೊತ್ತು ಅವಕಾಶವನ್ನು ಕೊಟ್ಟಿದ್ದೇನೆ. ದಯಮಾಡಿ ಇನ್ನು 2 ನಿಮಿಷಗಳಲ್ಲಿ ಮುಗಿಸಿ.

ಶ್ರೀ. ಬಿ.ಆರ್. ಪಾಟೀಲ್ : 2 ನಿಮಿಷದಲ್ಲಿ ಆಗುವುದಿಲ್ಲ. ನಾನು ಕೆಲವು ಮಹತ್ವವಾದ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಉತ್ತರ ಕರ್ನಾಟಕದಲ್ಲಿ ಅಧಿವೇಶನ ಸೇರಿದೆ, ಈ ಭಾಗದ ಅಭಿವೃದ್ಧಿ ಬಗ್ಗೆ ಜನ ನಿರೀಕ್ಷೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಬಹಳ ಜನ ಮಾತನಾಡುವವರಿದ್ದಾರೆ. ತಾವು ಬೇರೆ ಸಮಯದಲ್ಲಿ ಮಾತನಾಡಬಹುದು, ದಯಮಾಡಿ ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ : ಅಧ್ಯಕ್ಷರೇ, ತಾವು ದೊಡ್ಡ ಮನಸ್ಸು ಮಾಡಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಬಹಳ ಜನ ಮಾತನಾಡುವವರಿದ್ದಾರೆ, ಅವರೆಲ್ಲರಿಗೂ ಅಷ್ಟೋ ಇಷ್ಟೋ ಅವಕಾಶವನ್ನು ಕೊಡಬೇಕಲ್ಲವೇ? ಏನು ಮಾಡುತ್ತೀರಿ, ಹೇಳಿ.

ಶ್ರೀ ಬಿ.ಆರ್. ಪಾಟೀಲ್ : ಸಮಸ್ಯೆಗಳಿವೆ ಅಧ್ಯಕ್ಷರೇ, ಆ ಸಮಸ್ಯೆಗಳನ್ನು ಈ ಹೊತ್ತಿನಲ್ಲಿ ಹೇಳಿಕೊಳ್ಳದೇ ಯಾವಾಗ ಹೇಳುವುದು? ಸುದೈವದಿಂದ ಮುಖ್ಯಮಂತ್ರಿಗಳು ಈಗ ಇಲ್ಲಿ ಕುಳಿತುಕೊಂಡಿದ್ದಾರೆ.

ಅಧ್ಯಕ್ಷರು : ಸಮಸ್ಯೆಗಳಿವೆ, ಸರಿ. ಆದರೆ ನಮ್ಮ ಸಮಸ್ಯೆಯೇನೆಂದರೆ ಎಲ್ಲರೂ ಮಾತನಾಡುವವರಿದ್ದು, ಅವರಿಗೂ ಅವಕಾಶವನ್ನು ಕೊಡಬೇಕಾಗಿದೆ.

ಶ್ರೀ ಬಿ.ಆರ್. ಪಾಟೀಲ್ : ಮುಖ್ಯಮಂತ್ರಿಗಳು ಹೊಸಬರು. ಅವರು ಈ ರಾಜ್ಯದ ಬಗ್ಗೆ, ಇಲ್ಲಿನ ಜನತೆಯ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ನನಗೆ ತಿಳಿದುದ್ದನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಒಬ್ಬ ಶಾಸಕನಾಗಿ ಅದು ನನ್ನ ಕರ್ತವ್ಯ. ತಾವು ಅನೇಕ ಸಲ ಈ ಸದನದಲ್ಲಿ ನಮಗೆ ಎಚ್ಚರಿಕೆಯನ್ನು ಕೊಟ್ಟಿದ್ದೀರಿ, ಈ ಸದನದಲ್ಲಿ ಶಾಸಕರಿಗೆ ಶಿಸ್ತು ಇಲ್ಲ, ಕಾಳಜಿ ಇಲ್ಲ, ಸಂಯಮ ಇಲ್ಲ ಎಂದೆಲ್ಲಾ ಹೇಳಿದ್ದೀರಿ. ಇವತ್ತು ರಾಜ್ಯದಲ್ಲಿ ರಾಜಕಾರಣಿಗಳ ಈ ವರ್ತನೆಯಿಂದ ರಾಜಕಾರಣಿಗಳಿಗೆ ಬಹಳ ಕೆಟ್ಟ ಹೆಸರು ಬರುತ್ತಿದೆ. ಈ ಸದನದಲ್ಲಿ ನಾವು ಗಂಭೀರವಾಗಿ ಕೂರಬೇಕು, ಚರ್ಚೆ ಮಾಡಬೇಕು, ಬದ್ಧತೆ ಇರಬೇಕು, ಕಾಳಜಿ ಇರಬೇಕು, ಇದನ್ನೆಲ್ಲಾ ಇಟ್ಟುಕೊಂಡು ನಾವು ಚರ್ಚೆ ಮಾಡಿ ಏನಾದರೊಂದು ನಿರ್ಧಾರಕ್ಕೆ ಬಂದರೆ, ಆಗ ನಮಗೆ, ಈ ಸರ್ಕಾರಕ್ಕೆ ಮತ್ತು ರಾಜಕೀಯ ರಂಗಕ್ಕೆ ಗೌರವ ಬರುತ್ತದೆ. ಇಲ್ಲದಿದ್ದರೆ, ಸುಮ್ಮನೆ ಕಾಟಾಚಾರಕ್ಕೆ ಇಲ್ಲಿ ಸೇರಿದರು, ಸಭೆ ಮಾಡಿದರು, ಚರ್ಚೆ ಮಾಡಿದರು, ಹೋದರು ಎನ್ನುವಂಥ ಕೆಟ್ಟ ಭಾವನೆ ಬರಬಾರದು. ಹಾಗಾಗಿ, ಏನೇ ಆಗಲಿ, ನಾವು ಕಾಳಜಿಯನ್ನು ವ್ಯಕ್ತಪಡಿಸುವಂಥ ಒಂದು ಅವಕಾಶವನ್ನು ನಮಗೆ ಕೊಡಲಿಕ್ಕೆ ತಾವು ಪ್ರಯತ್ನ ಮಾಡಬೇಕು. ಬಹಳ ಮುಖ್ಯವಾಗಿ ರಾಜಕೀಯ ಇಚ್ಛಾಶಕ್ತಿ ಬೇಕು. ಬೆಳಗಾವಿಯಲ್ಲಿ ಅಧಿವೇಶನ ಮಾಡಿದರೆ ಬೆಳಗಾವಿ ಅಭಿವೃದ್ಧಿಯಾಗುತ್ತದೆ ಅಥವಾ ಸಿದ್ದು ಸವದಿಯವರು ಹೇಳಿದ ಹಾಗೆ, ಬಾಗಲಕೋಟೆಯಲ್ಲಿ ಅಧಿವೇಶನ ಮಾಡಿದರೆ ಆ ಭಾಗದ ಅಭಿವೃದ್ಧಿಯಾಗುತ್ತದೆ, ಗುಲ್ಬರ್ಗದಲ್ಲಿ ಅಧಿವೇಶನ ಮಾಡಿದರೆ ಅದು ಅಭಿವೃದ್ಧಿಯಾಗುತ್ತದೆ ಎನ್ನುವುದು ಸರಿಯಲ್ಲ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದ್ದರೆ ಎಲ್ಲಾ ಅಭಿವೃದ್ಧಿಯಾಗುತ್ತದೆ. ದೆಹಲಿ ಬಹಳ ದೂರ ಇದೆ, ಹಾಗಾಗಿ ಲೋಕಸಭಾ ಅಧಿವೇಶನ ಹೈದರಾಬಾದಿನಲ್ಲಿ ನಡೆಯಬೇಕು, ಬೆಂಗಳೂರಿನಲ್ಲಿ ನಡೆಯಬೇಕು, ಭೂಪಾಲ್ ನಲ್ಲಿ ನಡೆಯಬೇಕು ಎಂದು ವಾದ ಮಾಡುತ್ತಾ ಕುಳಿತರೆ, federal structure ವ್ಯವಸ್ಥೆಯಲ್ಲಿ ನಾವು ಎಲ್ಲ ಕಡೆಗಳಲ್ಲಿ ಅಧಿವೇಶನ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ,

ಅದು ಯಾವುದೇ ಮೂಲೆಯಲ್ಲಿರಲಿ, ಒಂದು ರಾಜ್ಯದ ಬಗ್ಗೆ ಕಲ್ಪನೆ ಇರಬೇಕು, ರಾಜ್ಯದ ಬಗ್ಗೆ ಇಚ್ಛಾಶಕ್ತಿ ಇರಬೇಕು, ಈ ರಾಜ್ಯದ ಅಭಿವೃದ್ಧಿ ಬಗ್ಗೆ ದೂರದ ದೃಷ್ಟಿ ಇರಬೇಕು, ರಾಜ್ಯದ ಬಗ್ಗೆ ಇಚ್ಛಾಶಕ್ತಿ ಇರಬೇಕು, ಈ ರಾಜ್ಯದ ಅಭಿವೃದ್ಧಿ ಬಗ್ಗೆ ದೂರದೃಷ್ಟಿ ಇರಬೇಕು, ಈ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇರಬೇಕು, ಇವೆಲ್ಲಕ್ಕಿಂತ ಹೆಚ್ಚಾಗಿ ನಾವು ಏನು ಮಾಡಬೇಕು ಎನ್ನುವುದರ ಬಗ್ಗೆ ನಮಗೆ ಬದ್ಧತೆ ಇರಬೇಕು. ಜನರನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆ ಎತ್ತಿ ತಂದು ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಅವರನ್ನು ಜೊತೆಗೆ ಕರೆದುಕೊಂಡು ಹೋಗಬೇಕು ಎನ್ನುವಂಥ ಒಂದು ಸಮಗ್ರ ದೃಷ್ಟಿಕೋನ ಎಲ್ಲಿಯವರೆಗೆ ನಮ್ಮ ರಾಜ್ಯ ಆಳುವವರ ಮನಸ್ಸಿನಲ್ಲಿ ಬರುವುದಿಲ್ಲ, ಅಲ್ಲಿಯವರೆಗೆ ಇಂಥ ಕೊರತೆಗಳು ಬರಲಿಕ್ಕೆ ಸಾಧ್ಯತೆಯಾಗುತ್ತದೆ. ಹೈದರಾಬಾದ್ ಕರ್ನಾಟಕ ಪ್ರತ್ಯೇಕ ರಾಜ್ಯವಾಗಬೇಕು ಎನ್ನುವ ಕೂಗು ನಮ್ಮಲ್ಲಿ ಎದ್ದಿದೆ. ಇದು ದುರಾದೃಷ್ಟ. ಇದನ್ನು ನಾವು ಯಾವತ್ತೂ ಕೂಡ ಒಪ್ಪುವುದಿಲ್ಲ. ಈ ರೀತಿಯಾಗಲು ಕಾರಣವೇನು? ಉದಾಹರಣೆಗೆ ಒಬ್ಬ ರೋಗಿ ಡಾಕ್ಟರ್ ಬಳಿ ಬಂದು, ನನಗೆ ಮೈಕೈ ನೋಯುತ್ತದೆ. ಹೊಟ್ಟೆ ಸರಿಯಿಲ್ಲ, ತಲೆ ನೋಯುತ್ತದೆ ಎಂದಾಗ ಡಾಕ್ಟರ್ ಪರೀಕ್ಷೆ ಮಾಡಬೇಕು. ಏನು ತೊಂದರೆಯಿದೆ, vitamin deficiency ಇದೆಯೋ, cancer ಆಗಿದೆಯೋ, ತಲೆ ಕೆಟ್ಟಿದೆಯೋ, ಏನಾಗಿದೆ ಎನ್ನುವುದರ ಬಗ್ಗೆ ಮೊದಲು diagnose ಮಾಡಬೇಕು. Diagnose ಮಾಡದೇ reject ಮಾಡುತ್ತಾ ಹೋದರೆ irritation ಇನ್ನೂ ಜಾಸ್ತಿಯಾಗುತ್ತದೆ. ಹಾಗಾಗಿ ಇವತ್ತು ......

ಡಾ. ಕೆ. ಅನ್ನದಾನಿ : ಡಾಕ್ಟರ್‌ಗಳಾದವರ್‍ಯಾರೂ ಅವರೇ check ಮಾಡಿ ನಿಮಗೆ ಇಂಥ ಕಾಯಿಲೆ ಇದೆ ಎಂದು ಹೇಳುವುದಿಲ್ಲ. ನಾವೇ ಹೋಗಿ ತಲೆನೋವು, ಹೊಟ್ಟೆನೋವು ಎಂದಾಗ ಮಾತ್ರ ಅವರು check ಮಾಡಿ ಹೇಳುತ್ತಾರೆ, ಅಷ್ಟೇ.

ಶ್ರೀ ಎಂ.ಪಿ. ವೆಂಕಟೇಶ್ : ಅವರಿಗೆ ಏನು ದು:ಖ ಎಂದರೆ, ನಿನ್ನೆ ವಾಟಾಳ್ ನಾಗರಾಜ್ ಮುಂತಾದವರೆಲ್ಲಾ ಒಂದೊಂದು ಗಂಟೆ ಮಾತನಾಡಿದರು. ನಿನ್ನೆ ನೀವು ಕಾಂಗ್ರೆಸ್ ನವರ ಜೊತೆ walk out ಮಾಡದಿದ್ದರೆ ನಿಮಗೂ ಒಂದು ಗಂಟೆ ಸಿಗುತ್ತಿತ್ತು. ನೀವು ಅಲ್ಲಿ ಹೋಗಿ ಸಿಕ್ಕಿಹಾಕಿಕೊಂಡಿರಿ. 5 ತಿಂಗಳ ಕೆಳಗೆ ನೀವು ಇಂಥ ಬುದ್ಧಿವಾದದ ಮಾತನ್ನು ಹೇಳಿದ್ದರೆ, ಇವೆಲ್ಲಾ ಸಾಧ್ಯವಾಗುತ್ತಿತ್ತು. ಸಿದ್ಧರಾಮಯ್ಯನವರಿದ್ದಾಗ ನೀವು ಈ ಭಾಷಣವನ್ನು ಮಾಡಿದ್ದರೆ ಇವೆಲ್ಲಾ ಸುವರ್ಣ ಕರ್ನಾಟಕವಾಗಿ ಹೋಗುತ್ತಿತ್ತು. ಆಗ ಮಾತನಾಡುವುದನ್ನು ಬಿಟ್ಟು ಈಗ ಮಾತನಾಡುತ್ತಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್ : ಆಯಿತು, ನಾವು ಮಾತನಾಡುತ್ತೇವೆ, ನೀವೂ ಮಾತನಾಡಿ ನಮ್ಮ ಭಾಗದಲ್ಲಿ ಏಕೆ ಈ ರೀತಿ ಭಾವನೆ ಬಂತು ಎನ್ನುವುದನ್ನು ನಾವೆಲ್ಲರೂ ಕೂಡ ಸೂಕ್ಷ್ಮವಾಗಿ ಗಮನಿಸಬೇಕು. ಅದು ಹಳೆಯ ಮೈಸೂರು ಭಾಗದಲ್ಲಾಗಿರಬಹುದು ಅಥವಾ ಹೊಸ ಮೈಸೂರು ಭಾಗದಲ್ಲಾಗಿರಬಹುದು. ಅವರು ಏಕೆ ಪ್ರತ್ಯೇಕ ರಾಜ್ಯವನ್ನು ಕೇಳುತ್ತಾರೆ? ಅವರಿಗೆ ಏನು ಅನ್ಯಾಯವಾಗಿದೆ? ಏನು ತೊಂದರೆಯಾಗಿದೆ? ಅದನ್ನು ಯಾವರೀತಿ ಸರಿಪಡಿಸಿಕೊಳ್ಳಬೇಕು

ಎನ್ನುವುದನ್ನು ನಾವು ಅಧ್ಯಯನ ಮಾಡಿ ಇವುಗಳನ್ನು ಬಗೆಹರಿಸಲು ಪ್ರಯತ್ನ ಮಾಡದೇ ಹೋದರೆ, ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ಗುಂಡೂರಾವ್ ರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ, ಧರಂಸಿಂಗ್ ರವರ ನಾಯಕತ್ವದಲ್ಲಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದರು. ಅವರು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದ್ದರು. ಆಗ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಎನ್ನುವುದು ರಚನೆಯಾಯಿತು. ಅದಕ್ಕೆ ವರ್ಷಕ್ಕೆ 100 ಕೋಟಿ ರೂ.ಗಳನ್ನು ಕೊಡಬೇಕು ಎಂದು ಇತ್ತು. 350 ಕೋಟಿ ರೂ.ಗಳನ್ನು ಕೊಟ್ಟು ಇಡೀ ಹೈದರಾಬಾದ್ ಕರ್ನಾಟಕವನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕಿತ್ತು. ಆದರೆ, ಆ ನಂತರ ಬಂದ ಸರ್ಕಾರಗಳು, ಅದು ಕಾಂಗ್ರೆಸ್ ಸರ್ಕಾರ ಇರಬಹುದು, ಜನತಾ ಸರ್ಕಾರ ಇರಬಹುದು, ಅವರು ಅಲ್ಲಿಗೆ ಎಷ್ಟು ಹಣವನ್ನು ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಕೊಡಲಿಲ್ಲ. ಆದ್ಯತೆ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ ಹಣವನ್ನು ಖರ್ಚು ಮಾಡಬೇಕು, ಎಲ್ಲಿ ಹಿಂದುಳಿದಿದ್ದೇವೆ, ಯಾವ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ನಾವು ಗಮನ ಹರಿಸಲಿಲ್ಲ. ನಮ್ಮ ರಾಜಕೀಯ ಅನೂಕೂಲಕ್ಕನುಗುಣವಾಗಿ ನಾವು ಬೇಕಾಬಿಟ್ಟಿಯಾಗಿ ಹಣ ಖರ್ಚು ಮಾಡಿದ್ದೇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ 700 ಕೋಟಿ ರೂ.ಗಳ ಹಣ ಖರ್ಚಾಗಿದೆ ಇಷ್ಟೊಂದು ದುಡ್ಡು ಖರ್ಚು ಮಾಡಿದ್ದೀರಿ, ಆ ದುಡ್ಡು ಎಲ್ಲಿ ಹೋಯಿತೆಂದು ಹಳೆಯ ಮೈಸೂರಿನವರು ನಮಗೆ ಬೆಟ್ಟು ಮಾಡಿ ತೋರಿಸುತ್ತಾರೆ. ಇದನ್ನೂ ಕೂಡ ನಾವು ಒಪ್ಪಬೇಕಾಗುತ್ತದೆ. ಆದ್ಯತೆ ಮೇಲೆ ದುಡ್ಡು ಖರ್ಚಾಗಲಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ ಆ ಭಾಗದಲ್ಲಿನ employment ಸಮಸ್ಯೆ. ಯಾವ ದೇಶ, ಯಾವ ಸಮಾಜ ಶೈಕ್ಷಣಿಕವಾಗಿ ಮುಂದೆ ಬರುತ್ತದೆ, ಅದು ಸಮೃದ್ಧಿ ಮತ್ತು ಬೆಳವಣಿಗೆಗೆ ನಾಂದಿ ಯಾಗುತ್ತದೆ. ಇವತ್ತು ನಮ್ಮಲ್ಲಿ ಶಿಕ್ಷಣವಿಲ್ಲ. ತಮಗೆ ಒಂದು ಉದಾಹರಣೆ ಹೇಳುವುದಾದರೆ, ಕರ್ನಾಟಕ ಸರ್ಕಾರದವರು ಶಿಕ್ಷಣ ಕ್ಷೇತ್ರದ ಬಗ್ಗೆ ಗಮನ ಹರಿಸುವುದಕ್ಕೆ Education Commissionerರವರ ಒಂದು office ಮಾಡಿ ಗುಲ್ಬರ್ಗಾದಲ್ಲಿ ಒಂದು ಕಛೇರಿಯನ್ನು ತೆರೆದರು. ಅಲ್ಲಿ ಒಬ್ಬರೇ ಒಬ್ಬರು I.A.S. ಅಧಿಕಾರಿ, ಶ್ರೀಮತಿ ಮಂಜುಳ ಎನ್ನುವವರು ಮಾತ್ರ ಅಲ್ಲಿ ಕೆಲವು ದಿವಸ ಇದ್ದರು. ಆಮೇಲೆ ಯಾವ ಅಧಿಕಾರಿಯೂ ಕೂಡ ಅಲ್ಲಿಗೆ ಬಂದು ನೌಕರಿ ಮಾಡಲು ತಯಾರಿಲ್ಲ. This is a Sovereign Government. ಒಬ್ಬ I.A.S. ಅಧಿಕಾರಿಯನ್ನು ಅಲ್ಲಿಗೆ posting ಮಾಡಿದರೆ, ಅವರು ಅಲ್ಲಿಗೆ ಬಂದು ಹಾಜರಾಗಿ ಅಲ್ಲಿ ಕೆಲಸ ಮಾಡಲು ತಯಾರಿಲ್ಲ. ಇದೇನು ಪ್ರಜಾತಂತ್ರವೋ, ಅಧಿಕಾರಶಾಹಿಯೋ, ಒಂದೂ ಗೊತ್ತಾಗುವುದಿಲ್ಲ. ಯಾವ ವ್ಯವಸ್ಥೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ? ಒಬ್ಬ ಅಧಿಕಾರಿಯನ್ನು ಅಲ್ಲಿಗೆ posting ಮಾಡಿದರೆ ಅವರು ಅಲ್ಲಿಗೆ ಬಂದು ಕೆಲಸ ಮಾಡುವುದಿಲ್ಲ, ಶಿಕ್ಷಣದ ಬಗ್ಗೆ ಕಾಳಜಿ ವಹಿಸುವ ಜವಾಬ್ದಾರಿ ವಹಿಸುವುದಿಲ್ಲ ಎಂದರೆ ಇವತ್ತು ನಾವು ಯಾವ ಮಟ್ಟಕ್ಕೆ ಮುಟ್ಟಿದ್ದೇವೆ ಎನ್ನುವುದನ್ನು ನಾವು ಇಲ್ಲಿ ಚಿಂತನೆ ಮಾಡಬೇಕು. ಇವತ್ತು ಕೂಡ ಉರ್ದುವಿನಲ್ಲಿ ನಮ್ಮ record ಇದೆ. ಮೋಡಿನಲ್ಲಿದೆ, ಮರಾಠಿಯಲ್ಲಿದೆ. ನಮ್ಮ

generation ನಿಂದ ನಾವು ಕನ್ನಡ ಕಲಿಯಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಶ್ರೀಮಾನ್ ಅಣ್ಣಾರಾವ್ ಗಣಾಮುಖಿ ಎನ್ನುವಂಥ ಒಬ್ಬ ಶಿಕ್ಷಣ ಸಚಿವರು ನಮ್ಮ ಜಿಲ್ಲೆಯವರಾಗಿದ್ದರು. ಅವರೊಂದು ಐತಿಹಾಸಿಕ ನಿರ್ಣಯ ಕೈಗೊಂಡ ಕಾರಣಕ್ಕಾಗಿ ಎಲ್ಲೆಲ್ಲಿ ದೀಪವಿದೆ, ಅಲ್ಲಿ ಒಂದು ಶಾಲೆ ಪ್ರಾರಂಭವಾಗಬೇಕೆನ್ನುವಂಥ ನಿರ್ಣಯವಾದ ಮೇಲೆ ಕನ್ನಡ ಶಾಲೆ ಶುರುವಾಯಿತು. ಆವಾಗ ನಮ್ಮೂರಿನ ಶಾಲೆಯಲ್ಲಿ ನಾನೇ ಕನ್ನಡ ವಿದ್ಯಾರ್ಥಿಯಾಗಿದ್ದೆ. ನಾವೆಲ್ಲಾ ಆ ತರಹ ಕನ್ನಡ ಕಲಿತುಕೊಂಡು ಬಂದವರು. ಇವತ್ತು merit ನಲ್ಲಿ compete ಮಾಡಬೇಕೆಂದು ಹೇಳಿ ಸರ್ಕಾರದ ಒಂದು ಸಾಮಾನ್ಯ ಆದೇಶವಿದೆ. ಆದರೆ, ಒಬ್ಬ ಅಶಕ್ತ ಇದ್ದವನನ್ನು ಒಬ್ಬ ಶಕ್ತಿಶಾಲಿಯೊಂದಿಗೆ ಕುಸ್ತಿಯಾಡಲು ನೀವು ಬಿಟ್ಟರೆ ಖಂಡಿತವಾಗಿ ಯಾರು ಗೆಲ್ಲುತ್ತಾರೆ ಎನ್ನುವ ನಿರ್ಣಯವನ್ನು ನೀವೇ ಹೇಳಬಹುದು. ಯಾರ ಹತ್ತಿರ ಶಕ್ತಿ ಇದೆಯೋ, ಯಾರಿಗೆ ಬಲಾಢ್ಯವಿದೆ, ಅವನು ಅಶಕ್ತನನ್ನು ಸೋಲಿಸಿಯೇ ಸೋಲಿಸುತ್ತಾನೆ. ಇವತ್ತು merit ನಲ್ಲಿ ಬರಬೇಕೆಂದು ಹೇಳಿ ನಮ್ಮ Hyderabad-Karnaraka ದಲ್ಲಿ ಯಾರಿಗೂ ಕೂಡ ನೌಕರಿಯಲ್ಲಿ ಅವಕಾಶ ಸಿಗುತ್ತಿಲ್ಲ. ತಮಗೆ ಹೇಳಬೇಕಾದರೆ ಮಾನ್ಯ ಅಧ್ಯಕ್ಷರೆ, 300 High School ಶಿಕ್ಷಕರು ಇವತ್ತು ವರ್ಗವಾಗಿ ಬೇರೆ ಜಿಲ್ಲೆಗಳಿಗೆ ಹೋಗಿದ್ದಾರೆ. Merit ನಲ್ಲಿ ಬಂದರು, Mumbai-Karnataka ದವರು ಬಂದರು. ಹಳೆಯ ಮೈಸೂರಿನವರು ಬಂದರು. ಕೆಲಸಕ್ಕೆ Join ಆದರು. ನಮ್ಮ ನಿಮ್ಮಂಥ ಪ್ರಭಾವಿ ರಾಜಕಾರಣಿಗಳನ್ನು ಹಿಡಿದು ವರ್ಗ ಮಾಡಿಸಿಕೊಂಡು ಅವರು ಬೇರೆ ಕಡೆಗೆ ಹೋದರು. ಅಲ್ಲಿ ಮಕ್ಕಳು English, Mathematics, Science ಅನ್ನು ಹೇಗೆ ಓದಬೇಕು? ಅವರು ಹೇಗೆ Engineer ಆಗುವುದು? ಹೇಗೆ Doctor, Professor, ವಿಜ್ಞಾನಿಗಳು ಆಗಬೇಕು? ಈ ವಿಷಯಗಳನ್ನು ಇಲ್ಲಿ ಚರ್ಚೆ ಮಾಡದೆ ನಾವು ಬೇರೆಲ್ಲಿ ಮಾಡುವುದು? ಅದಕ್ಕೆ ನಮ್ಮದೊಂದು ಬೇಡಿಕೆ ಇದೆ, ಏನೆಂದರೆ 371ಕ್ಕೆ ಸಂವಿಧಾನ ತಿದ್ದುಪಡಿ ಆಗಬೇಕು. ಅದರ ಬಗ್ಗೆಯೂ ಕೂಡ ನಂಜುಂಡಪ್ಪ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಎಲ್ಲಿಯವರೆಗೆ 371 ಕ್ಕೆ ಸಂವಿಧಾನ ತಿದ್ದುಪಡಿ ಆಗುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಮುಂದುವರಿಯುತ್ತದೆ ಎನ್ನುವ ಮಾತನ್ನು ಕೂಡ ನಂಜುಂಡಪ್ಪ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾಗಿ ಇವತ್ತು ಈ ಶೈಕ್ಷಣಿಕ ಕ್ಷೇತ್ರದಲ್ಲಿ ನಾವು ಹಿಂದುಳಿದಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಮ್ಮದೊಂದು ಸಲಹೆ ಇದೆ, ತಾವೇಕೆ ಮುಂಬೈ ಕರ್ನಾಟಕದಲ್ಲಿ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಒಂದೊಂದು SSLC Board ಅನ್ನು ಮತ್ತೆ ಅದೇ ತರಹ PUC Board ಅನ್ನು ಪ್ರತ್ಯೇಕವಾಗಿ ಮಾಡಬಾರದು? ಅದನ್ನು ಮಾಡಿದರೆ ಆಯಾ ಕೆಲಸಗಳಿಗೆ ಸೇರುವಂಥ ಅಭ್ಯರ್ಥಿಗಳು ಆಯಾ PUC, SSLC Board ಗಳಲ್ಲಿ ಮಧ್ಯದಲ್ಲಿಯೇ ಸ್ಪರ್ಧೆ ಮಾಡಿ ಅವರು ಕೆಲಸಕ್ಕೆ ಸೇರಲಿಕ್ಕೆ ಸಾಧ್ಯತೆ ಆಗುತ್ತದೆ. ಇದನ್ನು ತಾವು ಮಾಡಬಹುದು. ಇದರ ಬಗ್ಗೆ ತಾವು administrative order ಮಾಡಬಹುದು. ಇದಕ್ಕೇನು ಸಂವಿಧಾನ ತಿದ್ದುಪಡಿ ಆಗಬೇಕಾದಂಥ ಅವಶ್ಯಕತೆ ಇಲ್ಲ. ಬೆಳಗಾಂಗೆ ತಾವೆಲ್ಲಾ ಅಧಿವೇಶನಕ್ಕೆ ಬಂದಿದ್ದೀರಿ. ಬೆಳಗಾಂನಲ್ಲೇ ಒಂದು PUC Board, ಒಂದು –SSLC Board, ಹೈದರಾಬಾದ್

ಕರ್ನಾಟಕದಲ್ಲಿ ಒಂದು PUC Board ಒಂದು SSLC Board ತೆರೆಯಬೇಕು. ಅಲ್ಲಿ ಶಿಕ್ಷಕರಾಗಿರಬಹುದು, ಬೇರೆ ಬೇರೆ ಸಣ್ಣ ಸಣ್ಣ ಹುದ್ದೆಗಳಾಗಿರಬಹುದು, ಅವರೇನಾದರೂ ಕೆಲಸಕ್ಕೆ ಹೋಗಬೇಕಾಗಿದ್ದರೆ ಆ SSLC Board ನಲ್ಲಿ pass ಆದಂಥವರು ಅವರಲ್ಲೂ merit ನಲ್ಲಿ Compete ಮಾಡುತ್ತಾರೆ. ಅವರಿಗೆ ಅಲ್ಲಿ ಹೆಚ್ಚಿಗೆ ಕೆಲಸ ಸಿಗುತ್ತದೆ. ಅವರಿಗೆ ಸಮಾಧಾನವಾಗುತ್ತದೆ. ಅವರಿಗೆ ಆಗ, ಈ ರಾಜ್ಯದಲ್ಲಿ ನಮ್ಮದೂ ಪಾಲುದಾರಿಕೆ ಇದೆ, ಆಡಳಿತದಲ್ಲಿ ನಮಗೂ ಅವಕಾಶವಿದೆ, ಅಭಿವೃದ್ಧಿ ಮಾಡುವಲ್ಲಿ ನಾವೂ ಕೂಡ ಭಾಗವಹಿಸಲಿಕ್ಕೆ ಅವಕಾಶವಿದೆ ಎಂದು ಅನಿಸುತ್ತದೆ. ಇಂಥ ಒಂದು oneness ಎಂದಿದೆಯಲ್ಲಾ ಆ ಗಟ್ಟಿತನ ಬರುವುದಕ್ಕೆ ಅವಕಾಶ ಬರಲಿಕ್ಕೆ ಸಾಧ್ಯತೆ ಇದೆ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಒಂದು ಐತಿಹಾಸಿಕ ನಿರ್ಣಯವನ್ನು ಇವತ್ತು ತೆಗೆದುಕೊಳ್ಳಬೇಕು. ಏನು ಈ ಭಾಗದ ಅಭ್ಯರ್ಥಿಗಳಿದ್ದಾರೆ ಅವರು ಉದ್ಯೋಗದಲ್ಲಿ ವಂಚಿತರಾಗುತ್ತಿದ್ದಾರೆ, ಅವರಿಗೆ ಪ್ರತ್ಯೇಕವಾದ SSLC, PUC Board, ಮಾಡಿದರೆ ನಿಜವಾಗಿ ಕೂಡ ಅನುಕೂಲವಾಗುತ್ತದೆ. ತಾವು ಬೀದರ್‌ನಲ್ಲಿ Veterinary College ತೆರೆದಿದ್ದೀರಿ. ಇಲ್ಲಿ ಕಾಶಂಪುರ್‌ರವರು ಇದ್ದಾರೆ.. Veterinary College building ಆಯಿತು. Vice Chancellor ಬಂದರು. Furniture ಬಂತು. ಪ್ರಾರಂಭದಲ್ಲಿ ವಿದ್ಯಾರ್ಥಿಗಳು ಹಳೆ ಮೈಸೂರಿನಿಂದ 30 ಜನ ಬಂದರು. ಇದು ಕಾಶಂಪುರ್‌ರವರಿಗೆ ಗೊತ್ತಿದೆ. 30ಕ್ಕೆ 30 ಜನ ವಿದ್ಯಾರ್ಥಿಗಳು merit ನಲ್ಲಿ Veterinary Collegeಗೆ ಹೊರಗಡೆಯಿಂದ ಬಂದರು. ಅಲ್ಲಿ ನಮ್ಮ ಸ್ಥಳೀಯರಿಗೆ ಅವಕಾಶ ಸಿಗಲಿಲ್ಲ. Veterinary University ತೆರೆದದ್ದು ನಮ್ಮ ಹಣೆ ಬರಹ. ನಾನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಎಲ್ಲಿಯವರೆಗೆ merit system ಅನ್ನು ಬದಲಾವಣೆ ಮಾಡಿ ಪ್ರತ್ಯೇಕವಾದ SSLC, PUC Board ತೆರೆಯಲಿಕ್ಕೆ ಮುಂದಾಗುವುದಿಲ್ಲವೋ ಅಲ್ಲಿಯವರೆಗೆ ನೀವು University, College ಗಳನ್ನು ತೆರೆಯಿರಿ, ಯಾರಿಗೆ ಅವಕಾಶ ಸಿಗುತ್ತದೆ.....

ಶ್ರೀ ಎ.ಎಸ್. ಬಸವರಾಜು : ಬರಗಾಲದ ಬಗ್ಗೆ ಚರ್ಚೆ ಮಾಡಬೇಕು.

ಅಧ್ಯಕ್ಷರು : ನಿಮ್ಮ ಮಾತನ್ನು ಬೇಗ ಮುಗಿಸಿ. ಈಗಾಗಲೇ ಅರ್ಧ ಗಂಟೆ ಆಯಿತು.

ಶ್ರೀ ಬಿ.ಆರ್ ಪಾಟೀಲ್ : ನಾನು ಇಲ್ಲಿ ರಾಜಕೀಯ ಭಾಷಣ ಮಾಡಿ vote ತೆಗೆದುಕೊಳ್ಳಲು ಹೊರಟಿಲ್ಲ. ಮುಖ್ಯಮಂತ್ರಿಗಳಿದ್ದಾರೆ. ಶಾಸಕರಿದ್ದಾರೆ, ಸರ್ಕಾರವಿದೆ, ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ. ನನಗಿದ್ದಂಥ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇಲ್ಲಿ ನಾವು ಯಾಚನೆ ಮಾಡುವುದಕ್ಕೆ ಬಂದಿಲ್ಲ.

ಅಧ್ಯಕ್ಷರು : ಆಯಿತು. ಇಲ್ಲಿಕೇಳಿ. ಈಗಾಗಲೇ ಅರ್ಧ ಗಂಟೆಯಾಗಿದೆ. ಇನ್ನು ಎರಡು ನಿಮಿಷಗಳಲ್ಲಿ ನಿಮ್ಮ ಮಾತನ್ನು ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ : ನಾನೇನಾದರೂ ತಪ್ಪು ಮಾತನಾಡಿದ್ದರೆ ನೀವು ಬೇಡವೆಂದು ಹೇಳಿ.

ಅಧ್ಯಕ್ಷರು : ನೋ.ನೋ. ಪ್ರಶ್ನೆ ಅದಲ್ಲ. ನೀವು ಸಾಕಷ್ಟು ಸಮಯ ನನಗೆ ಕೊಡಬೇಕೆಂದು ಹೇಳಿದ್ದಿರಿ. ನಾನು 15 ನಿಮಿಷ ಕೊಡುತ್ತೇನೆಂದು ಹೇಳಿದ್ದೆ. ಈಗಾಗಲೇ 30 ನಿಮಿಷಗಳಾಗುತ್ತಿದೆ. ಇನ್ನು ಎರಡು ನಿಮಿಷಗಳಲ್ಲಿ ದಯಮಾಡಿ ಮಾತನಾಡಿ ಮುಗಿಸಿ. ಮಾತನಾಡುವ ಬೇರೆ ಸದಸ್ಯರಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ : ಕೆಲವು ಮಹತ್ವವಾದ ವಿಷಯಗಳನ್ನು ಹೇಳಬೇಕಾಗಿದೆ. ಮೊನ್ನೆ ಸರ್ಕಾರವರು ಒಂದು ಹೊಸ ಕಛೇರಿ ಮಾಡಿದರು. Divisional Commissioner Office ಅನ್ನು abolish ಮಾಡಿದ್ದರು. ಈಗ Regional Development Commissioner ಎಂದು ಮಾಡಿದ್ದಾರೆ. ಆ Regional Development Commissioner ....

ಶ್ರೀ ಎ.ಬಿ. ಪಾಟೀಲ್ : ಇವತ್ತು ಬಿ.ಆರ್. ಪಾಟೀಲ್ ಹೇಳಿದರು. ಯಾವುದೇ ವೈದ್ಯಕೀಯ ಇರಬಹುದು ಅಥವಾ Engineering College ಗಳು, ಮಹಾರಾಷ್ಟ್ರದಲ್ಲಿ ಕೂಡ ಒಂದೇ ಇವೆ. ನೀವೇನಾದರೂ University wise ಮಾಡಿದರೆ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಯಾವುದೇ ಒಂದು ವೃತ್ತಿಪರ institution ಕೋರ್ಸ್‌ಗಳು ಏನಿವೆ, ಬೆಂಗಳೂರಿನಲ್ಲಿ ಕಲಿತಂಥ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಅವರು ಹೇಳಿದ ಹಾಗೆ Veterinary College ತೆರೆದರು. ಅದರಲ್ಲಿ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಯಾವ ಅವಕಾಶವೂ ಸಿಗುವುದಿಲ್ಲ. ಸರ್ಕಾರ ಆ ದೃಷ್ಟಿಕೋನದಿಂದ ಈ ಒಂದು ವ್ಯಾಪ್ತಿಯಲ್ಲಿ University ಮಾಡಿದರೆ, ನಮ್ಮ ಉತ್ತರ ಕರ್ನಾಟಕಕ್ಕೆ ಬಹಳ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ದಯಮಾಡಿ ಬೇಗ ಮುಗಿಸಿ.

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್ : ಈಗ ವೈದ್ಯಕೀಯ ಕಾಲೇಜುಗಳ ಅಷ್ಟೇ ಅಲ್ಲ, ಅವರು ತಾಲ್ಲೂಕಿಗೊಂದು ಮೊರಾರ್ಜಿ ಶಾಲೆ ಮಂಜೂರು ಮಾಡುತ್ತಿದ್ದಾರೆ. ಈ ತಾಲ್ಲೂಕಿನಲ್ಲಿ ಮೊರಾರ್ಜಿ ಶಾಲೆ ಇದ್ದರೂ ಕೂಡ ಪಕ್ಕದ ತಾಲ್ಲೂಕಿನಲ್ಲಿರುವ ಮೊರಾರ್ಜಿ ಶಾಲೆಗೆ ಇಲ್ಲಿನ ವಿದ್ಯಾರ್ಥಿಗಳು ಹೋಗುತ್ತಾರೆ. ಹಾಗಾದರ, ಆ ತಾಲ್ಲೂಕಿಗೆ ಮೊರಾರ್ಜಿ ಶಾಲೆ ಕೊಡುವಂಥ ಅವಶ್ಯಕತೆ ಏನಿದೆ? ಒಂದು ತಾಲ್ಲೂಕಿನಲ್ಲಿದ್ದಂಥ ವಿದ್ಯಾರ್ಥಿಗಳಿಗೆ ಮೊದಲನೇ ಅವಕಾಶ ಕೊಟ್ಟು ಅಥವಾ ಅಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಬರದಿದ್ದ ಪಕ್ಷದಲ್ಲಿ ಬೇರೆಯವರಿಗೆ ಅವಕಾಶ ಕೊಟ್ಟರೆ ಆಗ ಮೊರಾರ್ಜಿ ಶಾಲೆ ಕೊಟ್ಟಿದ್ದಕ್ಕೆ ಉಪಯುಕ್ತವಾಗುತ್ತದೆ ಎಂಬ ಭಾವನೆ ಬರುತ್ತದೆ.

ಅಧ್ಯಕ್ಷರು : ದಯಮಾಡಿ ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ : ನೀವೇನೋ ರಾಜಕೀಯ ನಿರ್ಣಯ ತೆಗೆದುಕೊಳ್ಳುತ್ತೀರಿ. Divisional Commissioner post ಅನ್ನು abolish ಮಾಡಿ ಈಗ Regional Development Commissioner ಎಂದು ಮಾಡಿದ್ದೀರಿ. ಆ ಕಛೇರಿಯಲ್ಲಿ furniture ಇಲ್ಲ. ಅಲ್ಲಿ ಯಾರೋ ಒಬ್ಬರು ಅಧಿಕಾರಿಯನ್ನು ಹಾಕಿದ್ದು ಅಲ್ಲಿ ಅವರು ಬಂದು join ಆಗುವುದಕ್ಕೆ

ತಯಾರಿಲ್ಲ. ಇದೇನಿದು? 4 ತಿಂಗಳಾಯಿತು. ಗುಲ್ಬರ್ಗಾ ಜಿಲ್ಲೆಯಲ್ಲಿ CEO ರವರೇ ಇರಲಿಲ್ಲ. 28 ಇಲಾಖೆಗಳನ್ನು ನಿರ್ವಹಣೆ ಮಾಡುವ ಗ್ರಾಮೀಣ ಮಟ್ಟದ ಅಭಿವೃದ್ಧಿ ಮಾಡುವಂಥ ಜಿಲ್ಲಾ ಪಂಚಾಯತ್‌ಗೆ 4 ತಿಂಗಳುಗಳಿಂದ CEO ಇರಲಿಲ್ಲ. ಜಿಲ್ಲಾಧಿಕಾರಿಯವರೇ CEO ಕೆಲಸ ಮಾಡುತ್ತಿದ್ದರು. ಈ ತರಹ ರಾಜ್ಯದಲ್ಲಿ 8 ಕಡೆ CEO ಗಳಿರಲಿಲ್ಲ. ಖಾಲಿ posts ಇದ್ದವು. ಏನು ಅಧಿಕಾರಿಗಳ ಕೊರತೆ ಇದೆಯೋ ಅಥವಾ ಅಧಿಕಾರಿಗಳನ್ನು ಹಾಕಿದರೂ ಅವರು ಬರಲಿಕ್ಕೆ ತಯಾರಿಲ್ಲವೋ? ಹಾಕಿದರೂ ಹೋಗದಿದ್ದರೆ ಅವರ ಮೇಲೇನು ಕ್ರಮ ತೆಗೆದುಕೊಂಡಿರಿ? ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ, ಯಾವ ತರಹ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಿದೆ. ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ. ನಮ್ಮ ಸ್ನೇಹಿತರು ಬರದ ಬಗ್ಗೆ ಮಾತನಾಡಿದರು. ನಂಜುಂಡಪ್ಪ ವರದಿಯಲ್ಲಿ 88 ತಾಲ್ಲೂಕುಗಳು ಬರದಲ್ಲಿವೆ, 78 ತಾಲ್ಲೂಕುಗಳು ಬಡತನಕ್ಕೆ ಒಳಗಾಗಿವೆ ಎಂಬುದನ್ನು ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಬರಗಾಲ ಬಂದಿದೆ. ಒಂದು ಕಡೆ ಪ್ರವಾಹ, ಇನ್ನೊಂದು ಕಡೆ ಬರ ಇದೆ. ಬರ ಇದ್ದಲ್ಲಿ ಸಮಸ್ಯೆ ಇದೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಉದ್ಯೋಗ ಖಾತರಿ ಯೋಜನೆಯಲ್ಲಿ ನಾವು ಕೆಲಸ ತೆಗೆದುಕೊಳ್ಳುತ್ತೇವೆ. ಯಾವುದಕ್ಕೂ ಹಣಕಾಸಿನ ಕೊರತೆ ಇಲ್ಲ ಎನ್ನುವ ಮಾತನ್ನು ಹೇಳಿದರು. ಹೌದು, ಕೇಂದ್ರ ಸರ್ಕಾರದಿಂದ ಒಂದು ಒಳ್ಳೆಯ ಅವಕಾಶ ನಮಗೆ ಬಂದಿದೆ. ಅದು ಉದ್ಯೋಗ ಖಾತರಿ ಯೋಜನೆ. ಆದರೆ, ಉದ್ಯೋಗ ಖಾತರಿ ಯೋಜನೆಯಲ್ಲಿ.....

ಅಧ್ಯಕ್ಷರು : ಈಗಾಗಲೇ 35 ನಿಮಿಷ ಆಯಿತು. ಬಹಳ ಜನ ಮಾತನಾಡುವವರು ಇದ್ದಾರೆಂದು ಹೇಳಿದರೂ ನೀವು ನಮ್ಮ ಕಷ್ಟವನ್ನೇ ಅರ್ಥಮಾಡಿಕೊಳ್ಳುವುದಿಲ್ಲವಲ್ಲಾ.

ಶ್ರೀ ಬಿ.ಆರ್. ಪಾಟೀಲ್ : ಸರ್, ನಿಮ್ಮ ಕಷ್ಟವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನೀವು ನನ್ನ ಕಷ್ಟವನ್ನು ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು : ನಿಮ್ಮ ಕಷ್ಟ ಏನಿದೆ? ಹೇಳುವುದನ್ನೆಲ್ಲಾ ಹೇಳಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್ : ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು. ಕುಡಿಯುವ ನೀರಿನ ಸಮಸ್ಯೆ ಇದೆ. ಬಹಳ ಜನ ಹೇಳುತ್ತಾರೆ. ಬೇಗ ಮುಗಿಸಿ.

ಶ್ರೀ ಬಿ.ಆರ್. ಪಾಟೀಲ್ : ಕಳೆದ ವರ್ಷ ಬರ ಬಂದಾಗ taks force ರಚಿಸಿದರು. ನಮ್ಮ MLAಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ನಿಮಗೆ ಎಷ್ಟು ದುಡ್ಡು ಬೇಕು ಕೇಳಿ ಎಂದು ಹೇಳಿದರು. ನಾವೆಲ್ಲಾ ಮುಂದಾಲೋಚನೆ ಮಾಡಿ, ಎಲ್ಲಾ ಚರ್ಚೆ ಮಾಡಿ ನಾನು 96 ಲಕ್ಷ ರೂ.ಗಳ ಒಂದು ಯೋಜನೆಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದೆ. ನಿನ್ನೆ ನಮ್ಮ ಸವದತ್ತಿ ಶಾಸಕರು ಬಂದು ನನ್ನ ಪಕ್ಕದಲ್ಲಿ ಕುಳಿತಿದ್ದರು. ಅನೇಕ ಶಾಸಕರು task force ನಲ್ಲಿ ಎಷ್ಟು ಹಣ ಕೇಳಿದ್ದೇವೆ ಅಷ್ಟು ಹಣ ಬರಲಿಲ್ಲ. ಈಗ ಬರ ಪರಿಹಾರಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಒಂದು task force

ಮಾಡಿ ನೀವು ಅದನ್ನು ಬಗೆಹರಿಸಿ ನೀರು ಕೊಡಿಸಿ ಎಂದರೆ ನಾವು ಎಲ್ಲಿಂದ ನೀರು ಕೊಡಿಸೋಣ? ಜಲ ನಿರ್ಮಲ ಎಂಬ ಒಂದು world bank ಯೋಜನೆ ಬಂದಿದೆ. ಅಲ್ಲಿ ಗ್ರಾಮ ಪಂಚಾಯಿತಿಗಳನ್ನು select ಮಾಡಿದ್ದಾರೆ. ನಾವೆಲ್ಲಾ ಅಲ್ಲಿ ರಸ್ತೆಗಳಾಗಬೇಕು. ಚರಂಡಿಗಳಾಗಬೇಕು, ನೀರಿ ಬರಬೇಕು ಎನ್ನುವಂಥ ಯೋಜನೆಯನ್ನು ಮಾಡಿ ಜನರಿಂದ ವಂತಿಗೆ ಕೊಡಿಸಿ, ದುಡ್ಡು ಕಟ್ಟಿಸಿದ್ದೇವೆ. 70 ಕೋಟಿ ರೂ. ಗುಲ್ಬರ್ಗಾಕ್ಕೆ ಬರಬೇಕಾದಲ್ಲಿ 35 ಕೋಟಿ ರೂ. ಬಂದಿದೆ, ಇನ್ನು ಮುಂದೆ ಬೇರೆ ಕೆಲಸ ಮಾಡುವ ಹಾಗಿಲ್ಲವೆಂದು ಇವತ್ತು ಈ ಹಂತದಲ್ಲಿ ಹೇಳುತ್ತಾರೆ. ಇವತ್ತು ಕುಡಿಯುವ ನೀರಿನ ಬವಣೆಯಿಂದ ಕೃಷಿ ಮೇಲೆ ದೊಡ್ಡ ಹೊಡೆತ ಬಿದ್ದಿದೆ. ಕುಡಿಯಲಿಕ್ಕೆ ನೀರಿಲ್ಲದೆ ಅನೇಕ ಜನರ ಆರೋಗ್ಯ ಹಾಳಾಗುತ್ತಿದೆ. ಇದಕ್ಕೆಂದು ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಕೂಡ ಇವತ್ತು ಎಲ್ಲಿಯೂ ನೀರು ಸಿಗುವ ಸಾಧ್ಯತೆ ಇಲ್ಲ. ಹಾಗಾಗಿ ಇವತ್ತು ಹೈನುಗಾರಿಕೆ ಮೇಲೆ ಪರಿಣಾಮ ಬೀರುತ್ತಿದೆ. ನಾನು ಸರ್ಕಾರಕ್ಕೆ ಒಂದೇ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಬಗೆಹರಿಸುವುದಕ್ಕೆ ನೀವು ಎಲ್ಲಿಯವರೆಗೆ ಅಂತರ್ಜಲ ಮಟ್ಟವನ್ನು ಎತ್ತರಿಸುವುದಕ್ಕೆ ನೀವು ಪ್ರಯತ್ನಿಸುವುದಿಲ್ಲವೋ, ಸಮರೋಪಾದಿಯಲ್ಲಿ, ಸಣ್ಣ ನೀರಾವರಿ ಕೆರೆಗಳನ್ನು ಮಾಡುವುದರ ಜೊತೆಗೆ ಗೋಕಟ್ಟೆಗಳು, ಚೆಕ್‌ಡ್ಯಾಂಗಳು, ಈ ರೀತಿ ಅನೇಕ ಅಭಿವೃದ್ಧಿ ಕೆಲಸಗಳನ್ನು ನಾವು ತೆಗೆದುಕೊಳ್ಳದೇ ಹೋದರೆ, ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಶಾಶ್ವತವಾಗಿ, ಯಾವ ಸರ್ಕಾರ ಬಂದರೂ ಕೂಡ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಮಹಾರಾಷ್ಟ್ರದಲ್ಲಿ ಮಾನ್ಯ ವಸಂತರಾವ್ ನಾಯಕ್‌ರವರು ಮುಖ್ಯಮಂತ್ರಿಯಾಗಿದ್ದಾಗ, ಸತತವಾಗಿ 40 ವರ್ಷಗಳಲ್ಲಿ, ಇಲ್ಲಿ ಇವತ್ತು ಎಷ್ಟು ಪ್ರಮಾಣದಲ್ಲಿ ಮಳೆ ಬೀಳುತ್ತದೆ ಅಲ್ಲಿ ಕೂಡ ಅಷ್ಟೇ ಪ್ರಮಾಣದಲ್ಲಿ ಮಳೆ ಬೀಳುತ್ತದೆ. ಬೆಳೆ ಪದ್ಧತಿಯೂ ಕೂಡ ಅಲ್ಲಿ ಮತ್ತು ಇಲ್ಲಿಯದ್ದು ಒಂದೇಯಾಗಿದೆ, ಜೀವನ ಪದ್ದತಿಯೂ ಕೂಡ ಮಹಾರಾಷ್ಟ್ರದ್ದು ಹಾಗೂ ಈ ರಾಜ್ಯದ್ದು ಒಂದೇಯಾಗಿದೆ. ಇಷ್ಟಾದರೂ ಕೂಡ ಅಲ್ಲಿ ಇವತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಅವರು ಬಗೆಹರಿಸಿಕೊಂಡಿದ್ದಾರೆ. ಏಕೆಂದರೆ, ಈ ಒಂದು ಜಲಾನಯನ ಅಭಿವೃದ್ಧಿಯನ್ನು ಬಹಳ ವೈಜ್ಞಾನಿಕವಾಗಿ ಹಾಗೂ ಪ್ರಾಮಾಣಿಕವಾಗಿ ಅವರು ಕೆಲಸ ಮಾಡಿ ಅಂತರಜಲವನ್ನು ಹೆಚ್ಚು ಮಾಡಿಕೊಂಡಿದ್ದರಿಂದ, ಇವತ್ತು ಮಹಾರಾಷ್ಟ್ರದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಂಡಿದ್ದಾರೆ. ನಾವೂ ಕೂಡ ಈ ನಿಟ್ಟಿನಲ್ಲಿ ಏಕೆ ಕೆಲಸ ಮಾಡಬಾರದು? ನಾವು ಈ ಕೆಲಸ ಮಾಡುವುದಕ್ಕೆ ಯಾರೂ ಅಡ್ಡಿ ಬಂದಿಲ್ಲ. ನಮಗೂ ಕೂಡ ಕೆಲಸ ಮಾಡುವುದಕ್ಕೆ ಬುದ್ಧಿಯಿದೆ, ಯೋಚನೆಯಿದೆ. ಅಂತಹ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನಮ್ಮ ಮಂತ್ರಿಗಳು ಇಲ್ಲಿ industry ಗಳನ್ನು ಮಾಡಬೇಕೆಂದು ಕುಳಿತಿದ್ದಾರೆ.

ಅಧ್ಯಕ್ಷರು : ಸಾಕು ಕುಳಿತುಕೊಳ್ಳಿ. ಈಗಾಗಲೇ 30–40 ನಿಮಿಷ ಕಾಲಾವಕಾಶ ತೆಗೆದುಕೊಂಡಿದ್ದೀರಿ. ಆದರೂ ಇನ್ನೂ ಮಾತನಾಡುತ್ತಿದ್ದೀರಿ. ಆಯಿತು ಕುಳಿತುಕೊಳ್ಳಿ.

ಶ್ರೀ ಬಿ.ಆರ್.ಪಾಟೀಲ್ : ಉದ್ಯಮಗಳನ್ನು ಪ್ರಾರಂಭ ಮಾಡಬೇಕೆಂದು ಕುಳಿತಿದ್ದಾರೆ. ಎಲ್ಲಿ road ಇದೆ. ಈಗ ಜಹೀರಾಬಾದ್ ದಾಟಿದರೆ, ಕರ್ನಾಟಕದ National Highwayನಲ್ಲಿ

ಒಂದು ಗೇಣಿನಷ್ಟು ತಗ್ಗು ಬಿದ್ದಿದೆ. Road ಇಲ್ಲವೇ ಇಲ್ಲ. ಹೀಗಿದ್ದಾಗ ಬಂಡವಾಳ ಹೂಡಲು ಯಾರು ಬರುತ್ತಾರೆ?

ಅಧ್ಯಕ್ಷರು : ನೀವು ಹೀಗೆ ಏಕೆ ಮಾಡುತ್ತೀರಿ? ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಆರ್. ಪಾಟೀಲ್ : ನೀವು ಎಲ್ಲಿಯವರೆಗೂ ರೋಡ್, ವಿದ್ಯುತ್, ನೀರು, ಮೂಲಸೌಲಭ್ಯಗಳನ್ನು ಒದಗಿಸುವುದಿಲ್ಲವೋ ಅಲ್ಲಿಯವರೆಗೂ ಅವರು ಇಲ್ಲಿ ಬಂದು ಉದ್ಯಮಗಳನ್ನು ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಆಯಿತು. ತಾವು ದಯಮಾಡಿ ಕುಳಿತುಕೊಳ್ಳಿ.

ಡಾ.ಕೆ. ಅನ್ನದಾನಿ : ನಮಗೂ ಅವಕಾಶ ಕೊಡಿ.

ಅಧ್ಯಕ್ಷರು : ರೆಡ್ಡಿಯವರೆ, ನೀವು ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್ : ನಮ್ಮ ರಾಜ್ಯದಲ್ಲಿ ಬೇರೆ ರಾಜ್ಯಗಳಿಗಿಂತ tax ಜಾಸ್ತಿ. ಎಲ್ಲಕ್ಕಿಂತ ಕರ್ನಾಟಕದಲ್ಲಿ tax ಜಾಸ್ತಿ. ಬೇರೆ ರಾಜ್ಯದವರು ಇಲ್ಲಿ ಬಂದು ಬಂಡವಾಳ ಹೂಡಿ ಉದ್ಯೋಗಾವಕಾಶವನ್ನು ಕೊಡಬೇಕೆಂದರೆ ಈ ವಿಷಯದಲ್ಲಿ ಸರ್ಕಾರದವರು ಗಮನ ಹರಿಸಬೇಕಾಗುತ್ತದೆ. ಔದ್ಯೋಗಿಕ, ಸಂಪರ್ಕ, ನೀರಾವರಿ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಎಲ್ಲಾ ರಂಗಗಳಲ್ಲೂ ಕೂಡ ನಾವು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಗ ಮಾತ್ರ ಈ regional imbalance ಅನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ.....

ಅಧ್ಯಕ್ಷರು : ಆಯಿತು ಬಿಡಿ, ರೆಡ್ಡಿಯವರೇ ನೀವು ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಒಂದೇ ನಿಮಿಷ ಮುಗಿಸಿ ಬಿಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ.

ಅಧ್ಯಕ್ಷರು : ಪಾಟೀಲರೇ, ಈಗ ನೀವು ಏನು ಹೇಳಿದರೂ recordಗೆ ಹೋಗುವುದಿಲ್ಲ. ನಾನು ಕಠಿಣವಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ : ಇಲ್ಲದಿದ್ದರೆ ಕರ್ನಾಟಕ ಒಡೆಯುತ್ತದೆ. ಕನ್ನಡಿಗರ ಮನಸ್ಸಿಗೆ ನೋವಾಗುತ್ತದೆ.

ಅಧ್ಯಕ್ಷರು : ಹಿರಿಯ ಸದಸ್ಯರು ಎಂದು ನಿಮಗೆ ಅವಕಾಶ ಕೊಟ್ಟರೆ ನೀವು ದುರುಪಯೋಗ ಮಾಡಿಕೊಳ್ಳುತ್ತೀರಿ. ಅವರು ಹೇಳಿದ್ದೇನೂ recordಗೆ ಹೋಗುವುದಿಲ್ಲ. No. ಈ ರೀತಿ ಸಣ್ಣ ವ್ಯಕ್ತಿಯಾಗಿಬಿಟ್ಟಿರಲ್ಲಾ.

ಶ್ರೀ ಬಿ.ಆರ್. ಪಾಟೀಲ್ : ಕರ್ನಾಟಕ ಅಖಂಡವಾಗಿ ಉಳಿಯಬೇಕು. ಸಮಗ್ರವಾದ ಅಭಿವೃದ್ಧಿಯಾಗಬೇಕೆಂಬ ಆಗ್ರಹವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು, ರೆಡ್ಡಿಯವರೆ, ತಾವು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ,...

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಕಡೆಯವರಿಗೆ ಅವಕಾಶ ಕೊಡುವುದಿಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಅಧಿವೇಶನವನ್ನು ನಡೆಸಿದ್ದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ.

SRI VYJA NATH PATIL : MR. Speaker,

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ನೀವು ನಮ್ಮನ್ನು permanent ಆಗಿ ಮರೆತುಬಿಟ್ಟಿದ್ದೀರಿ.

ಶ್ರೀ ವೈಜನಾಥ ಪಾಟೀಲ್ : ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ರೀ, ಕುಳಿತುಕೊಳ್ಳಿ.

ಶ್ರೀ ವೈಜನಾಥ ಪಾಟೀಲ್ : ಏಕೆ ಕುಳಿತುಕೊಳ್ಳಬೇಕು

ಅಧ್ಯಕ್ಷರು : ಕುಳಿತುಕೊಳ್ಳಿ. ನಿಮ್ಮನ್ನು ಹೊರಗಡೆ ಕಳುಹಿಸಿಬಿಡುತ್ತೇನೆ.

(ಅಡಚಣೆ)

ಶ್ರೀ ವೈಜನಾಥ ಪಾಟೀಲ್ : ಅಧ್ಯಕ್ಷರು ನಾನು ಮಾತನಾಡುವುದಕ್ಕೆ avoid ಮಾಡುತ್ತಿದ್ದೀರಿ. ಒಂದು ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಎಲ್ಲರಿಗೂ ಅವಕಾಶ ಕೊಡಬೇಕೆಂದು ಏನಿದೆ? ಕೊಡುವುದಿಲ್ಲ. ನೀವು ಇದೇ ರೀತಿ ಮಾತನಾಡಿದರೆ ನಿಮ್ಮನ್ನು ಹೊರಗಡೆಗೆ ಕಳಹಿಸಿಬಿಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಕಳೆದ ಐದು ದಿನಗಳಿಂದ ನೋಡುತ್ತಿದ್ದೇನೆ.

ಡಾ.ಹೆಚ್.ಸಿ. ಮಹಾದೇವಪ್ಪ : ಅವರದಾದ ನಂತರ ಇವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : ನೀವು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಅವರದಾದ ನಂತರ ನಿಮಗೆ ಕೊಡಬೇಕೆಂದು ಏನು ಇದೆ? ನಾನು ಕೊಡುವುದಿಲ್ಲ.

ಶ್ರೀ ವೈಜನಾಥ ಪಾಟೀಲ್ : ಕಳೆದ ಐದು ದಿನಗಳಿಂದ ನೋಡುತ್ತಿದ್ದೇನೆ.

ಅಧ್ಯಕ್ಷರು : ನೀವು ಕುಳಿತುಕೊಳ್ಳಿ. ಗೊತ್ತಿದೆ. ತಾವು ಹಿರಿಯ ಸದಸ್ಯರಿದ್ದೀರಿ. ಮೊದಲು Hon'ble Chair ಗೆ ಗೌರವ ಕೊಡುವುದನ್ನು ಕಲಿತುಕೊಳ್ಳಿ. ಹಿರಿಯ ಸದಸ್ಯರು ಎಂದರೆ ಘೇರಾವ್ ಮಾಡುತ್ತೀರಿ.

ಶ್ರೀ ಡಾ.ಕೆ, ಅನ್ನದಾನಿ : ಅಧ್ಯಕ್ಷರೆ, ಒಂದು ನಿಮಿಷ... ರೆಡ್ಡಿಯವರೆ, ನಾನು ಮಾತನಾಡುವುದಿಲ್ಲ. ಒಂದೇ ಒಂದು ನಿಮಿಷ.

ಶ್ರೀ ವೈಜನಾಥ ಪಾಟೀಲ್ : ನೀವು ಈ ರೀತಿ avoid ಮಾಡುವುದು ಸರಿಯಲ್ಲ

ಅಧ್ಯಕ್ಷರು : ನಾನು ಹೊರಗಡೆ ಕಳುಹಿಸಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅನ್ನದಾನಿಯವರೆ, ನೀವು ಆಮೇಲೆ ಮಾತನಾಡಿ.

ಶ್ರೀ. ಡಾ. ಕೆ. ಅನ್ನದಾನಿ : ನಾನು ಮಾತನಾಡುವುದಿಲ್ಲ, Speaker ಸಾಹೇಬರಿಗೆ ಒಂದು ವಿಷಯ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಆಮೇಲೆ ಹೇಳಿ

ಅಧ್ಯಕ್ಷರು : ಕೆಲವರ ಧೋರಣೆ ಏನಾಗಿದೆ ಎಂದರೆ ಆಕ್ರಮಣಕಾರಿ ಆಗಿದೆ. ಹೆದರಿಸಿ, ಬೆದರಿಸಿ, ಗಲಾಟೆ ಮಾಡಿ... ಇದನ್ನೆಲ್ಲಾ ಬಿಟ್ಟು ಬಿಡಿ. ನಾನು Name ಮಾಡಬೇಕಾಗುತ್ತದೆ. ಏನಿದು? ಹಿರಿಯ ಸದಸ್ಯರು ಸದನದಲ್ಲಿ ನಡೆದುಕೊಳ್ಳುವ ರೀತಿಯೇ ಇದು?

(ಅಡಚಣೆ)

ಶ್ರೀ ವೈಜನಾಥ ಪಾಟೀಲ್ : ಈಗ ಊಟಕ್ಕೆ ಬಿಡುತ್ತಾರೆ. ಆನಂತರ ಬಿಲ್ ತರುತ್ತಾರೆ. ಆನಂತರ ಆಯಿತು ಎನ್ನುತ್ತಾರೆ.

ಅಧ್ಯಕ್ಷರು : ಕುಳಿತುಕೊಳ್ಳಿ

ಶ್ರೀ ವೈಜನಾಥ ಪಾಟೀಲ್ : ಏಕೆ ಕುಳಿತುಕೊಳ್ಳಬೇಕು?

(ಅಡಚಣೆ)

ಅಧ್ಯಕ್ಷರು : ಏನು ಸದಸ್ಯರಾಗಿ ಆರಿಸಿ ಬಂದಿರಿ ನೀವೆಲ್ಲಾ. ನೀವು ಮಾತನಾಡಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಳಗಾಂನಲ್ಲಿ ಈ ಅಧಿವೇಶನವನ್ನು...

ಡಾ. ಕೆ. ಅನ್ನದಾನಿ : ಸರ್, ಶ್ರೀರಾಮರೆಡ್ಡಿಯವರೆ, ಒಂದು ನಿಮಿಷ...

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏಕೆ ಸರ್, ನೀವು ನಮಗೆ ಅಡ್ಡಿ ಮಾಡುತ್ತೀರಿ? ಅಧ್ಯಕ್ಷರು ನಮ್ಮನ್ನು ಕರೆದಿದ್ದಾರೆ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೆ, ನೀವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ ಸರ್, ಅವರು ನನಗೆ ಸುಮ್ಮನೆ ತೊಂದರೆ ಮಾಡುತ್ತಾರೆ.

ಅಧ್ಯಕ್ಷರು : ನೀವು ಮಾತನಾಡಿ.

ಡಾ. ಕೆ. ಅನ್ನದಾನಿ: ಒಂದು ನಿಮಿಷ ಸರ್. ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಾನು ಅವರನ್ನು ಕರೆದಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ, ಇದು ಸರಿಯಲ್ಲ. ಅವರು ನನ್ನನ್ನು ಕರೆದಿದ್ದಾರೆ. ಏಕೆ ಈ ರೀತಿ ಮಾಡುತ್ತೀರಿ. ಏನಾಗಿದೆ ನಿಮಗೆ?

ಡಾ. ಕೆ. ಅನ್ನದಾನಿ : ನಾನು ಮಾತನಾಡುವುದಿಲ್ಲ. ಒಂದೇ ಒಂದು second ಇರಿ ಸರ್. ನಾನು ಅಧ್ಯಕ್ಷರಿಗೆ ಹೇಳುತ್ತೇನೆ.

ಅಧ್ಯಕ್ಷರು : ಕಳಿತುಕೊಳ್ಳಿ ಅವರು ಮಾತನಾಡಲಿ.

ಡಾ. ಕೆ. ಅನ್ನದಾನಿ : ಒಂದು ಕೆಲಸ ಮಾಡಿ. ನಮಗೆ 18% ನಲ್ಲಿ ಮಾತನಾಡಲು ಅವಕಾಶ ಮಾಡಿಕೊಡಿ. ಒಂದು second ನಾನು ಹೇಳುವುದನ್ನು ಕೇಳಿ.

ಅಧ್ಯಕ್ಷರು : ಆದಷ್ಟು ಈ ಭಾಗದ ಸದಸ್ಯರಿಗೆ ಅವಕಾಶ ಕೊಡಬೇಕು ಎಂದು ಕೊಟ್ಟುಕೊಂಡು ಬಂದೆವು. ದಯಮಾಡಿ ಅರ್ಥಮಾಡಿಕೊಳ್ಳಿ.

ಡಾ. ಕೆ. ಅನ್ನದಾನಿ : ನಮ್ಮ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಲ್ಲಿ ಬರ ಇದೆ. ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ. Old Mysoreಗೆ separate ಆಗಿ Session ಮಾಡುತ್ತೀರಾ?

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರು ಅರ್ಥಮಾಡಿ ಕೊಳ್ಳಿ, ಎಲ್ಲರಿಗೂ ಹತ್ತು ನಿಮಿಷ ಅವಕಾಶ ಕೊಡುವುದಕ್ಕೆ ಆಗುತ್ತದೆಯೆ? ಈಗ leadersಗೆ floor leadersಗೆ ಇನ್ನೂ ಕೊಟ್ಟೇ ಇಲ್ಲ. ಈಗ ಏನಾಗಿದೆ ಎಂದರೆ ಅವರು ಹತ್ತು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಡಾ. ಕೆ. ಅನ್ನದಾನಿ : ಅವರು ಆರು ದಿವಸಗಳಿಂದ ಮಾತನಾಡಿದ್ದಾರೆ, ನನಗೆ ಐದು ನಿಮಿಷ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ನೀವು ಶ್ರೀರಾಮರೆಡ್ಡಿಯವರನ್ನು ಮಾತನಾಡುವುದಕ್ಕೆ ಕರೆದಿದ್ದಿರಿ. ಇದು ನಿಮ್ಮ ಅಧಿಕಾರ ಇರುವುದರಿಂದ, ಅವರನ್ನು ಕರೆದಿದ್ದಿರಿ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೇ ಹೊರತು ಅವರು ಮಾತನಾಡುವುದಕ್ಕೆ ಅಡ್ಡಿಪಡಿಸತಕ್ಕಂಥದ್ದು ಇದೆಯಲ್ಲಾ, ಇದು ಒಳ್ಳೆಯ ಸೂಚನೆಯಲ್ಲ. ಈ ರೀತಿಯಾದರೆ ಹೇಗೆ?

ಅಧ್ಯಕ್ಷರು : ಅವರೂ ಕೇಳುತ್ತಿದ್ದಾರೆ. ಕೆಲವರು ಹತ್ತು ನಿಮಿಷ ಎಂದು ಹೇಳಿ ಜಾಸ್ತಿ time ತೆಗೆದುಕೊಳ್ಳುತ್ತಾರೆ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ನಾನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಆಯಿತು. ದಯಮಾಡಿ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ನಾನು ಮೊಟ್ಟಮೊದಲಿಗೆ ಬೆಳಗಾಂನಲ್ಲಿ ಈ ಅಧಿವೇಶನ ಕರೆದಿರತಕ್ಕಂಥ ಸರ್ಕಾರವನ್ನು ಅಭಿನಂದಿಸುತ್ತೇನೆ. ಈಗ ಎರಡು ವಿಚಾರ ಪ್ರಮುಖವಾಗಿ ಚರ್ಚೆಯಾಗಬೇಕು ಎಂದು ಹೇಳಿ ತಾವು ತೀರ್ಮಾನಿಸಿದ್ದೀರಿ. ಒಂದು ಬರಗಾಲ, ಇನ್ನೊಂದು ಡಾ. ನಂಜುಂಡಪ್ಪ ವರದಿ. ಬರಗಾಲದ ಬಗ್ಗೆ ನಾನು ಇಷ್ಟೇ ಹೇಳತಕ್ಕಂಥದ್ದು. ಇವತ್ತಿಗೂ ಸರ್ಕಾರದ ಹತ್ತಿರ ಸರಿಯಾದಂಥ ಮಾಹಿತಿ ಇಲ್ಲ. 175 ತಾಲ್ಲೂಕುಗಳ ಪೈಕಿ ಎಷ್ಟು ತಾಲ್ಲೂಕುಗಳಲ್ಲಿ ಬರಗಾಲ ಇದೆ, ಆ ಬರಗಾಲದ ಪ್ರಮಾಣ ಏನು ಎನ್ನತಕ್ಕಂಥ ಸಂಪೂರ್ಣ ಮಾಹಿತಿ ಈ ಸರ್ಕಾರದ ಹತ್ತಿರ ಇಲ್ಲ. ಒಂದುಕಡೆ ಅವರು ಹೇಳುತ್ತಾರೆ 110 ಇನ್ನೊಂದು ಕಡೆ 114 ಎಂದು ಹೇಳುತ್ತಾರೆ.

ಆದರೆ ವಾಸ್ತವವಾಗಿ ಎಷ್ಟು ತಾಲ್ಲೂಕುಗಳಲ್ಲಿ ಖಚಿತವಾಗಿ ತೀವ್ರ ರೀತಿಯಾದಂಥ ಬರಗಾಲವಿದೆ ಎನ್ನತಕ್ಕಂಥ ಮಾಹಿತಿ ಇಲ್ಲ. ಇದು ಸರ್ಕಾರದ ಸಂಪೂರ್ಣ ವಿಫಲತೆ, ಮಾಹಿತಿಯನ್ನು ಪಡೆಯಲಾರದ ಸ್ಥಿತಿಯಲ್ಲಿ ಈ ಸರ್ಕಾರ ಇದೆ ಎಂದು ನಾನು ನೇರವಾಗಿ ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ. ಎರಡನೆ ವಿಚಾರ, ಈ ಬರಗಾಲ ಬಂದಂಥ ಪ್ರದೇಶದಲ್ಲಿ ಏನು ತಕ್ಷಣ ಅವಶ್ಯಕತೆ ಇದೆ, ಜನರಿಗೆ ಕೆಲಸ ಕೊಡತಕ್ಕಂಥ ಕಾರ್ಯಕ್ರಮ, ಕುಡಿಯುವುದಕ್ಕೆ ನೀರು ಕೊಡತಕ್ಕಂಥ ಕಾರ್ಯಕ್ರಮ, ದನ ಕರುಗಳಿಗೆ ನೀರು ಮತ್ತು ಮೇವು ಕೊಡತಕ್ಕಂಥ ಕಾರ್ಯಕ್ರಮ ತಕ್ಷಣ ಆಗಬೇಕಾಗಿರತಕ್ಕಂಥದ್ದು. ಈ ಸರ್ಕಾರ ಅದರ ಬಾಬತ್ತಿಗೆ ಇವತ್ತಿಗೂ ಒಂದೇ ಒಂದು ರೂಪಾಯಿ ಹಣವನ್ನು ಬಿಡುಗಡೆ ಮಾಡಿಲ್ಲ. ಇವರು ಏನು ಹೇಳುತ್ತಿದ್ದಾರೆ? ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರ ಇದುವರೆಗೂ 452.28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ CRFನಲ್ಲಿ 90.28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆಹಾರದ ರೂಪದಲ್ಲಿ 112 ಕೊಟಿ ರೂಪಾಯಿಗಳು ಕೊಟ್ಟಿದೆ, NCCF ನಲ್ಲಿ 226.30 ಕೋಟಿರೂಪಾಯಿಗಳು ಕೊಟ್ಟಿದೆ, TCRF ನಲ್ಲಿ 23.70 ಕೋಟಿ ರೂಪಾಯಿಗಳು ಕೊಟ್ಟಿದೆ. ಇದು ಕೇಂದ್ರ ಸರ್ಕಾರ ಇದುವರೆಗೆ ಬಿಡುಗಡೆ ಮಾಡಿರತಕ್ಕಂಥ ಹಣ. ಇದರಲ್ಲಿ ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರತಕ್ಕಂಥ ಹಣ (1)100.50 ಕೋಟಿ (2) 131 ಕೋಟಿ, ಆಹಾರ 112 ಕೋಟಿ, ಒಟ್ಟು 343 ಕೋಟಿ ರೂಪಾಯಿಗಳು ರೂಪಾಯಿಗಳನ್ನು ರಾಜ್ಯ ಸರ್ಕಾರ ಇದುವರೆಗೆ ಬಿಡುಗಡೆ ಮಾಡಿದೆ. ಇದನ್ನು ಬಿಟ್ಟರೆ ಇನ್ನೂ 109.78 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದ ಹಣನೇ ಇವರ ಹತ್ತಿರ ಇದೆ. ರಾಜ್ಯ ಸರ್ಕಾರ ಮಾತ್ರ, ಒಂದೇ ಒಂದು ನಯಾ ಪೈಸೆ ತನ್ನ ಖಜಾನೆಯಿಂದ ಬಿಡುಗಡೆ ಮಾಡಿಲ್ಲ. ಉದಾಹರಣೆ CRF ನಲ್ಲಿ 90.28 ಕೋಟಿರೂ ಏನು ಹಣ ಬಿಡುಗಡೆ ಮಾಡಿದ್ದಾರೆ. ಅದಕ್ಕೆ ಇವರು 25% ಸೇರಿಸಬೇಕು. 25%ಸೇರಿಸಿದರೆ 120 ಕೋಟಿ ರೂ ಯಾಗುತ್ತದೆ. ಆದರೆ ಅದರಲ್ಲಿ ಇವರು ಬಿಡುಗಡೆ ಮಾಡಿರತಕ್ಕಂಥದ್ದು 100 ಕೋಟಿ ರೂ ಮಾತ್ರ ಹಣ ಕೊಟ್ಟಿಲ್ಲ. ಆದುದರಿಂದ ಹಣ ಕೊಡದೇ ಇವರು ಬರಗಾಲವನ್ನು ಸಮರೋಪಾದಿಯಲ್ಲಿ ಎದುರಿಸುತ್ತೇವೆಂದು ಹೇಳುತ್ತಿದ್ದಾರೆ. ನನ್ನ ತಾಲ್ಲೂಕೂ ಕೂಡ ಬರಗಾಲಕ್ಕೆ ತುತ್ತಾಗಿರುವಂಥ ಜಿಲ್ಲೆ ಹಾಗೂ ತಾಲ್ಲೂಕು. ಮತ್ತು ನಂಜುಂಡಪ್ಪನವರ ವರದಿ ಪ್ರಕಾರ ಅತೀ ಹಿಂದುಳಿದಂಥ ತಾಲ್ಲೂಕುಗಳಲ್ಲಿ ನನ್ನ ತಾಲ್ಲೂಕು ಬಾಗೇಪಲ್ಲಿಯೂ ಸೇರುತ್ತದೆ. ಬರಗಾಲಕ್ಕೆ ತುತ್ತಾಗಿರತಕ್ಕಂಥ ನಮ್ಮ ಕೋಲಾರ ಜಿಲ್ಲೆಗೆ ಹಣ ಬಿಡುಗಡೆ ಮಾಡುತ್ತೇವೆಂದು ಸರ್ಕಾರದವರು ಒಂದು ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ. ಅಂದರೆ, ಬರಗಾಲಕ್ಕೆ ಒಳಗಾಗಿರತಕ್ಕಂಥ ಒಂದೊಂದು ತಾಲ್ಲೂಕುಗಳಿಗೆ 148 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಪತ್ರ ಕಳುಹಿಸಿದ್ದಾರೆ. ಆದರೆ, ನಮ್ಮ ಡೆಪ್ಯುಟಿ ಕಮೀಷನರ್‌ರವರು ಏನು ಹೇಳುತ್ತಾರೆಂದರೆ, ನೀವು ಕೇವಲ 14 ಲಕ್ಷ ರೂಪಾಯಿಗೆ ಆಕ್ಷನ್ ಪ್ಲಾನ್ ಮಾಡಬೇಕು ಅದಕ್ಕಿಂಥ ಮೀರಿ ಆಕ್ಷನ್ ಪ್ಲಾನ್ ಮಾಡಬಾರದೆಂದು ಹೇಳುತ್ತಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಸರ್ಕಾರ ಕೊಟ್ಟಿರುವ ಪತ್ರದಲ್ಲಿ 148 ಲಕ್ಷ ರೂಪಾಯಿ ಕೊಡುತ್ತೇವೆಂದು

ಹೇಳುತ್ತಾರೆ. ಆದರೆ, ಡಿ.ಸಿ ಯವರು ಮತ್ತೆ ತಹಸೀಲ್ದಾರ್‌ರವರಿಗೆ ಏನು ಹೇಳುತ್ತಾರೆಂದರೆ, 14 ಲಕ್ಷ ರೂಪಾಯಿಗೆ ಮಾತ್ರ ಆಕ್ಷನ್ ಪ್ಲಾನ್ ಮಾಡಬೇಕೆಂದು ಹೇಳಿದ್ದಾರೆ. ಅಂದರೆ, ಇದರ ಅರ್ಥವೇನು? ನೀವು ಬರೀ ಪೇಪರ್‌ನಲ್ಲಿ ಹಣ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ವಾಸ್ತವವಾಗಿ ಬರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಬೇಕಾಗಿರತಕ್ಕಂಥ ಹಣವನ್ನು ನೀವು ಕೊಡುತ್ತಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಏನು ಹೇಳುತ್ತೇನೆಂದರೆ, ನಿಮಗೆ ಪ್ರಾಮಾಣಿಕವಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸತಕ್ಕಂಥ ರಾಜಕೀಯ ಇಚ್ಚಾಶಕ್ತಿ ಇದ್ದರೆ, ಇದಕ್ಕೆ ಕೇಂದ್ರ ಸರ್ಕಾರ ಹಣ ಕೊಡಬೇಕು ನಿಜ. ಆದರೆ, ರಾಜ್ಯ ಸರ್ಕಾರ ಕೊಡತಕ್ಕಂಥ ಹಣವನ್ನು ಕೊಡಬೇಕು. ಇಷ್ಟು ಕೊಡಬೇಕೆಂದು ಅಂದಾಜು ಹಾಕಿದ್ದಾರೆ. ಆದರೆ, ಯಾವ ಆಧಾರದ ಮೇಲೆ ಅವರು ಅಂದಾಜು ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ 2996 ರೂಪಾಯಿಗಳಷ್ಟು ಡ್ಯಾಮೇಜ್ ಆಗಿದೆ. ಆದ್ದರಿಂದ ಅಷ್ಟು ಹಣ ಬೇಕೆಂದು ಅಂದಾಜು ಮಾಡಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ ಎನ್ನತಕ್ಕಂಥದ್ದು ನನಗಂತೂ ಗೊತ್ತಿಲ್ಲ. ಆದರೆ, ನನ್ನ ಅಭಿಪ್ರಾಯದ ಪ್ರಕಾರ ಅದು ಸುಮಾರು 5000 ಕೋಟಿ ರೂಪಾಯಿ ಆಗುತ್ತದೆ. ಏಕೆಂದರೆ, ಕೆಲವು ಪ್ರದೇಶದಲ್ಲಿ ರೈತರು ಬೆಳೆ ಇಟ್ಟಿದ್ದಾರೆ. ಬೆಳೆ ಇಟ್ಟಾಗ ಮಾತ್ರ ಮಳೆ ಬಂತು. ಆನಂತರ ಮತ್ತೆ ಮಳೆ ಬರಲಿಲ್ಲ. ಇದರಿಂದಲೇ ಸಾವಿರಾರು ಕೋಟಿ ರೂಪಾಯಿ ರೈತರಿಗೆ ನಷ್ಟವಾಗಿದೆ. ಅಂದರೆ, ಬೆಳೆ ಇಟ್ಟಾಗಲೇ ರೈತರು ನಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಈ ನಷ್ಟವನ್ನು ಯಾರು ತುಂಬಿಕೊಡುತ್ತಾರೆ? ಈಗ ಆಂಧ್ರಪ್ರದೇಶ ಸರ್ಕಾರ ಏನು ಮಾಡಿದೆ ಎಂದರೆ, ಬೆಳೆ ಇಟ್ಟು ನಾಶವಾಗಿರತಕ್ಕಂಥ ರೈತನಿಗೆ ಬೆಳೆ ನಷ್ಟಕ್ಕೆಂದು 1 ಹೆಕ್ಟೇರ್‌ಗೆ 3000 ರೂಪಾಯಿ ಪ್ರಕಾರ ಕೊಡುತ್ತಿದೆ. ಆ ರೀತಿಯಾದ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ಏಕೆ ಹಾಕಿಕೊಳ್ಳಲಿಲ್ಲ? ಈ ರೀತಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ ನೀವು ರೈತರ ನೆರವಿಗೆ ಬರುವುದಾದರೂ ಹೇಗೆ? ಬರಗಾಲಕ್ಕೆ ಸಂಬಂಧಪಟ್ಟಂತೆ ಎರಡು ಪ್ರಶ್ನೆಗಳಿವೆ. ಕೃಷಿ ಕಾರ್ಮಿಕರದ್ದು ಮತ್ತು ರೈತರದ್ದು ಒಂದು ಪ್ರಶ್ನೆ ಮತ್ತೆ ಜಾನುವಾರುಗಳದ್ದು ಮತ್ತೊಂದು ಪ್ರಶ್ನೆಯಾಗಿದೆ. ಕೃಷಿ ಕಾರ್ಮಿಕರಿಗೆ ಕೆಲಸ ಕೊಡತಕ್ಕಂಥ ಕೆಲಸ ಆಗಬೇಕು. ಮತ್ತೆ ಜಾನುವಾರುಗಳಿಗೆ ನೀರು ಮತ್ತು ಮೇವು ಒದಗಿಸತಕ್ಕಂಥ ಕೆಲಸ ಆಗಬೇಕು. ಹಾಗೆಯೇ, ಬೆಳೆ ನಷ್ಟ ಆಗಿರತಕ್ಕಂಥ ರೈತರಿಗೆ ಬೆಳೆಯ ನಷ್ಟ ಪರಿಹಾರ ಕೊಡತಕ್ಕಂಥ ಕೆಲಸ ಆಗಬೇಕು. ಈ ಮೂರು ಕಾರ್ಯಕ್ರಮಗಳನ್ನು ವೈಜ್ಞಾನಿಕವಾಗಿ ಇದುವರೆಗೂ ರಾಜ್ಯ ಸರ್ಕಾರ ರೂಪಿಸಿಲ್ಲ. ಆದರೆ, ಇವರು ಬರಗಾಲಕ್ಕೆ ಸಂಬಂಧಪಟ್ಟಂತೆ ಲಿಪ್ ಸಿಂಪತಿ ಏನು ಹೇಳುತ್ತಿದ್ದಾರೆಂದರೆ,.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಹೇಳುತ್ತಿರುವುದು ಏನೆಂದರೆ ಬರಗಾಲದಿಂದ ಎಲ್ಲೆಲ್ಲಿ ಬೆಳೆ ನಾಶವಾಗಿದೆ ಅಲ್ಲಿ 1 ಹೆಕ್ಟೇರ್‌ಗೆ 3 ಸಾವಿರ ರೂಪಾಯಿಗಳಷ್ಟು ಪರಿಹಾರವನ್ನು ಕೊಡುತ್ತಿದ್ದಾರೆಂದು ತಾವು ಹೇಳುತ್ತಿದ್ದೀರಿಯಲ್ಲವೇ? ಇದಕ್ಕೆ ಕೇಂದ್ರ ಸರ್ಕಾರ ನೆರವು ನಿಡುತ್ತಿದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೇಂದ್ರ ಸರ್ಕಾರ ಇದಕ್ಕೆ ಹಣ ಕೊಟ್ಟಿಲ್ಲ. Natural Calamity Relief Fund ನಿಂದ ಹಣ ಕೊಟ್ಟಿದ್ದಾರಷ್ಟೆ. ಆದರೆ ಇದು ರಾಜ್ಯ ಸರ್ಕಾರ ಕೊಡತಕ್ಕಂಥ ಹಣ. ನೀವು ಈ ರೀತಿಯಾಗಿ ರೈತರ ನೆರವಿಗೆ ಬಾರದೆ ಇದ್ದರೆ, ನೀವು ರೈತರ ಬಗ್ಗೆ ಮೊಸಳೆ ಕಣ್ಣೀರನ್ನು ಸುರಿಸುವುದನ್ನು ಬಿಟ್ಟರೆ ನಿಜವಾಗಿಯೂ ಕೂಡ ರೈತರ ನೆರವಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಲೆಕ್ಕದ ಪ್ರಕಾರ ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಸುಮಾರು 65 ಲಕ್ಷ ಜನ ಕೃಷಿ ಕಾರ್ಮಿಕರು ಇದ್ದಾರೆ. ಅವರಿಗೆ ನೀವು ತಿಂಗಳಲ್ಲಿ ಕನಿಷ್ಟ 10 ರಿಂದ 15 ದಿವಸ ಕೆಲಸ ಕೊಟ್ಟರೂ ಸಹ ತಿಂಗಳಿಗೆ ಇದಕ್ಕೋಸ್ಕರ 900 ಕೋಟಿ ರೂಪಾಯಿ ಬೇಕಾಗುತ್ತದೆ. ಇದಕ್ಕೆ ಇಲ್ಲಿ ಹಣವನ್ನು ತೆಗೆದಿಟ್ಟಿದ್ದೀರಿ? ಇವತ್ತು ಲಕ್ಷಾಂತರ ಜಾನುವಾರುಗಳಿವೆ. ಮನುಷ್ಯರಾದರೆ ಎಲ್ಲಿಯಾದರೂ ಹೋಗಿ ಕೆಲಸ ಮಾಡುತ್ತಾರೆ. ಮತ್ತೆ ಎಲ್ಲಿ ನೀರಿದೆ ಎಂದು ಹುಡುಕಿಕೊಂಡು ಹೋಗಿ ನೀರನ್ನು ಕುಡಿಯುತ್ತಾರೆ. ಈ ಮೂಕ ಪ್ರಾಣಿಗಳು ಎಲ್ಲಿಗೆ ಹುಡುಕಿಕೊಂಡು ಹೋಗಿ ನೀರು ಕುಡಿಯಬೇಕು ಮತ್ತೆ ಎಲ್ಲಿ ಮೇವು ಹಾಕತಕ್ಕಂಥದ್ದು? ಇವುಗಳಿಗೆ ನೀವು ಏನು ವ್ಯವಸ್ಥೆಯನ್ನು ಇವತ್ತಿನ ದಿವಸ ಮಾಡಿದ್ದೀರಿ? ಅದಕ್ಕೆ ಹುಲ್ಲಿನ ಮತ್ತು ನೀರಿನ ವ್ಯವಸ್ಥೆ ಇಲ್ಲ. ಮತ್ತೆ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಕೂಡ ಇದೆ. 2003–2004 ನೇ ಸಾಲಿನಲ್ಲಿ ಬರಗಾಲ ಬಂದಂಥ ಸಂದರ್ಭದಲ್ಲಿ ಕುಡಿಯುವ ನೀರನ್ನು ಟ್ರಾನ್ಸ್‌ಪೋರ್ಟೇಶನ್ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. 2004 ನೇ ಇಸವಿಯಲ್ಲಿ ಟ್ರಾನ್ಸ್‌ಪೋರ್ಟೇಶನ್‌ಗೆ ಕೊಡಬೇಕಾಗಿರತಕ್ಕಂಥ ಹಣವನ್ನು ಈ ಸರ್ಕಾರ ಇವತ್ತಿನವರೆಗೂ ಕೂಡ ಕೊಟ್ಟಿಲ್ಲ. ಆದ್ದರಿಂದ ಇವರಿಗೆ ಹೊಸದಾಗಿ ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಯಾವರೀತಿಯಾಗಿ ಇದಕ್ಕೆ ಹಣ ತೆಗಿದಿಟ್ಟಿದ್ದಾರೆ? ನೆನ್ನೆದಿವಸ ಇವರು ಸಪ್ಲಿಮೆಂಟರಿ ಬಜೆಟ್ ಅನ್ನು ಮಂಡಿಸಿದ್ದೀರಿ. ಬರಗಾಲಕ್ಕೆ ನಾವು ಇಷ್ಟು ಹಣ ತೆಗೆದಿಟ್ಟಿದ್ದೇವೆ ಎಂದು ಅದರಲ್ಲಿ ಎಲ್ಲಿಯೂ ಕೂಡ ಹೇಳಿಲ್ಲ. ಆದ್ದರಿಂದ, ಇವರು ಹೇಗೆ ಖರ್ಚುಮಾಡುತ್ತಾರೆ? ಎಲ್ಲಿಂದ ಖರ್ಚು ಮಾಡುತ್ತಾರೆ? ಮತ್ತೆ ಬರಗಾಲವನ್ನು ಹೇಗೆ ಎದುರಿಸುತ್ತಾರೆ? ನನ್ನ ಮಾಹಿತಿ ಪ್ರಕಾರ ನಮ್ಮ ರಜ್ಯದಲ್ಲಿ 127 ತಾಲ್ಲೂಕುಗಳಲ್ಲಿ ಬರಗಾಲವಿದೆ. ಮಹಾರಾಷ್ಟದಲ್ಲಿ ಆದಂಥ ಫ್ಲಡ್‌ನಿಂದ ನಮ್ಮಲ್ಲಿನ 53 ತಾಲ್ಲೂಕುಗಳು ಕಷ್ಟಕ್ಕೆ ಸಿಕ್ಕಿವೆ. ಮತ್ತೆ ಜನರೂ ಕೂಡ ಸತ್ತಿದ್ದಾರೆ. ಹಾಗೆಯೇ ಊರುಗಳೇ ನೀರಿನಿಂದ ಕೊಚ್ಚಿ ಹೋಗಿವೆ. ಒಂದು ಕಡೆ ಅತಿವೃಷ್ಟಿ, ಅಂದರೆ ಕರ್ನಾಟಕ ರಾಜ್ಯದಲ್ಲಿ ಮಳೆಯಾಗಿ ಅತಿವೃಷ್ಟಿಯಾಗಿಲ್ಲ. ಮಹಾರಾಷ್ಟದಲ್ಲಿ ಮಳೆಯಾಗಿ ಇಲ್ಲಿ ಅತಿವೃಷ್ಟಿಯಾಗಿದೆ. ಇದಕ್ಕೆ ಯಾವುದೇ ರೀತಿಯ ಕಾರ್ಯಕ್ರಮವನ್ನು ರೂಪಿಸಿಲ್ಲ. ಮತ್ತೆ ಬರಗಾಲಕ್ಕೆ ತುತ್ತಾಗಿರತಕ್ಕಂಥ 127 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯಾದಂಥ ಕಾರ್ಯಕ್ರಮವನ್ನು ರೂಪಿಸಿಲ್ಲ. ಆದ್ದರಿಂದ ಈ ಸರ್ಕಾರವನ್ನು ನಾನು ಕೇಳುವುದೇನೆಂದರೆ, ಕೇಂದ್ರ ಸರ್ಕಾರ ಇದಕ್ಕೆ ಹಣ ಕೊಡಬೇಕು ನಿಜ. ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲವೆಂದು ದೂರತಕ್ಕಂಥ ನೀವು ಇದಕ್ಕೆ ನೀವೇನು ಕೊಟ್ಟಿದ್ದೀರಿ? ಸಪ್ಲಿಮೆಂಟರಿ ಬಜೆಟ್‌ನ್ನು ಮಂಡನೆ ಮಾಡಿರತಕ್ಕಂಥ ನೀವು ಬರಗಾಲಕ್ಕೆಂದು ಒಂದೇ ಒಂದು ರೂಪಾಯಿ ಕೂಡ ಬರಗಾಲದ

ಪರಿಹಾರಕ್ಕೆಂದು ನೀವು ಅದರಲ್ಲಿ ಎಲ್ಲಿಯೂ ಕೂಡ ಸೂಚನೆ ಮಾಡಿಲ್ಲ. ಆದ್ದರಿಂದ ಈ ಸರ್ಕಾರಕ್ಕೆ ಬರಗಾಲವನ್ನು ಎದುರಿಸತಕ್ಕಂಥ ರಾಜಕೀಯ ಇಚ್ಛಾಶಕ್ತಿ ಸಂಪೂರ್ಣವಾಗಿ ಇಲ್ಲ. ಕೇವಲ ಬೂಟಾಟಿಕೆ ಕೆಲಸ ಬಿಟ್ಟರೆ ಬರಗಾಲವನ್ನು ಎದುರಿಸುವುದಕ್ಕೆ ಯಾವುದೇ ರೀತಿಯಾದಂಥ ಗಂಭೀರವಾದಂತಹ ಪ್ರಯತ್ನವನ್ನು ಮಾಡುತ್ತಿಲ್ಲ. ಬರಗಾಲದ ಬಗ್ಗೆ ಇಲ್ಲಿಗೆ ನಿಲ್ಲಿಸಿ ಡಾ:ನಂಜುಂಡಪ್ಪನವರ ವರದಿ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಾ: ನಂಜುಂಡಪ್ಪನವರ ವರದಿ ಕರ್ನಾಟಕ ರಾಜ್ಯದಲ್ಲಿ ಕೇವಲ ಭಗವದ್ಗೀತೆ ಆಗುತ್ತಿದೆಯಷ್ಟೆ. ಈ ಮಾತನ್ನು ನಾನು ಭಾರಿ ನೋವಿನಿಂದ ಹೇಳುತ್ತಿದ್ದೇನೆ. ಏಕೆಂದರೆ, 3500 ವರ್ಷಗಳ ಇತಿಹಾಸ ಇರತಕ್ಕಂಥ ಭಗವದ್ಗೀತೆಯನ್ನು ನಮ್ಮ ದೇಶದಲ್ಲಿರತಕ್ಕಂಥ ಜನರು ಪೂಜೆ ಮಾಡುತ್ತಾರೆಯೇ? ವಿನ: ಅದನ್ನು ಓದತಕ್ಕಂಥ ಪಾಪಕ್ಕೆ ಯಾರೂ ಹೋಗಲಿಲ್ಲ. ಭಗವದ್ಗೀತೆಯನ್ನು ಕೆಲವೇ ಪರ್ಸೆಂಟ್‌ನಷ್ಟು ಜನ ಓದಿದ್ದಾರೆ. ಉಳಿದವರೆಲ್ಲಾ ಪೂಜೆ ಮಾಡುವವರಾಗಿದ್ದಾರೆ. ಅದರಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ಆದ್ದರಿಂದ ಈ ರೀತಿಯಾಗಿ ನಂಜುಂಡಪ್ಪನವರ ವರದಿಯಾಗುವುದು ಬೇಡ. ನಂಜುಂಡಪ್ಪನವರ ವರದಿಯನ್ನು ನೀವೇನಾದರೂ ಪ್ರಾಮಾಣಿಕವಾಗಿ ಜಾರಿ ಮಾಡುತ್ತೇವೆಂದರೆ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ ನೀವು ಅದನ್ನು mandatory ಮಾಡಬೇಕಾದರೆ ಸರ್ಕಾರ ಇದಕ್ಕೆ ಸಂಬಂಧಪಟ್ಟಂತೆ ಬಿಲ್ ತರಲಿ. ಅದೇನೆಂದರೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಎಂದು ಒಂದು ಬಿಲ್ ತರಬೇಕು. ಈ ಮಸೂದೆಯನ್ನು ಇಲ್ಲಿ ಮಂಡಿಸಿ ಅದರಲ್ಲಿ ನಂಜುಂಡಪ್ಪನವರ ವರದಿಯಲ್ಲಿರತಕ್ಕಂಥ ಪ್ರೊಪೋಜಲ್‌ನ್ನು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದು ಅದನ್ನು ಮ್ಯಾಂಡೇಟರಿ ಮಾಡಬೇಕು. ಮತ್ತೆ ಅದಕ್ಕೆ ಇಡೀ ರಾಜ್ಯದ ಒಟ್ಟು ಆದಾಯ ಏನು ಬರುತ್ತದೆ, ಅದರಲ್ಲಿ ಇಷ್ಟು ಪರ್ಸೆಂಟ್ ಹಣವೆಂದು ಆ ಹಿಂದುಳಿದ ಪ್ರದೇಶಗಳಿಗೆ ಹಣವನ್ನು ತೆಗೆದಿಡುವಂಥ ಕೆಲಸ ಮಾಡಿದರೆ ಮಾತ್ರ ನಿಮಗೆ ನಿಜವಾಗಿಯೂ ಕೂಡ ನಂಜುಂಡಪ್ಪನವರ ವರದಿ ಬಗ್ಗೆ ಆಸಕ್ತಿ, ಪ್ರಾಮಾಣಿಕತೆ ಮತ್ತು ಅದನ್ನು ಜಾರಿ ಮಾಡಬೇಕೆಂಬ ಇಚ್ಛಾಶಕ್ತಿ ಇದೆ ಎಂದು ಭಾವಿಸಬೇಕಾಗುತ್ತದೆ. ಇಲ್ಲದಿದ್ದರೆ ಅದು ಮತ್ತೆ ಒಂದು ಭಗವದ್ಗೀತೆ ಆಗುವುದು ಬೇಡ. ಇವತ್ತೂ ಕೂಡ ಇದು ಸರ್ಕಾರಕ್ಕೆ ಮ್ಯಾಂಡೇಟರಿ ಆಗಿಲ್ಲ. ಏನಿದ್ದರೂ ಅವರ ದಯೆ ಮಾತ್ರವಾಗಿದೆ. ಇಷ್ಟವಿದ್ದರೆ ಮಾಡಬಹುದು. ಇಲ್ಲದಿದ್ದರೆ ಇಲ್ಲ. ಸರೋಜಿನಿ ಮಹಿಷಿ ವರದಿ ಏನಾಯಿತು? ಬರಗೂರು ವರದಿ ಏನಾಯಿತು ಮತ್ತೆ ವಾಟಾಳ್ ನಾಗರಾಜ್‌ರವರು ಕೊಟ್ಟಂಥ ವರದಿ ಏನಾಯಿತು? ಅಂದರೆ, ಹಿಂದೆ ಕೊಟ್ಟಂಥ ವರದಿಗಳಿಗೆ ಏನುಗತಿ ಬಂದಿದೆಯೋ ಇನ್ನು ಕೆಲವು ದಿವಸ ಆದಮೇಲೆ ನಂಜುಂಡಪ್ಪ ವರದಿಗೂ ಕೂಡ ಅದೇ ಗತಿ ಬರುತ್ತದೆ. ಇದು ಒಂದನೇ ಅಂಶ, ಎರಡನೇ ಅಂಶ ಏನೆಂದರೆ, ಬೆಳಗಾವಿಯಲ್ಲಿ ಅಧಿವೇಶನ ಮಾಡುತ್ತಿರುವುದು ನಿಜವಾಗಿಯೂ ಕೂಡ ಸ್ವಾಗತಾರ್ಹ. 1924 ನೇ ಇಸವಿಯಲ್ಲಿ ಮಹಾತ್ಮ ಗಾಂಧಿಯವರು ಬೆಳಗಾವಿಯಲ್ಲಿ ಐತಿಹಾಸಿಕವಾದಂತಹ AICC ಅಧಿವೇಶನ ನಡೆಸಿದರು. ಅಸಹಕಾರ ಚಳುವಳಿ ಮುಗಿದ ನಂತರ ನಡೆದಂಥ ಪ್ರಪ್ರಥಮವಾದ AICC ಅಧಿವೇಶನ ಇದಾಗಿತ್ತು.

ಎರಡನೆಯದು ಯಾವುದೆಂದರೆ, ಅದಕ್ಕೂ ಕೂಡ ಐತಿಹಾಸಿಕವಾದಂಥ ಮಹತ್ವ ಇದೆ. ಮೊಟ್ಟಮೊದಲ ಬಾರಿಗೆ ಮತ್ತು ಕಟ್ಟಕಡೆಯ ಬಾರಿಗೆ ಮಹಾತ್ಮಾ ಗಾಂಧಿಯವರು ಅಧ್ಯಕ್ಷತೆ ವಹಿಸಿದಂಥ ಏಕೈಕ AICC ಅಧಿವೇಶನ ಬೆಳಗಾವಿಯಲ್ಲಿ ನಡೆದಿರತಕ್ಕಂಥದಾಗಿತ್ತು. ಏಕೆಂದರೆ ಅವತ್ತು ಸ್ವಾತಂತ್ರ್ಯ ಸಂಗ್ರಾಮದ ಚಳುವಳಿ ಸಂದರ್ಭದಲ್ಲಿ ಇಡೀ ಭಾರತ ದೇಶದಲ್ಲಿ ಮತ್ತು ಪ್ರತ್ಯೇಕವಾಗಿ ದಕ್ಷಿಣ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ, ಬೇರೆ ಬೇರೆ ಗುಂಪುಗಳಾಗಿ ಅಂದರೆ, ಬ್ರಾಹ್ಮಣರು, ಬಾಹ್ಮಣೇತರರು, ನಿಮ್ನ ವರ್ಗದವರು, ದಕ್ಷಿಣದವರು ಮತ್ತು ಉತ್ತರ್ರದವರು ಎನ್ನತಕ್ಕಂಥ ಭಿನ್ನಾಭಿಪ್ರಾಯ ಬಂದು ಸ್ವಾತಂತ್ರ್ಯ ಚಳುವಳಿ ಬಲಹೀನವಾಗುತ್ತಿರುವಂಥ ಸಂದರ್ಭದಲ್ಲಿ, ಆ ಸ್ವಾತಂತ್ರ್ಯ ಚಳವಳಿಯನ್ನು ಬಲಿಷ್ಠಗೊಳಿಸಲಿಕ್ಕೆ ಬೆಳಗಾವಿಯಲ್ಲಿ ಕರೆದಿದ್ದಂಥ AICC ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರು ಏನು ಹೇಳಿದರೆಂದರೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಎಲ್ಲಾ ಜನರು ಭಾಗವಹಿಸಿದರೆ ಮಾತ್ರ ಎಲ್ಲಾ ಪ್ರಾದೇಶಿಕ, ಎಲ್ಲಾ ವಿಭಾಗದ, ಎಲ್ಲಾ ಧರ್ಮದ ಹಾಗೂ ಎಲ್ಲಾ ಜಾತಿಯವರು ಭಾಗವಹಿಸಿದಂಥ ಸ್ವಾತಂತ್ರ್ಯ ಹೋರಾಟ ಮಾತ್ರ ಯಶಸ್ವಿಯಾಗಲಿಕ್ಕೆ ಸಾಧ್ಯ ಆಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲವೆಂದು ಆ ಅಧಿವೇಶನದಲ್ಲಿ ಹೇಳಿದ್ದರು. ಅದರ ಪೂರ್ಣ ಇತಿಹಾಸವನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಹೆಚ್ಚಿನ ಸಮಯವಿಲ್ಲ. ಅದೇರೀತಿಯಲ್ಲಿ ಇಲ್ಲಿ ಕರೆದಿರತಕ್ಕಂಥ ಅಧಿವೇಶನದ ಮುಖ್ಯ ಉದ್ದೇಶ ಏನೆಂದರೆ, ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಅತೀ ಹಿಂದುಳಿದಂಥ ಪ್ರದೇಶ. ಈ ಪ್ರದೇಶದ ಜನರಿಗೆ ನಾವು ಹಿಂದುಳಿದಿದ್ದೇವೆಂದು ಸರ್ಕಾರ ಮತ್ತು ನಮ್ಮ ರಾಜ್ಯದ ಬಗ್ಗೆ ಅಸಂತೃಪ್ತಿ ಇದೆ. ಆ ಅಸಂತೃಪ್ತಿ ಹೋಗಲಾಡಿಸಬೇಕೆಂಬ ಪ್ರಯತ್ನ ಇದೆಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ, ಈ ಸರ್ಕಾರಕ್ಕೆ ಒಂದು ಸ್ಪಷ್ಟವಾಗಿ ಗೊತ್ತಿರಬೇಕು. ಹೈದರಾಬಾದ್ ಕರ್ನಾಟಕವಾಗಲಿ ಅಥವಾ ಬಾಂಬೆ ಕರ್ನಾಟಕವಾಗಲಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಏಕೆ ಹಿಂದುಳಿದಿದೆ ಎನ್ನತಕ್ಕಂಥದರ ಮೂಲಭೂತ ಸಮಸ್ಯೆಯೇ ಇವರಿಗೆ ಅರ್ಥವಾಗಿಲ್ಲ. ಹೈದರಾಬಾದ್ ಕರ್ನಾಟಕ ನಿಜಾಮರ ಆಡಳಿತದಲ್ಲಿತ್ತು. ಮತ್ತೆ ಇದು ಪೇಶ್ವೆ ಹಾಗೂ ಮರಾಠರ ಮತ್ತು ಬ್ರಿಟಿಷ್ ಆಡಳಿತದಲ್ಲಿತ್ತು. ಹಾಗೇಯೇ ಇಲ್ಲಿ ಊಳಿಗಮಾನ್ಯ ವ್ಯವಸ್ಥೆ ಬಲಿಷ್ಟವಾಗಿತ್ತು. ಇಲ್ಲಿರತಕ್ಕಂಥ ಉಳಿಗಮಾನ್ಯ ವ್ಯವಸ್ಥೆಯನ್ನು ಅಂದರೆ, ಜಮೀನ್ದಾರರ ವ್ಯವಸ್ಥೆಯನ್ನು ನಾಶ ಮಾಡಲಿಲ್ಲ. ಹೈದರಾರಬಾದ್ ನಿಜಾಮರು ಮಾಡಲಿಲ್ಲ. ಬ್ರಿಟೀಷರು ಮಾಡಲಿಲ್ಲ ಮರಾಠರು ಮಾಡಲಿಲ.್ಲ ಪೇಶ್ವೆಗಳು ಮಾಡಲಿಲ್ಲ. ಭೂಸಂಬಂಧಗಳು ಬದಲಾವಣೆಯಾಗದೆ ಊಳಿಗಮಾನ್ಯ ಪದ್ಧತಿ ಬದಲಾವಣೆಯಾಗದೆ ಯಾವುದೇ ಒಂದು ಪ್ರದೇಶ ಆರ್ಥಿಕವಾಗಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಆ ಭೂಸಂಬಂಧಗಳನ್ನು ಬದಲಾವಣೆ ಮಾಡತಕ್ಕಂಥ ಕಾರ್ಯಕ್ರಮವನ್ನು ಈ ಪ್ರದೇಶದಲ್ಲಿ ಯಾವುದೇ ಸರ್ಕಾರ 59 ವರ್ಷದಿಂದ ಮಾಡಲೇ ಇಲ್ಲ. ಆ ಕಾರಣಕ್ಕೋಸ್ಕರ ಇವತ್ತು ಆರ್ಥಿಕವಾಗಿ ಹಿಂದುಳಿದಿದೆ. ಅದರ ಜೊತೆಗೆ ಆ ಪಾಳಿಗಾರಿಕೆ ಸಾಮಾಜಿಕ ಮೌಲ್ಯಗಳೂ ಕೂಡ ಇವತ್ತು ಈ ಪ್ರದೇಶದಲ್ಲಿರುವ ಜನರನ್ನು ಕಿತ್ತು ತಿನ್ನುತ್ತಿವೆ. ಆ ಪಾಳೆಗಾರಿಕೆ

ಮೌಲ್ಯಗಳಿಂದ ಹೊರಗಡೆ ಬರಬೇಕಾದರೆ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕು. ಅಂದರೆ ಶೈಕ್ಷಣಿಕ ವ್ಯವಸ್ಥೆ ಅಭಿವೃದ್ಧಿಯಾಗಬೇಕು. ಶಿಕ್ಷಣ ಕೊಡಲಿಲ್ಲ. ಶಿಕ್ಷಣವನ್ನು ಯಾರಿಗೆ ಕೊಟ್ಟಿದ್ದೀರಿ? ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಸಾಕ್ಷರತೆ ಪ್ರಮಾಣ ಏನು ಇವತ್ತು? ಎಷ್ಟು ಜನರಿಗೆ ಶಿಕ್ಷಣವನ್ನು ಕೊಟ್ಟಿದ್ದೀರಿ? ಅದರಲ್ಲಿ worst affected ಮಹಿಳೆಯರು ಇಲ್ಲಿ 80% ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ. ಹಾಗಾಗಿ ಈ ಪ್ರದೇಶ ಹಿಂದುಳಿದಿದೆ, ಅವುಗಳಿಗೆ ನೀವು ಸರಿಯಾದ ಕಾರ್ಯಕ್ರಮವನ್ನು ರೂಪಿಸದೆ ನೀವು ಬೆಳಗಾಂ ನಲ್ಲಿ ಅಧಿವೇಶನ ಮಾಡಿದರೂ ಒಂದೇ ಗುಲ್ಬರ್ಗಾದಲ್ಲಿ ಮಾಡಿದರೂ ಒಂದೇ, ಬೆಂಗಳೂರಿನಲ್ಲಿ ಮಾಡಿದರೂ ಒಂದೇ. ಇಲ್ಲಿ ತೀರ್ಮಾನ ಮಾಡತಕ್ಕಂಥ ಇಚ್ಛಾಶಕ್ತಿ ಇಲ್ಲಿ ತೀರ್ಮಾನ ಮಾಡತಕ್ಕಂಥದ್ದು ಈ ಪ್ರದೇಶ ಅಭಿವೃದ್ಧಿಯಾಗಬೇಕೆಂದು ಇಲ್ಲಿ ತೀರ್ಮಾನ ಮಾಡುವುದಕ್ಕೆ ಬಂದಿದ್ದೀರಿ. ಈ ತೀರ್ಮಾನವನ್ನು ಪ್ರಾಮಾಣಿಕವಾಗಿ ಬೆಂಗಳೂರಿನಲ್ಲಿಯೇ ಜಾರಿಗೆ ಮಾಡಲಿ, ಏಕಾಗುವುದಿಲ್ಲ. ಇಲ್ಲಿ ಅಧಿವೇಶನವನ್ನು ಕರೆಯುವುದು ಬೇಡವೆಂದು ನಾನು ಹೇಳುವುದಿಲ್ಲ. ರಾಜಕೀಯ ಇಚ್ಛಾಶಕ್ತಿ ಪ್ರಶ್ನೆ. ಡಾ.ನಂಜುಂಡಪ್ಪ ವರದಿ ಇನ್ನೊಂದು ಭಗವದ್ಗೀತೆಯಾಗುವುದು ಬೇಡ. ಅದನ್ನು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸಿ ಅದನ್ನು ಅಭ್ಯಾಸ ಮಾಡಿ ಅದನ್ನು ಜಾರಿ ಮಾಡಲಿಕ್ಕೆ ಕಾನೂನು ತನ್ನಿ, ಬಿಲ್ ತನ್ನಿ, ಆವಾಗ ಮಾತ್ರ ನಿಜವಾಗಿ ಈ ಪ್ರದೇಶದ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಚರಿತ್ರೆಯಲ್ಲಿ ಇದೊಂದು ಘಟನೆ ನಡೆದು ಹೋಯಿತು ಎಂದಾಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. ನಾನು ಸರ್ಕಾರವನ್ನು ಮತ್ತೊಮ್ಮೆ ಕೇಳುತ್ತೇನೆ. ಬರ ಮತ್ತು ಡಾ: ನಂಜುಂಡಪ್ಪ ವರದಿ ಜಾರಿಯಾಗಬೇಕಾದರೆ ಪ್ರಾಮಾಣಿಕವಾದ ಇಚ್ಛಾಶಕ್ತಿ ಪ್ರದರ್ಶನ ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ. ಆರಗ ಜ್ಞಾನೇಂದ್ರ : ನೀವು ಬಲಗಡೆ ನೋಡುವುದಿಲ್ಲ.

ಅಧ್ಯಕ್ಷರು : ಮಾನ್ಯ ವೈಜನಾಥ್ ಪಾಟೀಲ್‌ರು ಹಿರಿಯ ಸದಸ್ಯರು. ಅವರು ಈ ರೀತಿ ಮಾಡಿದರೆ ಹೇಗೆ?

ಶ್ರೀ. ಆರಗ ಜ್ಞಾನೇಂದ್ರ : ಹಾಗಾದರೆ ಅವರಿಗೆ ಕೊಟ್ಟು ಬಿಡಿ.

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ವೈಜನಾಥ್ ಪಾಟೀಲರೆ, ಮಾತನಾಡಿ. 7–8 ನಿಮಿಷದಲ್ಲಿ ಮುಗಿಸಬೇಕು. ಎಲ್ಲರಿಗೂ ಅವಕಾಶವನ್ನು ಕೊಡುತ್ತೇನೆ. ಯಾರೂ ಮಾತನಾಡುತ್ತಿದ್ದೀರೋ, ಡಾ: ಅನ್ನದಾನಿಯವರೆ ಇವರನ್ನು ಕರೆದಿದ್ದೇನೆ. next ನಿಮಗೂ ಕೊಡುತ್ತೇನೆ.

ಶ್ರೀ. ಕೆ. ಅನ್ನದಾನಿ : ನಾವೇನೂ ಹೆಚ್ಚು ಮಾತನಾಡುವುದಿಲ್ಲ. 5 ನಿಮಿಷ ಮಾತನಾಡುತ್ತೇನೆ. ಮಂಡ್ಯ ಜಿಲ್ಲೆಯ 3 ತಾಲ್ಲೂಕಿನಲ್ಲಿ ಬರ ಬಂದಿದೆ. ನಾನೂ ನಿನ್ನೆ ಕೂಡ ಬರೆದು ಕೊಟ್ಟಿದ್ದೇನೆ.

ಅಧ್ಯಕ್ಷರು : ಆಯಿತು ಕೊಡುತ್ತೇನೆ. ಇವರು 5 ನಿಮಿಷ ಮಾತನಾಡಲಿ. ನಂತರ ನಿಮಗೆ ಕೊಡುತ್ತೇನೆ.

ಡಾ: ಕೆ ಅನ್ನದಾನಿ : ನಮಗೆ 5 ನಿಮಿಷ ಮೊದಲೇ ಕೊಡಿ.

ಅಧ್ಯಕ್ಷರು : ಇಲ್ಲಾ ಕರೆದುಬಿಟ್ಟಿದ್ದೇನೆ. ಕುಳಿತುಕೊಳ್ಳಿ. ಅನ್ನದಾನಿಯವರೆ, next ನಿಮಗೆ ಕೊಡುತ್ತೇನೆ. 5 ನಿಮಿಷದಲ್ಲಿ ಬೇಗ ಮುಗಿಸಿ ಬಿಡಿ.

ಶ್ರೀ. ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೆ, 1960-61 ರಲ್ಲಿ planning Department ನವರು ಪ್ರತಿ ವರ್ಷ development ranking ಏನು ಎನ್ನುವುದು report publish ಮಾಡುತ್ತಾ ಹೋದರು. ಇತ್ತೀಚೆಗೆ ಕೆಲವೊಂದು ವರ್ಷಕ್ಕೆ ಬಿಟ್ಟಿದ್ದಾರೆ. ಅದರಲ್ಲಿ ಆ indicators, development ranking ಏನಿವೆ ಅದು 20 ಜಿಲ್ಲೆಗಳಲ್ಲಿ ಇದ್ದವು. ಇದರಲ್ಲಿ ಎಲ್ಲಾಕ್ಕಿಂತ ಹಿಂದುಳಿದಿದ್ದವು, ಬೀದರ್ ಗುಲ್ಬರ್ಗಾ ರಾಯಚೂರು, ಬಳ್ಳಾರಿ ಈನಾಲ್ಕು ಜಿಲ್ಲೆಗಳು ಬರುತ್ತಿದ್ದವು. ಅಂದರೆ 20 ಜಿಲ್ಲೆಗಳಲ್ಲಿ 17,18,19,20 ಇವು contionuous ಬರುತ್ತಿದ್ದವು. ನಂತರ 28 ಜಿಲ್ಲೆಗಳು ಆದ ನಂತರ ಇವು ಬರುತ್ತಾ ಇದ್ದವು. ಅಂದರೆ ಕೊನೆಯ rank ದಲ್ಲಿ ಬರುತ್ತಿದ್ದವು. ಅಂದರೆ ಭಾಷಾವಾರು ಪ್ರಾಂತ ರಚನೆಯಾದ ಮೇಲೆ ಒಂದು ವರ್ಷ ಕೂಡ ಕೊನೆಯ ರ್‍ಯಾಂಕ್ ಬಿಟ್ಟು ಅವು ಮೇಲೆ ಬಂದೇ ಇಲ್ಲ. ಆ ದೃಷ್ಟಿಯಿಂದಲೇ ಈ ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಯಿತು. ಅದರ ಸಲುವಾಗಿ recommendation ಆಯಿತು. ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಒಂದು ಕಮಿಟಿ ಸ್ಥಾಪನೆಯಾಗಿತ್ತು. ಆ ರೆಕಮೆಂಡೇಶನ್ ಪ್ರಕಾರ, ಮಾನ್ಯ ರಾಮಕೃಷ್ಣ ಹೆಗಡೆಯವರು ಮಂತ್ರಿಮಂಡಲದಲ್ಲಿ ನಾನು ಸಚಿವನಾಗಿದ್ದಾಗ ಮಂತ್ರಿಮಂಡಳಕ್ಕೆ ರಾಜೀನಾಮೆ ಕೊಟ್ಟಿದ್ದೆ. ಪುನ: ಬೋರ್ಡ್ ಆಯಿತು. ಆದರೆ ಆ ಬೋರ್ಡ್‌ಗೆ ಸರಿಯಾಗಿ ಹಣವನ್ನು ಕೊಟ್ಟಿಲ್ಲ. ಸರಿಯಾಗಿ ಡೆವಲಪ್‌ಮೆಂಟ್ ಏನು ಆಗಬೇಕು ಅದು ಆಗಿಲ್ಲ ಇಲ್ಲಿಯತನಕ ಆಗುತ್ತಿಲ್ಲ. ಇಂಬ್ಯಾಲೆನ್ಸ್ ಕಡಿಮೆ ಮಾಡಬೇಕಾದರೆ ಹಿಂದುಳಿದ ಪ್ರದೇಶ ಹಾಗೂ ಹಿಂದುಳಿದ ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚಿನ ಅನುದಾನ, ಹೆಚ್ಚಿನ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಅವುಗಳನ್ನು ಇವತ್ತಿನತನಕ ಕೊಟ್ಟಿಲ್ಲ. ಶಿಕ್ಷಣದಲ್ಲಿಯಾಗಲಿ, ಸರ್ಕಾರಿ ನೌಕರಿಯಲ್ಲಿಯಾಗಲಿ, ಇವೆಲ್ಲಾ ಇವತ್ತು ಕೇಂದ್ರಿಕೃತವಾಗಿವೆ. ಆಂಧ್ರಪ್ರದೇಶದಲ್ಲಿ, ಇದೇ ತರಹ ಆಗಿದ್ದರಿಂದ ಪ್ರತ್ಯೇಕ ರಾಜ್ಯ ಚಳುವಳಿಯಾಯಿತು. ಕೊನೆಗೆ ಸುಪ್ರೀಂಕೋರ್ಟ್ ಕೂಡ ಅದಕ್ಕೆ ಮಾನ್ಯತೆಯನ್ನು ಕೊಟ್ಟು ಅಲ್ಲಿ ಸಂವಿಧಾನ ತಿದ್ದುಪಡಿ ಮಾಡಬೇಕಾಯಿತು. ಹೈದರಾಬಾದ್ ಒಂದು ನಿಜಾಮರ ರಾಜ್ಯ, 16 ಜಿಲ್ಲೆಗಳ ರಾಜ್ಯ. 8 ಜಿಲ್ಲೆಗಳು ತೆಲಂಗಾಣವೆಂದು ಏನು ಕರೆಯುತ್ತಿದ್ದೆವು, ಅವು ಆಂಧ್ರಕ್ಕೆ ಹೋದವು 8 ಜಿಲ್ಲೆಗಳು ಮರಾಠವಾಡ ಎಂದು ಕರೆಯುತ್ತಿದ್ದೆವು ಅವು ಮಹಾರಾಷ್ಟ್ರಕ್ಕೆ ಹೋದವು. 3 ಜಿಲ್ಲೆಗಳು ಇವತ್ತು ಅವು 4 ಜಿಲ್ಲೆಗಳಾಗಿವೆ. ಇವು ಕರ್ನಾಟಕಕ್ಕೆ ಬಂದವು. ಅಲ್ಲಿ ಯಾವ ಪ್ರಕಾರ ಸವಲತ್ತುಗಳು ಕೊಟ್ಟರು ಆ ಪ್ರಕಾರ ನಮ್ಮಲ್ಲಿ ಕೊಡಲಿಲ್ಲ. ಅದನ್ನು ಹೈದ್ರಾಬಾದ್ ಸ್ಟೇಟ್‌ಗೆ ಕೊಟ್ಟರು. ಏಕೆಂದರೆ ಹಿಂದುಳಿದ ಪ್ರದೇಶ ಅದಕ್ಕೆ ಐತಿಹಾಸಿಕ ಕಾರಣವಿತ್ತು. ಮಹಾರಾಷ್ಟ್ರಕ್ಕೆ 1960 ರಲ್ಲಿ 371 ರ Article ದಲ್ಲಿ ಮರಾಠವಾಡ ಸೇರಿಸಿಕೊಂಡರು. 1973 ರಲ್ಲಿ ಆಂಧ್ರಪ್ರದೇಶದಲ್ಲಿ ತೆಲಂಗಾಣ ಪ್ರದೇಶವನ್ನು ಅದಕ್ಕೆ ಆರ್ಟಿಕಲ್ 371ರ ಪ್ರಕಾರ ಸೇರಿಸಿಕೊಂಡರು. ಅದೇ ಹೈದ್ರಾಬಾದ್ ರಾಜ್ಯಕ್ಕೆ ಬಂದಂಥ ಹೈದ್ರಾಬಾದ್ ಜಿಲ್ಲೆಗಳನ್ನು

ಸೇರಿಸಿಕೊಂಡಿಲ್ಲ. ಅದರ ಸಲುವಾಗಿ ಕೇಳುತ್ತಿದ್ದೇವೆ. ಸೇರಿಸಿಕೊಳ್ಳಿ ಎಂದರೆ ಉದ್ದೇಶಪೂರ್ವಕವಲ್ಲ. Development Ranking ನೋಡಿದರೆ 1956 ರಲ್ಲಿ ಏನಿತ್ತು, ಅದೇ Ranking ಇವತ್ತೂ ಕೂಡ ಇದೆ. ಶಿಕ್ಷಣ ಕ್ಷೇತ್ರದಲ್ಲಿಯಾಗಲಿ, Industrial development ದಲ್ಲಿಯಾಗಲಿ, Irrigation development ದಲ್ಲಿಯಾಗಲಿ ಸರ್ಕಾರಿ ನೌಕರಿಯಲ್ಲಿ ತೆಗೆದುಕೊಳ್ಳಲಿ ಅದರ ಬಗ್ಗೆ ಸರ್ಕಾರಿ ರಿಪೋರ್ಟ್‌ಗಳು ಇವೆ. ರಾಜ್ಯಮಟ್ಟದಲ್ಲಿ ಸೆಕ್ರೆಟರಿಯೇಟ್‌ನಲ್ಲಿ selection ಆಗುತ್ತವೆ. ಅಲ್ಲಿ ಹೆಚ್ಚಿಗೆ ಬೆಂಗಳೂರು ಹಾಗೂ ಮೈಸೂರು ಕಡೆಯವರು selection 70% ಅಲ್ಲಿಯವರು ಆಗುತ್ತಾರೆ. ಉಳಿದ 30% ಬಾಂಬೈ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕದವರು ಆಗುತ್ತದೆ. even 30% ನೂ ಆಗುವುದಿಲ್ಲ. ರಾಜ್ಯಮಟ್ಟದಲ್ಲಿ ಹಾಗೆ ಆಗುತ್ತವೆಂದು ನಡೆಯುತ್ತದೆ. ಆದರೆ ಜಿಲ್ಲಾ ಮಟ್ಟದಲ್ಲಿ ಕೂಡ ಇತ್ತಿಚೇಗೆ direct recruitment ಎಂದು ಮಾಡುತ್ತಿದ್ದಾರೆ. 2000 ಇಸವಿ ಈಚೆಗೆ ಸರ್ಕಾರ ಒಂದು Circular ತಂದಿತ್ತು ಸರ್ಕಾರ employment office ಅವಶ್ಯಕತೆ ಇಲ್ಲ. ಯಾವುದೇ ಜಿಲ್ಲೆಯಲ್ಲಿ ನೌಕರಿ ಬೇಕಾಯಿತು ಎಂದರೆ ಪೇಪರ್‌ನಲ್ಲಿ advertisement ಕೊಡಬೇಕು. ಅಲ್ಲಿರುವುದರ ಬಗ್ಗೆ ಅಪ್ಲಿಕೇಷನ್ ಹಾಕಬೇಕು. ರಾಜ್ಯಮಟ್ಟದಲ್ಲಿ ಅವರ ranking ಏನು ಇದೆ, ಅದರ ಪ್ರಕಾರ, election ಆಗಬೇಕು. ಇದು ಪದ್ದತಿ ಬಂದಿದ್ದರ ಸಲುವಾಗಿ ಗುಲ್ಬರ್ಗಾ division ದಲ್ಲಿ ಬಂದಿದ್ದರಿಂದ ಹೈಸ್ಕೂಲ್ teachers selection ಆಗಬೇಕಾಗಿತ್ತು 2000 ನೇ ಇಸ್ವಿಯಲ್ಲಿ 600 ಜನ High school teacher selection ಆದಾಗ ಆಗ ನಾಲ್ಕು ಜಿಲ್ಲೆಯವರು ಹೈದ್ರಾಬಾದ್-ಕರ್ನಾಟಕ ಅಂದರೆ ಗುಲ್ಬರ್ಗಾ division ನದ್ದು ಬಳ್ಳಾರಿಗೆ ಹಿಡಿದುಕೊಂಡರು. ಅಲ್ಲಿಯವರು 197 ಉಳಿದ 493 ಇವರು ಎಲ್ಲರೂ ಬೇರೆ ಕಡೆಯಿಂದ ಬಂದವರು. 494 ಅಥವಾ 493 ಇವು ಬೇರೆ ಕಡೆಯಿಂದ ಬಂದವು. ಅದರ ಸಲುವಾಗಿ ಅವರು ಹೋರಾಟವನ್ನು ಶುರು ಮಾಡಿದರು. ಈ ಪದ್ಧತಿಯನ್ನು ಬೇಗ ಬದಲಾವಣೆ ಮಾಡಿ. ಅದನ್ನು ಮಾಡಲಿಕ್ಕೆ ತಯಾರಾಗಿಲ್ಲ. ಈಗ ಪ್ರತಿ ವರ್ಷ ಪ್ರೈಮರಿ ಸ್ಕೂಲ್ಸ್ ಟೀಚರ್ಸ್ ಸೆಲೆಕ್ಷನ್‌ಗೆ ಬೇರೆ ಕಡೆಯಿಂದ ಬಂದು ಅಲ್ಲಿ ಆಗುತ್ತಾರೆ. ಸ್ಟೇಟ್ ಲೆವೆಲ್ ಮೆರಿಟ್ ಮೇಲೆ ಕೌನ್ಸಲಿಂಗ್ ಆಗಿ ಟೀಚರ್ಸ್ ಸೆಲೆಕ್ಟ್ ಆಗಿ ಅಲ್ಲಿಗೆ ಬರುತ್ತಾರೆ. ಸೆಲೆಕ್ಟ್ ಆದ ಮೇಲೆ ಅವರು ಟ್ರಾನ್ಸ್‌ಫರ್ ಮಾಡಿಕೊಂಡು ಹೋಗುತ್ತಾರೆ. ಪ್ರೈಮರಿ ಸ್ಕೂಲ್ಸ್‌ನಲ್ಲಿ ಟೀಚರ್ಸ್ ಇಲ್ಲದೆ ಪ್ರೈಮರಿ ಎಜ್ಯುಕೇಷನ್ ಈ ರೀತಿ ಹಾಳಾಯಿತೆಂದು ಮುಂದೆ ಅವರು ಹೇಗೆ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ನಲ್ಲಿ ಹೇಗೆ ಮಾರ್ಕ್ಸ್ ತೆಗೆಯಬಹುದು? ಇದೇ ಸ್ಟೇಟ್ ಲೆವೆಲ್ ರ್‍ಯಾಂಕಿಂಗ್ ಮೆರಿಟ್ ಮೇಲೆ ಮಾಡಿದರೆ ನಮ್ಮಲ್ಲಿ ಜ್ಯೂನಿಯರ್ ಕಾಲೇಜುಗಳಿಗೆ ಬೇರೆ ಕಡೆಯಿಂದ ಬರುವ ಲೆಕ್ಚರರ್ಸ್, ಪ್ರಿನ್ಸಿಪಾಲರು ಬಂದು ಟ್ರಾನ್ಸ್‌ಫರ್ ಮಾಡಿಕೊಂಡು ಹೋಗುವುದು. ಅಲ್ಲಿ ಪಿ.ಯು.ಸಿ ಜ್ಯೂನಿಯರ್ ಕಾಲೇಜು ನಮ್ಮ ಚಿಂಚೋಳಿಯಲ್ಲಿ ಬಂದ್ ಆಗಿದೆ. ಅದು ಸರ್ಕಾರಿ ಕಾಲೇಜು, ನಾನು ಪ್ರಿನ್ಸಿಪಾಲರಿಗೆ ಕೇಳಿದೆ, ಅದರಲಿ ಸ್ಟೂಡೆಂಟ್ಸ್ ಇಲ್ಲ. ಸ್ಟೂಡೆಂಟ್ಸ್ ಏಕೆ ಇಲ್ಲವೆಂದರೆ ಲೆಕ್ಚರರ್ಸ್ ಇಲ್ಲ. ಏಕೆಂದರೆ ಒಬ್ಬರು ದಾವಣಗೆರೆ, ಚಿತ್ರದುರ್ಗದಿಂದ ಬಂದಿರುವವರು ಮ್ಯಾಥ್‌ಮ್ಯಾಟಿಕ್ಸ್,

ಫಿಸಿಕ್ಸ್, ಕೆಮಿಸ್ಟ್ರಿ ಈ ಸಬ್ಜೆಕ್ಟ್‌ಗಳ ಲೆಕ್ಚರರ್ಸ್ ಬೇರೆ ಕಡೆಯಿಂದ ಬಂದಿದ್ದರು ಅವರು ಟ್ರಾನ್ಸ್‌ಫರ್ ಮಾಡಿಕೊಂಡು ಹೋದರು. ಅಲ್ಲಿ ಕಲಿಸುವವರೇ ಇಲ್ಲ. ಅದರ ಸಲುವಾಗಿ ಕೆಲವು ಶ್ರೀಮಂತ ಹುಡುಗರು ಎಸ್.ವಿ. ಪ್ರೈವೇಟ್ ಕಾಲೇಜು ಗುಲಬರ್ಗಾಕ್ಕೆ ಹೋದರು. ಉಳಿದವರೆಲ್ಲಾ Artsಗೆ ಹೋದರು, ಎಂದು ಹೀಗೆ ಹೇಳಿದರು. ಇದನ್ನು ತಡೆಯಲಿಕ್ಕೆ ನಾವು ಸರಕಾರಕ್ಕೆ ಕೇಳಿಕೊಂಡಾಗ "ಇಲ್ಲ, Article 371 ಕ್ಕೆ ಅಮೆಂಡ್‌ಮೆಂಟ್ ಮಾಡಿದರೆ ಬರುತ್ತದೆ ಇಲ್ಲದೇ ಹೋದರೆ ಬರುವುದಿಲ್ಲ" ಎಂದು ಅದೇ ತರಹ ನಡೆದವು. ಕೊನೆಗೆ ಬೇಸತ್ತು ವಿದ್ಯಾರ್ಥಿ ಸಮಿತಿಯವರು ಹೈದರಾಬಾದ್ ಕರ್ನಾಟಕದ ಹೋರಾಟ ಸಮಿತಿಯವರು ಆಂಧೋಲನ ಶುರು ಮಾಡಿ ಕೊನೆಗೆ ಪ್ರತ್ಯೇಕ ರಾಜ್ಯ ಕೇಳುತ್ತೇವೆಂದರು. ಪ್ರತ್ಯೇಕ ಮೆರಿಟ್, ಪ್ರತ್ಯೇಕ ಪಿ.ಯು.ಸಿ ಬೋರ್ಡ್ ತಾನೇ ಆಗುತ್ತದೆ. ಹೈಕೋರ್ಟ್ ಪೀಠ ಅಲ್ಲ. ಈ ತರಹದ ಒಂದು argument ಆಯಿತು. ಆಗ ಸರ್ಕಾರದವರು ಈ ನಂಜುಂಡಪ್ಪ ಕಮಿಟಿ ಕೂಡಿ ಹೈಪವರ್ ಕಮಿಟಿ ಅಲ್ಲಿಂದ ಶುರು ಆಯಿತು. ಒಂದು ಕಡೆ ಹೈಪವರ್ ಕಮಿಟಿ ಕೊಡುವುದು, ಮತ್ತೊಂದು ಕಡೆ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ All party delegation ಹೋಯಿತು. ಅಮೆಂಡ್‌ಮೆಂಟ್ ಆಗಬೇಕೆಂದು ಪ್ರತಿ ವರ್ಷ ಹೇಳುತ್ತಾರೆ. ಆಗಿನ ಗೃಹ ಮಂತ್ರಿಗಳಾಗಿದ್ದ ಮಾನ್ಯ ಎಲ್.ಕೆ. ಅದ್ವಾನಿಯವರೂ ಕೂಡ ಆ ಪ್ರಪೋಸಲ್ ರಿಜೆಕ್ಟ್ ಮಾಡಿ ಕಳುಹಿಸಿದರು. ಇಂದಿನ ಸರ್ಕಾರದ ಮಾನ್ಯ ಶಿವರಾಜ್ ಪಾಟೀಲರು ಕೂಡ ಅಮೆಂಡ್‌ಮೆಂಟ್ ಮಾಡುವುದನ್ನು ರಿಜೆಕ್ಟ್ ಮಾಡಿ ಕಳುಹಿಸಿದರು. ಬಿಹಾರದಲ್ಲಿ ಅಮೆಂಡ್‌ಮೆಂಟ್ ತಂದು ಜಾರ್ಖಂಡ್, ಛತ್ತೀಸ್‌ಗಢ ಪ್ರತ್ಯೇಕ ರಾಜ್ಯಗಳಾದವು. ಆದರೆ ಹಿಂದುಳಿದ ಪ್ರದೇಶಗಳಿಗೆ ಸವಲತ್ತುಗಳನ್ನು ಕೊಡಲಿಕ್ಕೆ ಅಮೆಂಡ್‌ಮೆಂಟ್ ಆಗುತ್ತಿಲ್ಲ. ಗೋವಾ, ನಾಗಾಲಾಂಡ್ ಬಹಳಷ್ಟು ರಾಜ್ಯಗಳಿಗೆ ಆಗಿವೆ, ಆದರೆ ನಾವೇನೂ ಹೊಸದಾಗಿ ಕೇಳುತ್ತಿಲ್ಲ. ಹೈದರಾಬಾದ್ ರಾಜ್ಯದಿಂದ ಒಡೆದು ಹೋದ ಭಾಗಗಳ ಸಲುವಾಗಿ ಆಯಿತು. ಅದೇ ಹೈದರಾಬಾದ್ ರಾಜ್ಯದಿಂದ ಒಡೆದು ಬಂದ ನಾವಿದ್ದೇವೆ ನಮಗೂ ಅದೇ ಸವಲತ್ತುಗಳನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಅದಕ್ಕೆ ತಯಾರಿಲ್ಲ. ಅದರ ನಂತರ ನಂಜುಂಡಪ್ಪ ಸಮಿತಿ ಪ್ರತ್ಯೇಕ ರಾಜ್ಯಗಳ ಹಿನ್ನೆಲೆಯಲ್ಲಿ ಸ್ಥಾಪನೆಯಾಯಿತು. ಈಗ ಅದು ಒಳ್ಳೆಯ ಸೈಂಟಿಫಿಕ್ ರಿಪೋರ್ಟ್ ಕೊಟ್ಟರು. ಬಹುಶ: ನಂಜುಂಡಪ್ಪ ಕಮಿಟಿ ಇಡೀ ದೇಶಕ್ಕೆ ಮಾದರಿಯಾಗಬಹುದು ಯಾವುದೇ ಪ್ರದೇಶಗಳಿಗೆ ಯಾವ ಪ್ರಕಾರ ಮುಂದಕ್ಕೆ ತರಬೇಕೆಂದು ನೋಡಿದರೆ ಯಾವುದೇ ರಾಜ್ಯಕ್ಕೂ ಅಪ್ಲೈ ಆಗುತ್ತದೆ. ಅದಕ್ಕೆ ಒಂದು ಇಂಡಿಕೇಟರ್ಸ್ ಮಾಡಿದರು. ಒಂದು ತಾಲ್ಲೂಕನ್ನು ಒಂದು ಯುನಿಟ್ ಅದನ್ನು ಇಡೀ ರಾಜ್ಯಕ್ಕೆ ತೆಗೆದುಕೊಂಡಿದ್ದಾರೆ. ಒಂದು ತಾಲ್ಲೂಕಿನಲ್ಲಿ ಜನಸಂಖ್ಯೆ ಎಷ್ಟು? ಅಲ್ಲಿ ಕುಡಿಯುವ ನೀರಿನ ಯೋಜನೆಯೆಷ್ಟು? ಅಲ್ಲಿ ಕುಡಿಯುವ ನೀರಿನ ಯೋಜನೆಗಳು ಎಲ್ಲೆಲ್ಲಿವೆ? ಶಾಲೆಗಳು ಎಷ್ಟು ಇವೆ? ಹೈಸ್ಕೂಲ್‌ಗಳು ಎಷ್ಟು? ದವಾಖಾನೆಗಳು ಎಷ್ಟು? ಲಿಟರೇಟ್ ಎಷ್ಟು? ಇಲ್ಲಿಟರೇಟ್ ಎಷ್ಟು? ಇದರ ಮೇಲೆ ಎಲ್ಲಾ ತಾಲ್ಲೂಕುಗಳ ಈ ಪದ್ಧತಿಯನ್ನು ಅಳವಡಿಸಿಕೊಂಡಿದೆ. ಅದರ ನಂತರ ಅದನ್ನು ಮುಂದೆ ತರಲಿಕ್ಕೆ ಏನು ಮಾಡಬೇಕು. ಅದನ್ನು

ಸಲಹೆ ಕೊಟ್ಟಿದ್ದಾರೆ. ರೂರಲ್ ಡೆವಲಪ್‌ಮೆಂಟ್ ಸಲುವಾಗಿ 16,000 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಪ್ರತಿ ವರ್ಷ ಎರಡುಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಅದು ಕೇವಲ ಹೈದರಾಬಾದ್ ಕರ್ನಾಟಕ ಅಲ್ಲ, ಸ್ವಲ್ಪ ಹೆಚ್ಚಿಗೆ ಇರಬಹುದು. ಇಡೀ ರಾಜ್ಯದ ಎಲ್ಲಾ ಹಿಂದುಳಿದ ತಾಲ್ಲೂಕುಗಳಿಗೂ ಸೈಂಟಿಫಿಕ್ ಆಗಿ ಇದೆ. ಆದರೆ ಈ ತನಕ ಅದು ರಿಪೋರ್ಟ್‌ಗೆ ಒಪ್ಪಿಕೊಂಡಿಲ್ಲ., ಸರ್ಕಾರಿ ನೌಕರಿಯಲ್ಲಿ ಸಿಂಹದಪಾಲು ಬೆಂಗಳೂರು, ಮೈಸೂರು ಆ ಕಡೆಯದ್ದು, ಬರೇ ಅಲ್ಲೇ ಅಲ್ಲ, ಎಲ್ಲಾ ಜಿಲ್ಲೆಗಳಿಂದಲೂ ಬರುತ್ತಿವೆ. ತಾಸಿಗೊಂದು ಬರುತ್ತದೆ.

ಶ್ರೀ ಬಿ.ಆರ್ ಪಾಟೀಲ್ (ಆಳಂದ) : ಈಗ 2ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೆನ್ನುವುದು ಏನಾಗಿತ್ತು ಅದಕ್ಕೆ ಕೊಡುತ್ತಿರುವುದು ಬರೇ ರೂ 400–450 ಕೋಟಿ ರೂ ಇಷ್ಟೇ. ಹಾಗಾಗಿ ಈ ಬ್ಯಾಕ್‌ಲಾಗ್ ಇನ್ನೂ ಜಾಸ್ತಿಯೇ ಆಗುತ್ತಾ ಹೋಗುತ್ತದೆ. ವರದಿಯಲ್ಲಿ 8 ವರ್ಷಗಳವರೆಗೆ ಅಭಿವೃದ್ಧಿಪಡಿಸಬೇಕೆಂದು ಏನು ವರದಿ ಹೇಳಿದೆ. 16 ಸಾವಿರ ಕೋಟಿ ರೂಪಾಯಿ. ಹಾಗಾಗಿ ಬ್ಯಾಕ್‌ಲಾಗ್ ಇನ್ನೂ ಜಾಸ್ತಿ ಉಳಿಯುತ್ತದೆ. ಇದರ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕು.

ಶ್ರೀ ವೈಜನಾಥ್ ಪಾಟೀಲ್ : 2002 ರಲ್ಲಿ ರಿಪೋರ್ಟ್ ಸಬ್ಮಿಟ್ ಮಾಡಿದ್ದರೂ ಇವತ್ತಿನವರೆಗೆ ಅದನ್ನು ಸರ್ಕಾರ accept ಮಾಡಿಲ್ಲ. ನಂಜುಂಡಪ್ಪನವರು ಜೀವಂತವಿರುವಾಗಲೇ ಅವರನ್ನು ನಾನು ಭೇಟಿಯಾಗಿದ್ದೆ. ಅವರು ಹದಿನಾರು ಸಾವಿರ ಕೋಟಿ ರೂಪಾಯಿಗಳನ್ನು ಹೇಗೆ ಎಲ್ಲಿಂದ ತೆಗೆಯಬೇಕೆಂದು ನನ್ನನ್ನು ಕರೆಸಿ ಕೇಳಿದರೆ ನಾನು ಸಲಹೆ ಕೊಡುತ್ತೇನೆ. ಆದರೆ ಅದನ್ನು ಕೇಳಲಿಕ್ಕೆ ತಯಾರಿಲ್ಲ ಅಂದರು. ಒಂದು ಸಲ ಕಮಿಷನರ್ ರಿಪೋರ್ಟ್ ಅನ್ನು ಆಂಧ್ರ ಮಾದರಿಯಲ್ಲಿ ಆರ್ಟಿಕಲ್ 371 ಅನ್ನು ತರಬೇಕೆಂದು ಅದರಲ್ಲಿ ಅವರು ಕೇಳಿದ್ದಾರೆ. ನಂಜುಂಡಪ್ಪನವರು ಇವತ್ತು ಜೀವಂತವಿಲ್ಲ. ಆದರೆ ಬೇರೆ ಸದಸ್ಯರು experts, economists ಇದ್ದಾರೆ, ಅಂತಹವರನ್ನು ಕರೆಸಿ ಕೇಳಬೇಕು. ಆ ಸೌಜನ್ಯತೆ ಈ ಸರ್ಕಾರದೊಳಗೆ ಇಲ್ಲ. ಸುಮ್ಮನೆ ರಿಪೋರ್ಟ್ ಬರುತ್ತದೆ. ಹಾಗೆ ಬಿದ್ದುಹೋಗುತ್ತದೆ, ಅದನ್ನು ಕರೆಸಿ ಕೇಳಿ ಸಲಹೆ ತೆಗೆದುಕೊಂಡು 16,000 ಕೋಟಿ ರೂಪಾಯಿಗಳನ್ನು ತೆಗೆಯುವುದು ಬಹಳ ದೊಡ್ಡ ಮಾತಲ್ಲ ಎನ್ನುತ್ತಾರೆ. ಆದರೆ ಸರ್ಕಾರದವರು ಆ ಕಡೆ ಲಕ್ಷ್ಯ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಕೊಟ್ಟರೆ ಬಹುಶ: ಸಲಹೆ ಕೊಡಬಹುದು ಇದು ಒಂದು ಭಾಗ. ಈಗ ಈ ಪಕ್ಷಪಾತ ಪೂರ್ಣ ಧೋರಣೆಗಳನ್ನು ಕೈಬಿಡಬೇಕು, ಏಕೆಂದರೆ ಬಹಳಷ್ಟು ಜನ ಈಗ ಅಧಿಕಾರದಲ್ಲಿರುವವರು ಅಥವಾ ದೊಡ್ಡ ಪೊಸಿಷನ್‌ನಲ್ಲಿರುವವರು ಯಾವಾಗಲೂ ಏನು ಮಾಡುತ್ತಾರೆ. ಆ ಪಕ್ಷ ಈ ಪಕ್ಷ, ಅವರು ಇವರು ಎಂದಲ್ಲ, ಹುಬ್ಬಳ್ಳಿಯಲ್ಲಿ ಒಂದು ರೈಲ್ವೆ ವಲಯವಾಗಿತ್ತು. ಅಲ್ಲಿಯವರೆಗೆ ಎಂಪ್ಲಾಯ್‌ಮೆಂಟ್ ಸಿಕ್ಕಿತು. ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್ ಕೇಸ್ ಹಾಕಿ ಅದನ್ನು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿದರು. ಹೋದ ವರ್ಷ ಹಾರ್ಟಿಕಲ್ಚರ್ ಸಲುವಾಗಿ ಒಂದು ಸಾವಿರ ಕೋಟಿ ರೂ.ಗಳನ್ನು ಏಷ್ಯನ್ ಬ್ಯಾಂಕ್ ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ಹಾರ್ಟಿಕಲ್ಚರ್ ಡೆವಲಪ್ಮೆಂಟ್ ಮಿಷನ್ ಎಂದು ಕೊಟ್ಟರು ಅದರಲ್ಲಿ

ಉತ್ತರಕರ್ನಾಟಕದಲ್ಲಿ ಒಂದು ಜಿಲ್ಲೆ ತೆಗೆದುಕೊಂಡಿಲ್ಲ. ಕೊನೆಗೆ ಅದಕ್ಕೆ ಎಲ್ಲಾ ಸದಸ್ಯರು ಹೋಗಿ ಜಗಳವಾಡಬೇಕಾಯಿತು. ಕಾರಜೋಳರವರು ಬಂದು ಅವತ್ತು ಚೀಫ್ ಮಿನಿಸ್ಟರ್ ಹತ್ತಿರ ಬಂದು ನಾವು ಉತ್ತರಕರ್ನಾಟಕದವರು ಪ್ರತ್ಯೇಕವಾಗಿ ಕೇಳಬೇಕಾಗುತ್ತದೆಂದು ಕೇಳಿದರು. ಎಲ್ಲೋ ಪ್ರಭಾವ ಬೀರಿ ದಿಲ್ಲಿ ರಾಜಕಾರಣ ಮಾಡುವುದು, ಒಂದು ಜಿಲ್ಲೆಗೆ ಇದ್ದಿಲ್ಲ, ನಂತರ ಮತ್ತೆ ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿದರು. ಈ ಹೈದರಾಬಾದ್ ಕರ್ನಾಟಕ ಅನೇಕ ಜ್ಯೂನಿಯರ್ ಕಾಲೇಜುಗಳನ್ನು ಹಳೆ ಮೈಸೂರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ, ಅದು ಈಗ ಹೇಳುವುದಿಲ್ಲ, ಶಿಕ್ಷಕರಿಗೆ ವರ್ಗಾವಣೆಯಾದರೆ ವಿದ್ಯಾರ್ಥಿಗಳು ಇರುವುದಿಲ್ಲ. ವಿದ್ಯಾರ್ಥಿಗಳೂ ಇಲ್ಲವೆಂದು ರಿಪೋರ್ಟ್ ಹೋಗುತ್ತದೆ. ಅಲ್ಲಿ ವಿದ್ಯಾರ್ಥಿಗಳೂ ಇರುವುದಿಲ್ಲವೆಂದು ಮಂಡ್ಯ ಮೈಸೂರಿಗೆ ವರ್ಗಾವಣೆ ಮಾಡುತ್ತಾರೆ. ಇದೆಲ್ಲಾ ಬಂದ್ ಆಗಬೇಕಾಗಿದೆ. ಅದೇರೀತಿ ಈಗ ರೈಲ್ವೇ ವಲಯದಲ್ಲಿ ತೆಗೆದುಕೊಂಡರೆ ಬೀದರ್‌ನಿಂದ ಗುಲಬರ್ಗಾ ತನಕ ಒಂದು ರೈಲ್ವೆ ವಲಯವಾಗುವುದಿಲ್ಲ. ಬೀದರ್, ಗುಲಬರ್ಗಾ, ಈ ಕಡೆ ಬಿಜಾಪುರ ಹುಬ್ಬಳ್ಳಿ, ಇದು ಒಂದು ಲೈನ್ ಆದರೂ ಉತ್ತರ ಕರ್ನಾಟಕದ ಎಲ್ಲಾ ಜನ ಬಹಳ ಸುಲಭವಾಗಿ ಬರಬಹುದು. ಇವತ್ತು ಬೆಳಗಾವಿಗೆ ಬರಬೇಕಾದರೆ ಕಾರು, ಬಸ್ಸಿನಲ್ಲಿ ಬರಬೇಕು. ಇಲ್ಲದೇ ಹೋದರೆ ಗುಂತಕಲ್ಲಿಗೆ ಹೋಗಿ ರೈಲು ಚೇಂಜ್ ಮಾಡಿ ಬರಬೇಕು. ಅದರ ಸಲುವಾಗಿ ಎಷ್ಟೋ ಸಲ ಹುಬ್ಬಳ್ಳಿಗೆ ಹೈಕೋರ್ಟ್ ಪೀಠ ಆಗಬೇಕೆಂದರೆ ಹುಬ್ಬಳ್ಳಿಗೆ ಏಕೆ, ಬೆಂಗಳೂರಿನಲ್ಲಿ ಇರಲಿ ಎಂದು ನಮ್ಮಲ್ಲಿ ಹೇಳುತ್ತಾರೆ. ಆದರೆ ಗುಲಬರ್ಗಕ್ಕೆ ಆಗಲಿ ಬಹಶ: ಇದರ ಹಿಂದೆ ಕಾನ್ಸ್‌ಫರೆನ್ಸಿ ಇದೆಯೋ ಏನೋ? ಉತ್ತರ ಕರ್ನಾಟದವರು ಒಂದಾಗಬಾರದು, ಇವರು ಅವರು ಜಗಳವಾಡುತ್ತಿರಬೇಕು. ಅಲ್ಲಿ ಮೆಟ್ರೋ ರೈಲು ಆಗುತ್ತದೆ. ಹಾಸನ ಮಂಗಳೂರು ಲೈನ್, ಹೈವೇಸ್ ಆಗುತ್ತದೆ. ಬೆಂಗಳೂರು ಮೈಸೂರು ಕಾರಿಡಾರ್ ಆಗುತ್ತದೆ. ಒಳ್ಳೆಯ ರೈಲ್ವೇ ಸವಲತ್ತು ಇದೆ. ಈಗ ಬೆಂಗಳೂರಿನಿಂದ ಚೆನ್ನೈಗೆ ಒಂದು ಬುಲ್ಲೆಟ್ ಟ್ರೈನ್ ಹಾಕುವವರಿದ್ದಾರಂತೆ. ಇವಕೆಲ್ಲಾ ಎಷ್ಟೋ ಸಾವಿರ ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಬೀದರ್ ಗುಲಬರ್ಗಾದಲ್ಲಿ ನೂರಾರು ಕೋಟಿ ರೂ.ಗಳ ಕೆಲಸವಿದೆ. ಅದು ಲ್ಯಾಂಡ್ ಅಕ್ವಿಸಿಷನ್‌ಗೆ ರೊಕ್ಕ ಸಾಕಾಗುವುದಿಲ್ಲವೆಂದು, ರಾಜ್ಯಸರ್ಕಾರದವರು ಲ್ಯಾಂಡ್ ಅಕ್ವೈರ್ ಮಾಡುವುದಿಲ್ಲವೆಂದು ಹೇಳುತ್ತಾರೆ. ಬಿಜಾಪುರದಿಂದ ಹುಬ್ಬಳ್ಳಿ ಗದಗ ತನಕ ರೈಲು ಬಂದರೆ ಇಡೀ ಉತ್ತರ ಕರ್ನಾಟಕದಲ್ಲಿ, ಬೀದರ್‌ನಿಂದ ಬೆಳಗಾವಿಯ ತನಕ ಎಲ್ಲರೂ ಸುಲಭವಾಗಿ ಪ್ರಯಾಣ ಮಾಡಬಹುದು. ಇದರ ಬಗ್ಗೆ ನಾವು ಒಂದಾಗಿ ವಿಚಾರ ಮಾಡಬಹುದು. ಅಂತಹ ಅವಕಾಶವನ್ನು ಇವತ್ತು ಕೊಡುತ್ತಿಲ್ಲ. ಈ ಜಿಲ್ಲಾ ಮಟ್ಟದ ವಿಭಾಗ ಮಟ್ಟದ ನೇಮಕಾತಿಯನ್ನು ರಾಜ್ಯ ಮಟ್ಟದಲ್ಲಿ ಪರಿವರ್ತಿಸಲಾಗಿದೆ. ಮೊದಲು ಜಿಲ್ಲಾ ಮಟ್ಟದಲ್ಲಿ, ಡಿವಿಷನ್ ಮಟ್ಟದಲ್ಲಿ ಆಗುತ್ತಿದ್ದನ್ನು ತೆಗೆಯುವುದು, ಜಿಲ್ಲಾ ಮಟ್ಟದಲ್ಲಿ ಆದರೆ ಬಹಳಷ್ಟು ಲೋಕಲ್ಸ್‌ಗೆ ಪ್ರಾಫಿಟ್ ಆಗುತ್ತದೆ. ಡಿವಿಷನಲ್‌ನಲ್ಲಾದರೆ ಲೋಕಲ್ ಎಂಪ್ಲಾಯ್‌ಮೆಂಟ್ ಸಿಗುತ್ತದೆ, ನಮ್ಮ ಕಡೆ ಜನರಿಗೆ ಅಲ್ಲಿ ಹೋಗಿ ರಾಜ್ಯ ಮಾಡಲಿಕ್ಕೆ ಬರುವುದಿಲ್ಲ ಎಂದು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಪ್ರತಿಯೊಂದಕ್ಕೂ ಈ ರೀತಿ ಯಾರದೋ ತಪ್ಪಿನಿಂದ ಆಗಿದೆ. ಪ್ರತಿಯೊಂದಕ್ಕೂ Article 371 ಬರುತ್ತದೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಅಧ್ಯಯನ ಮಾಡಲಿಕ್ಕೆ ತಯಾರಿಲ್ಲ.

ಅಧ್ಯಕ್ಷರು : ಪಾಟೀಲರೇ, 17 ನಿಮಿಷ ಆಯಿತು, ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಅಧ್ಯಕ್ಷರು : ಹಿರಿಯ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬಾರದು. ಬಹಳ ವಿಷಯವಿದೆಯೆಂದು ಮಾತನಾಡುತ್ತಲೇ ಇರುತ್ತಾರೆ.

ಶ್ರೀ ವೈಜನಾಥ್‌ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಈ ಮೊದಲು ಎರಡೂ ಕಾರ್ಪೊರೇಷನ್‌ಗಳಿದ್ದವು. ಒಂದು ಕೃಷ್ಣ ಇರಿಗೇಷನ್ ಕಾರ್ಪೊರೇಷನ್, ಇನ್ನೊಂದು ಕಾವೇರಿ ಇರಿಗೇಷನ್ ಕಾಪೊರೇಷನ್. ಕಾವೇರಿ ಇರಿಗೇಷನ್ ಕಾರ್ಪೊರೇಷನ್ ಇಲ್ಲಿ ಎಲ್ಲಾ ಇಂಜಿನಿಯರ್ಸ್ ಅದೇ ಭಾಗದವರು ಇರಬೇಕು ನ್ಯಾಯ. ಅಲ್ಲಿಯವರನ್ನೇ ತೆಗೆದುಕೊಂಡಿದ್ದಾರೆ. ಈ ಕೃಷ್ಣಾ ಇರಿಗೇಷನ್ ಕಾರ್ಪೊರೇಷನ್ ಏನು ಬೋರ್ಡ್ ಇತ್ತು ಅದು ಬಿಜಾಪುರದಲ್ಲಿ ಇತ್ತು, ಆ ದೃಷ್ಟಿಯಿಂದ ಆ ಭಾಗದಲ್ಲಿರುವ ಗುಲಬರ್ಗಾ, ಬಿಜಾಪುರ ಈ ಭಾಗದವರಿಗೆ ಹೆಚ್ಚಿನವರು ಇದ್ದರು. ದುರ್ದೈವ. ಅದಕ್ಕೆ ರೆಕಾರ್ಡ್ಸ್ ಇವೆ, ರಿಪೋರ್ಟ್ಸ್ ಇವೆ, ಅದರಲ್ಲೂ ಕೂಡ ಮೆಜಾರಿಟಿ ಹಾಸನ ಮತ್ತು ಹೊಳೇನರಸೀಪುರದವರೇ, ನೀವು ರಿಪೋರ್ಟ್ ತೆಗೆದುಕೊಂಡು ನೋಡಿ. Imbalance ಹೆಚ್ಚಾಗುತ್ತದೆ. ಈ ಪ್ರತಿಯೊಂದು ರೂಪದಲ್ಲಿ ಈ ತರಹ ಅವಕಾಶ ಕೊಟ್ಟಿದ್ದಾರೆ, ಹಳೆಯ ಹೈದರಾಬಾದ್ ರಾಜ್ಯದಲ್ಲಿ ಒಂದು ಮುಲ್ಕಿ ರೂಲ್ ಎಂದಿತ್ತು. ಅಲ್ಲಿ ಸ್ಥಳೀಯರಿಗೆ ಸೇವೆಯಲ್ಲಿ ಅವಕಾಶ ಕೊಡುವುದು. ದುರ್ದೈವದಿಂದ ಇದು ಭಾಷಾವಾರು ಪ್ರಾಂತ್ಯವಾದ ನಂತರ--

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಈ ರಾಜ್ಯ ಪ್ರತ್ಯೇಕವಾಗಿ ವಿಂಗಡಣೆ ಆದ ನಂತರ ಉತ್ತರ ಕರ್ನಾಟಕ ಎರಡನೇ ರಾಜಧಾನಿ ಆಗಬೇಕು ಎಂದು ಬಹಳಷ್ಟು ಜನ ನಿರೀಕ್ಷೆ ಮಾಡಿದ್ದರು. ನಮ್ಮ ಸಮಸ್ಯೆಗಳು ಪರಿಹಾರ ಆಗಬೇಕೆಂದೂ ಸಹ ನಿರೀಕ್ಷೆ ಮಾಡಿದ್ದರು. ಸಮ್ಮಿಶ್ರ ಸರ್ಕಾರ ಬಂದ ಮೇಲೆ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು, ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪನವರು ಇವತ್ತು ಬೆಳಗಾವಿಗೆ ಅಧಿವೇಶನವನ್ನು ಮಾಡಬೇಕೆಂದು ಹೇಳಿ ನಿರ್ಧಾರ ಮಾಡಿದ ಮೇಲೆ ಬೆಳಗಾವಿ ಹುಬ್ಬಳ್ಳಿಯ ಜನ ಹುಬ್ಬಿಗೆ ಕೈ ಹಚ್ಚಿಕೊಂಡು ನೋಡಿಕೊಂಡು ಕುಳಿತಿದ್ದರು. ಸರ್ಕಾರ ಬೆಳಗಾವಿಗೆ ಬರುತ್ತದೆ, ನಾಡಿನ ನಾಯಕರೆಲ್ಲರೂ ಬೆಳಗಾವಿಗೆ ಬರುತ್ತಾರೆ. ನಮ್ಮ ಸಮಸ್ಯೆ ಪರಿಹಾರವಾಗುತ್ತದೆಂದು ಕಾದಿದ್ದರು. ಇಲ್ಲಿ ಚರ್ಚೆಗೆ ಆಗಬೇಕಾದದು ಬಹಳ ಮಹತ್ವದ್ದು, ಏಕೆಂದರೆ ನದಿ ಇದ್ದರೂ ಕುಡಿಯಲಿಕ್ಕೆ ನೀರು ಇಲ್ಲ, ನೀರಿದ್ದರೂ ಭೂಮಿಗೆ ನೀರಾವರಿ ಆಗಲಿಲ್ಲ. ಬರ ಇದ್ದರೂ ಬರಗಾಲ ನಿವಾರಣೆ ಮಾಡಲಿಕ್ಕೆ ಸಮಸ್ಯೆಗಳ ಬಗ್ಗೆ ಚರ್ಚೆ ಆಗಲಿಲ್ಲ. ದ್ರಾಕ್ಷಿ, ದಾಳಿಂಬೆ, ಲಿಂಬೆ ಬೆಳೆಯತಕ್ಕಂಥ ಬಿಜಾಪುರ ಬಾಗಲಕೋಟೆ, ಗುಲಬರ್ಗಾ, ಬೆಳಗಾವಿ ಬೀದರ್ ಸೇರಿ, ಯಾವ ರೀತಿ ಅದನ್ನು ಸಂಸ್ಕರಣೆ ಮಾಡಬೇಕು. ರೈತರು ಬೆಳೆದಂತಹ ಬೆಳೆಗೆ ಹೆಚ್ಚಿನ ಬೆಲೆ ಸಿಗಬೇಕು. ರೈತನ ಬೆವರಿನ ಬೆಲೆ ಹೆಚ್ಚಾಗಬೇಕು ಅನ್ನುವಂಥದ್ದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ದುರ್ದೈವ ಆಗಲಿಲ್ಲ. ಇವತ್ತು ನಾವು ಬೆಳಗಾವಿ ಭಾಗದಲ್ಲಿ

ಹೆಚ್ಚಿಗೆ ಕಬ್ಬನ್ನು ಬೆಳೆಯುತ್ತೇವೆ. ಕಬ್ಬು ಬೆಳೆದು ಕೇವಲ ಸಕ್ಕರೆ ಉತ್ಪಾದನೆ ಮಾಡುತ್ತಿದ್ದೇವೆ, ಆದರೆ ಅದರ ಬೈಪ್ರಾಡಕ್ಟ್ ಏನೇನು ಮಾಡಬೇಕೆಂಬುದರ ಬಗ್ಗೆ ಸಲಹೆ ಸೂಚನೆಗಳನ್ನು ಕೊಡಬೇಕಾಗುತ್ತದೆ.

ಶ್ರೀ ವೈಜನಾಥ್ ಪಾಟೀಲ್ : ಅಧ್ಯಕ್ಷರೇ, ಅವರು ಸ್ಪೆಷಲ್ ಟೈಮ್ ತೆಗೆದುಕೊಂಡು ಮಾತನಾಡಲಿ.

ಶ್ರೀ ಗೋವಿಂದ. ಎಂ. ಕಾರಜೋಳ : ಒಂದು ನಿಮಿಷ ಮುಗಿಸುತ್ತೇನೆ. ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಬಂದ ನಂತರ ನಿಜಲಿಂಗಪ್ಪನವರು ಉತ್ತರಕರ್ನಾಟಕದಿಂದ ಆರಿಸಿ ಬಂದರು, ಜತ್ತಿ, ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಮತ್ತು ಧರಂಸಿಂಗ್ ಸಾಹೇಬರು ನಮ್ಮ ಉತ್ತರಕರ್ನಾಟಕದಿಂದ ಮುಖ್ಯಮಂತ್ರಿಗಳಾದರು. ಆದರೆ ಇಷ್ಟು ವರ್ಷಗಳಾದರೂ ನಾವು ಸರಿಯಾಗಿ ಉಪಯೋಗ ತೆಗೆದುಕೊಳ್ಳಲಿಕ್ಕಾಗಲಿಲ್ಲವೆಂದರೆ ಬಹಳ ದುರ್ದೈವದ ಸಂಗತಿ. ಇದರ ಬಗ್ಗೆ ಸ್ವಲ್ಪ ಚರ್ಚೆಯಾಗಲಿ.

ಶ್ರೀ ವೈಜನಾಥ್ ಪಾಟೀಲ್ : ಯಾರಿಗೂ ಕರ್ನಾಟಕ ಎಂದು ಹೆಸರಿಡಲಿಕ್ಕೆ ಧೈರ್ಯ ಆಗಲಿಲ್ಲ. ವೀರೇಂದ್ರಪಾಟೀಲರು ಮೈಸೂರಿನ ಮುಖ್ಯಮಂತ್ರಿಯಾದರು, ಮತ್ತೆ ಆನಂತರ ಕರ್ನಾಟಕದ ಮುಖ್ಯಮಂತ್ರಿಯಾದರು. ಮೈಸೂರನ್ನು ಕರ್ನಾಟಕವೆಂದು ಹೆಸರು ಚೇಂಜ್ ಮಾಡಬೇಕಾದರೆ ದೇವರಾಜ ಅರಸು ಮಾಡಿದರು. ಏಕೆಂದರೆ, ಎಲ್ಲರೂ ಈ ಕಡೆಯವರ ಕಂಟ್ರೋಲ್ ನಲ್ಲಿದ್ದರು ಇವರ clutches ನಲ್ಲೇ ಇದ್ದರು. ಈಗಲೂ ಅದೇ ಪರಿಸ್ಥಿತಿ ಮುಂದುವರಿಯುತ್ತಿದೆ. ಆ ದೃಷ್ಟಿಯಿಂದ ಈಗ ನೀರಾವರಿ ವಿಷಯ ತೆಗೆದುಕೊಳ್ಳುತ್ತೇನೆ. ನೀರಾವರಿ ಹಂಚಿಕೆಯಲ್ಲಿ ಬಚಾವತ್ ಟ್ರಿಬ್ಯುನಲ್ ಕೂತಿತ್ತು. ಇದು ತಮಗೆಲ್ಲಾ ಗೊತ್ತಿದೆ. ಈಗ ನಮ್ಮಲ್ಲಿ ಎರಡು ವಿಷಯಗಳು ಮುಖ್ಯವಾಗಿದೆ. ಕಾವೇರಿ ಬೇಸಿನ್ ಮತ್ತೊಂದು ಕೃಷ್ಣ ಬೇಸಿನ್. ಕೃಷ್ಣಬೇಸಿನ್ ನೀರು ಹಂಚಿಕೆಯಲ್ಲಿ ಜಸ್ಟೀಸ್ ಬಚಾವತ್‌ರವರ ಅಧ್ಯಕ್ಷತೆಯಲ್ಲಿ ಒಂದು ನ್ಯಾಯಮಂಡಳಿ ಸ್ಥಾಪನೆಯಾಗಿತ್ತು. 1969 ರಲ್ಲಿ ಆಗಿತ್ತು. 1969ರಿಂದ 75 ರ ತನಕ ಎರಡು ರಿಪೋರ್ಟ್ ಕೊಟ್ಟರು. ಒಂದು ಇಂಟಿರೀಮ್ ರಿಪೋರ್ಟ್ 1973 ರಲ್ಲಿ ಕೊಟ್ಟರು, ಫೈನಲ್ ರಿಪೋರ್ಟ್ 1975 ರಲ್ಲಿ ಕೊಟ್ಟರು. 25 ವರ್ಷಗಳಲ್ಲಿ ಯಾವರೀತಿ ನದಿ ನೀರು ಹಂಚಬೇಕು, ಯಾವ ಯಾವ ಪ್ರಾಜೆಕ್ಟ್ ಕಂಪ್ಲೀಟ್ ಮಾಡಬೇಕೆಂದು ಡೈರೆಕ್ಷನ್ ಕೊಟ್ಟು ಅವರು ಆರ್ಡರ್ ಕೊಟ್ಟರು, ಆಗಲೇ ನಮ್ಮ ಮೇಲೆ ಸಾಕಷ್ಟು ಬಹಳ ಅನ್ಯಾಯವಾಯಿತು. ಈ ನೀರು ಹಂಚಿಕೆಯಲ್ಲಿ ಗೈಡ್‌ಲೈನ್ಸ್ ಏನಿತ್ತೆಂದರೆ ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ, ಇಲ್ಲಿಗೆ ನೀರು ಹಂಚಿಕೆ ಹೇಗೆ ಆಗಬೇಕು ಎಂದರೆ ಆಯಾ ಏರಿಯಾ ಜನಸಂಖ್ಯೆ, ವಿಸ್ತೀರ್ಣ, ಅವಶ್ಯಕತೆ ಇದನ್ನೆಲ್ಲಾ ನೋಡಬೇಕೆಂದಿತ್ತು.

(ಅಡಚಣೆ)

ಶ್ರೀ ವೈಜನಾಥ್ ಪಾಟೀಲ್ : ಬೇರೆಯವರಿಗೆಲ್ಲಾ ಒಂದು ಗಂಟೆ ಅವಕಾಶ ಕೊಟ್ಟಿದ್ದೀರಿ, ನಮಗೆ ಏಕೆ ಹೀಗೆ ಮಾಡುತ್ತೀರಿ? ನಂಜುಂಡಪ್ಪ ವರದಿ ಸ್ಥಾಪನೆ ಮಾಡಲಿಕ್ಕೆ ನಾವೇ ಕಾರಣರಾಗಿದ್ದೇವೆ

ನಮ್ಮನ್ನೇ ನೀವು ಕಂಟ್ರೋಲ್ ಮಾಡುತ್ತೀರಿ. ಆ ದೃಷ್ಟಿಯಿಂದ, 1975ರಲ್ಲಿ Bachavat Tribunal ನಿಂದ ನಮಗೆ ಅನ್ಯಾಯವಾಯಿತು. ಆದರೆ ಆಗ ಯಾವುದು ಪ್ರತಿಭಟನೆ ಆಗಲಿಲ್ಲ. 1973ರಲ್ಲಿ first report ಬಂತು. ಯಾವುದೂ ಅನ್ಯಾಯವಾಗಲಿಲ್ಲ. Cauvery tribunal interim ಬಂತು, ಬಂಗಾರಪ್ಪನವರು ಮುಖ್ಯಮಂತ್ರಿಯಿದ್ದಾಗ. Cauvery basin ನಲ್ಲಿ ಕರ್ನಾಟಕದವರಿಗೆ ಅನ್ಯಾಯವಾಗಿದೆ ಅಂತ ಬಹಳ ದೊಡ್ಡ ಆಂದೋಲನವಾಯಿತು. ಬಂಗಾರಪ್ಪನವರು ಕರ್ನಾಟಕ ಬಂದ್ ಮಾಡಿದರು. ಅವರೇ ಮುಖ್ಯಮಂತ್ರಿ, ಅವರದೇ ಕೇಂದ್ರ ಸರ್ಕಾರ, ordinance ತಂದರು, ಆಗ ಗುಲ್ಬರ್ಗಾ ಬೀದರ್‌ನವರು ನಾವೆಲ್ಲಾ ಬಂದ್ ಮಾಡಿದೆವು. Cauvery basin ನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಅಂತ, ನಾವೆಲ್ಲಾ ಅದರಲ್ಲಿ ಭಾಗಿಯಾಗಿದ್ದೇವೆ. ಆದರೆ ಬಚಾವತ್‌ನಲ್ಲಿ ನಮಗೆ ಅನ್ಯಾಯವಾದಾಗ ಯಾವುದೇ protest ಮಾಡಲಿಲ್ಲ. ಆಲಮಟ್ಟಿ ನೀರಾವರಿ ಯೋಜನೆಯಲ್ಲಿ ನಮಗೆಲ್ಲಾ ಅನ್ಯಾಯವಾಯಿತು. ಆಂಧ್ರದವರು Supreme Courtಗೆ ಹೋಗಿ ಸ್ಟೇ ತಂದರು. 524ರ ಎತ್ತರ ಏರಿಸಬಾರದು ಅಂತ injunction order ತಂದರು. ಆಗ ಕೂಡ ನಮ್ಮಲ್ಲಿ ಆಲಮಟ್ಟಿ ಹೋರಾಟ ಆಯಿತು. ಅದರಲ್ಲೂ ಯಾರೂ help ಮಾಡಲಿಲ್ಲ.

ಅಧ್ಯಕ್ಷರು : ಈ ರೀತಿ ಆದರೆ recordಗೆ ಹೋಗುವುದಿಲ್ಲ ಅಂತ ನಾನು ಹೇಳಬೇಕಾಗುತ್ತದೆ. ನೀವೆಷ್ಟು ಹೇಳಿದರೂ ಕೇಳುವುದಿಲ್ಲವಲ್ಲಾ. ಆಯಿತು recordಗೆ ಹೋಗುವುದಿಲ್ಲಾರಿ ಅವರದ್ದು. ನಿಮ್ಮದೇನಾಗಿದೆ ಅಂದರೆ ನಿಮ್ಮದೇ ಆದ ದುನಿಯ, ನೀವು ಏನು ಹೇಳುತ್ತೀರೋ ಅದೇ ಹುಕುಂ. 10 ನಿಮಿಷ ಮಾತನಾಡಿ ಅಂದರೆ ನಿಮ್ಮದು ಅದೇ ಕತೆ, ಎಲ್ಲವನ್ನೂ ಮುರಿಯುವುದು ಶಿಸ್ತಿಲ್ಲ.

ಶ್ರೀ ವೈಜನಾಥ ಪಾಟೀಲ : ಕೇಳ್ರಿ ಸ್ವಲ್ಪ..

ಅಧ್ಯಕ್ಷರು : ಏನು ಕೇಳುವುದು? ಬಹಳ ಜನ ಮಾತನಾಡಬೇಕಾಗಿದೆ. 22 ನಿಮಿಷ ಮಾತನಾಡಿದ್ದೀರಿ. ಈಗ ಒಂದ್ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವೈಜನಾಥ ಪಾಟೀಲ್ : ಇದು ಉತ್ತರ ಕರ್ನಾಟಕದ್ದು, ಇಲ್ಲಿ ನಮಗೆ ಸ್ವಲ್ಪ ಅವಕಾಶ ಕೊಡಬೇಕು. ಈಗ ಹೊಸ ಸರ್ಕಾರ ಬಂದಿದೆ, ಮುಖ್ಯಮಂತ್ರಿ ಕುಮಾರಸ್ವಾಮಿಯವರು ತಿಳಿದುಕೊಳ್ಳಬೇಕು. ಕಾವೇರಿಗೆ ಅನ್ಯಾಯ ಆದಾಗ ಜನ ಎಷ್ಟು ಸ್ಪಂದಿಸುತ್ತಾರೆ ಅದೇ ತರಹ ಕೃಷ್ಣೆಗೆ ಆದಾಗ ಸ್ಪಂದಿಸಬೇಕು. Supereme Court ನಿಂದ ನಮಗೆ ಅನ್ಯಾಯವಾಯಿತು, 524tmc ನೀರು ಸಿಕ್ಕಬೇಕಾದ್ದು 519ಕ್ಕೆ ಬಂತು.

ಅಧ್ಯಕ್ಷರು : ಹೀಗಾದರೆ ಯಾವರೀತಿ ಕಲಾಪ ನಡೆಸುವುದು? ಸಮಯ ಸಾಕಷ್ಟು ಕೊಟ್ಟಿದ್ದೇನೆ. ಮುಗಿಸಿ.

ಶ್ರೀ ವೈಜನಾಥ್ ಪಾಟೀಲ : 5 ನಿಮಿಷದಲ್ಲಿ ಮುಗಿಸುತ್ತೇನೆ. ಈಗ ನಂಜುಂಡಪ್ಪ ವರದಿಯನ್ನು ಸರ್ಕಾರ ಒಪ್ಪಬೇಕು. ಇವತ್ತು ಮುಖ್ಯಮಂತ್ರಿಯವರು declare ಮಾಡಬೇಕು. ಮತ್ತೆ ಹೋದ ಎರಡು ವರ್ಷದಲ್ಲಿ ಯಾವ್ಯಾವುದಕ್ಕೆ ಎಷ್ಟು ಖರ್ಚಾಗಿದೆ ಅಂತ ಮುಖ್ಯಮಂತ್ರಿಯವರು ಒಂದು white paper ಹೊರಡಿಸಬೇಕು. ಸುಮ್ಮನೆ ಬಂದು ನಾವೂ ಅಧಿವೇಶನ

ನಡೆಸಿ ಎಲ್ಲಾ ಕಡೆ ಹೋಗಿ ಮನೆಯಲ್ಲಿ ಮಲಗಿಕೊಂಡೆವು ಎಂಬುದು ಅಷ್ಟೇ ಅಲ್ಲ. ಹಳ್ಳಿಗಳ ಸಮಸ್ಯೆ ಮುಖ್ಯವಿದೆ. ನೀವು ಇಲ್ಲಿ session ನಡೆಸಿದ್ದನ್ನು ಸ್ವಾಗತ ಮಾಡುತ್ತೇವೆ. ಅದೇ ಪ್ರಕಾರ "ನಂಜುಂಡಪ್ಪ ವರದಿ in toto ಸರ್ಕಾರ ಒಪ್ಪಿಕೊಂಡಿದೆ" ಅಂತ ಒಂದು ಐತಿಹಾಸಿಕ ಘೋಷಣೆ ಮಾಡಬೇಕು. ಬೇರೆ Eye wash ಜರೂರತ್ ಇಲ್ಲ. ಮಾತನಾಡುವಾಗ disturb ಮಾಡಿ ಯಾವ point ಹೇಳಬೇಕಾಗಿತ್ತೋ ಅದು ಹೇಳಲಾರದಂತೆ ಮಾಡುತ್ತಾರೆ, ಉದ್ದೇಶ ಪೂರ್ವಕವಾಗಿ.

ಅಧ್ಯಕ್ಷರು : ಆಯಿತು ನಿಲ್ಲಿಸಿ ಮುಗಿಸಿ. ಈಗ ಈ ವಿಷಯ ಮುಕ್ತಾಯವಾಗಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಮತ್ತಿತರರ ಸಲುವಾಗಿ ಭೋಜನ ಏರ್ಪಾಡು ಮಾಡಿದ್ದೇನೆ. ಎಲ್ಲರೂ ಆಗಮಿಸಬೇಕು. ಈಗ ಸದನವನ್ನು 3–00 ಘಂಟೆಯವರೆಗೆ ಮುಂದೂಡಲಾಗಿದೆ.

ಸಭೆಯನ್ನು 1 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸೇರಲು ನಿರ್ಧರಿಸಿತು

(ಸದನವು ಪುನಃ ಮಧ್ಯಾಹ್ನ 3 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

5– ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಧ್ಯಕ್ಷರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 104ರ ಮೇರೆಗೆ ವಿಧಾನ ಪರಿಷತ್ತು "2006ರ ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಈ ದಿನ 29.9.2006ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿರುತ್ತದೆಂದು ತಿಳಿಸಿರುತ್ತಾರೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ಬರ. ಡಾ. ನಂಜುಂಡಪ್ಪ ವರದಿಗಳ ಮೇಲೆ ಮಾತನಾಡಲು ಅವಕಾಶ ನೀಡುವ ಬಗ್ಗೆ.

ಶ್ರೀ ವಾಟಾಳ್‌ನಾಗರಾಜ್ : ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಆ ಕಡೆಯಿಂದ ಮತ್ತು ಈ ಕಡೆಯಿಂದ ಕೆಲವರು ಮಾನ್ಯ ಸದಸ್ಯರು ಮಾತನಾಡಬೇಕೆಂದು ಬಯಸಿರುತ್ತಾರೆ. ಇದರ ಬಗ್ಗೆ ಈಗಾಗಲೇ 6–7 ಗಂಟೆ ಚರ್ಚೆಯಾಗಿದೆ. ಆದ್ದರಿಂದ ಚರ್ಚೆ ಇಲ್ಲಿಗೆ ಸಾಕು. ಮೆಜಾರಿಟಿ ಸದಸ್ಯರುಗಳು ಅವರವರ ಭಾವನೆಗಳನ್ನು ಹೇಳಿದ್ದಾರೆ. ನಮ್ಮ ಕಷ್ಟವನ್ನೂ ಸಹ ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಹೆಚ್. ನಿಂಗಪ್ಪ : ಐದೈದು ನಿಮಿಷ ಮಾತನಾಡಲು ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು : ಐದು ನಿಮಿಷ ಕೊಡೋಣ.

(ಅಡಚಣೆ)

ಶ್ರೀ ಎಸ್.ಎಸ್ ಪಾಟೀಲ್ : ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.